"श्रीपतिर्मानदो नः"

# ಶ್ರೀಹರಿದಾಸಭಾರತೀ

ಶ್ರೀಹರಿದಾಸಸಾಹಿತ್ಯ ಮತ್ತು ಹರಿಭಕ್ತರ ಚರಿತ್ರೆಗಳ ಮೂಲಕ
ಶ್ರೀಮಧ್ವಸಿದ್ಧಾಂತಪ್ರಚಾರಕ್ಕಾಗಿ ಮೀಸಲಾದ ಮಾಸಪತ್ರಿಕೆ


| ಸಂಪುಟ | | ಸಂಚಿಕೆ |
|---|---|---|
| ೬ | ೧೯೫೬—ಏಪ್ರಿಲ್ | ೬ |


❀


ಸಂಪಾದಕರು ಮತ್ತು ಪ್ರಕಾಶಕರು :

**ಹರಿದಾಸರತ್ನಂ ಗೋಪಾಲದಾಸರು**

ರಾಘವೇಂದ್ರಕಾಲೊನಿ, ಚಾಮರಾಜಪೇಟೆ
ಬೆಂಗಳೂರು 2


**ವಾರ್ಷಿಕಚಂದಾ ಮೂರು ರೂಪಾಯಿಗಳು**

# ವಿಷಯಾನುಕ್ರಮಣಿಕೆ


| | | |
|---|---|---|
| | | ಪುಟ |
| ಪ್ರಸಾದಿಕವಾಣೀ | ... ... | ೧ |
| ಸಂಪಾದಕೀಯ | ... ... | ೨ |
| ಹರಿದಾಸರ ಸೂಕ್ಷ್ಮಸೃಷ್ಟಿ<br>— ಡಾ॥ ಕೆ. ಎಂ. ಕೃಷ್ಣರಾವ್, ದಾವಣಗೆರೆ. | ... ... | ೩ |
| ವಿಜಯಾಂಕರತ್ನ-೫—ಶ್ರೀಹರಿದಾಸರ ಉಗಾಭೋಗಗಳು | ... | ೧೭-೨೪ |
| ಶ್ರೀಮದಾನಂದತೀರ್ಥಭಗವತ್ಪಾದರು<br>— ಶ್ರೀ ಅದ್ದೆ ವೇದವ್ಯಾಸಾಚಾರ್ಯರು, ಉಡುಪಿ. | ... | ೪೧-೪೮ |
| ಶ್ರೀಕೃಷ್ಣಾರ್ಜುನಸಂವಾದ<br>— ಶ್ರೀ ಭೀಮರಾವ್, ದಾವಣಗೆರೆ | ... | ೨೭೩-೨೮೮ |


---

ಚಂದಾಹಣವನ್ನು ಕಳಿಸುವಾಗ ಅನೇಕರು ಮನಿಯಾರ್ಡರ್ ಕೂಪನ್ನಿನ ಹಿಂದೆ ಅಡ್ರೆಸ್ಸನ್ನು (ಪತ್ತೆ) ಬರೆಯದೆಯಿರುವುದರಿಂದ ಅದು ಯಾರ ಹಣವೆಂಬುದನ್ನು ತಿಳಿಯಲು ಸಾಧ್ಯವಿಲ್ಲವಾಗಿದೆ. ಮುಂದೆ ಯಾರೂ ಹೀಗೆ ಮಾಡಲಾರರೆಂದು ನಂಬಿದ್ದೇವೆ.

— ಸಂ.

॥ "श्रीपतिर्मानदो नः" ॥

# ಶ್ರೀಹರಿದಾಸಭಾರತಿಯ ಗ್ರಾಹಕರು ಗಮನಿಸಬೇಕಾದ ಮುಖ್ಯಾಂಶಗಳು.

1. ಪ್ರತಿ ನೊವೆಂಬರ್ ತಿಂಗಳಿನಿಂದ ಅಕ್ಟೋಬರ್ ತಿಂಗಳಿಗೆ ಪತ್ರಿಕೆಯ ಒಂದು ವರ್ಷ.

2. ಪ್ರತಿ ಇಂಗ್ಲಿಷ್ ತಿಂಗಳ ಕೊನೆಯ ದಿನವೇ ಪತ್ರಿಕೆಯು ನಮ್ಮಿಂದ ರವಾನಿಸಲ್ಪಡುತ್ತದೆ.

3. **ಪತ್ರಿಕೆಯು** ಯಾವಕಾರಣದಿಂದಲೇ ಆಗಲಿ ೧-ನೇ ತಾ|| ನಲ್ಲಿ ತಲುಪದಿದ್ದರೆ ಆ ತಿಂಗಳ ೧೦ ತಾರೀಖಿನೊಳಗೇ ಪತ್ರ ಬರೆದರೆ ಇನ್ನೊಂದು ಪ್ರತಿಯನ್ನು **ಉಚಿತವಾಗಿ** ಕಳಿಸುತ್ತೇವೆ. ಅನಂತರ ಬರೆಯುವವರು **೫ ಆಣೆಯ** ಅಂಚೆಚೀಟಿಯನ್ನೋ ಅಥವಾ ಹಣವನ್ನೋ ಕಳಿಸಿ ತಿಳಿಸಬೇಕು; **ಹಾಗಿಲ್ಲದಿದ್ದರೆ ಉತ್ತರವನ್ನೂ ನಿರೀಕ್ಷಿಸಬಾರದು.**

4. **ಪತ್ರಿಕೆಯು ಬೇಡವಾದರೆ** ಬಾಕಿಯಿರುವಹಣ ಕಳಿಸಿ ಮನಿ-ಆರ್ಡರ್ ಕೂಪನ್ನಿನಲ್ಲಿ ಮುಂದೆ ಬೇಡವೆಂದು ಬರೆದರೆ ಸಾಕು.

5. **ಹೊಸದಾಗಿ ಗ್ರಾಹಕರಾಗಬಯಸುವವರು** ವಾರ್ಷಿಕಚಂದಾ **ಮೂರು ರೂಪಾಯಿಗಳನ್ನು ಕಳಿಸಿಯೇ** ಪತ್ರಿಕೆ ಕಳಿಸಲು ಬರೆಯಬೇಕು. ಅವರು ಆ ವರ್ಷದ ಪ್ರಥಮ ಸಂಚಿಕೆಯಿಂದ ಎಲ್ಲ ಸಂಚಿಕೆಗಳನ್ನೂ ಪಡೆಯಲೇ ಬೇಕು.

Reg. No. M. 5766

## ಆಶ್ರಯದಾತೃಗಳು (ಪ್ರತಿವರ್ಷ ೨೫ ರೂಗಳಂತೆ)

ಶ್ರೀ ಶ್ರೀ ಪೇಜಾವರಮಠಾಧೀಶರಾದ ಶ್ರೀ ಮದ್ವಿಶ್ವೇಶತೀರ್ಥ-ಶ್ರೀಪಾದಂಗಳವರು ಪ್ರತಿವರ್ಷದಂತೆ ಈ ವರ್ಷವೂ ೨೫ ರೂಪಾಯಿಗಳನ್ನು ಫಲಮಂತ್ರಾಕ್ಷತೆಯೊಂದಿಗೆ ದಯಪಾಲಿಸಿ ನಮ್ಮ ಪತ್ರಿಕೆಯ ಅಭಿವೃದ್ಧಿಯನ್ನು ಆಶಿಸಿದ್ದಾರೆ. ಶ್ರೀಗಳವರ ಪ್ರೋತ್ಸಾಹಕ್ಕೆ ನಾವು ಕೃತಜ್ಞತೆಯನ್ನು ಅರ್ಪಿಸಿ ನಮಿಸುತ್ತೇವೆ.

—ಸಂ.

★

ಈ ಕೆಳಕಂಡ ಮಹಾಶಯರುಗಳು ಪ್ರತಿವರ್ಷದಂತೆ ಈ ವರ್ಷವೂ ೫-೫ ರೂಗಳಂತೆ ಕೊಟ್ಟು ನಮ್ಮ ಪತ್ರಿಕೆಯ ಅಭಿಮಾನಿವರ್ಗದಲ್ಲಿದ್ದು ಪ್ರೋತ್ಸಾಹಿಸುತ್ತಿರುವುದಕ್ಕಾಗಿ ಶ್ರೀಹರಿಗುರುಗಳು ಅವರನ್ನು ವಿಶೇಷರೀತಿಯಿಂದ ಅನುಗ್ರಹಮಾಡಲೆಂದು ಹಾರೈಸುತ್ತೇವೆ.

೧. ಶ್ರೀ ಪಿ. ಎಸ್. ರಾಮಚಂದ್ರರಾವ್, ಮೈಸೂರು ಮಿಲ್ಸ್, **ಬೆಂಗಳೂರು**

೨. ಶ್ರೀ ಕೆ. ಜಿ. ಗುಡ್ಡದ, **ಬಾಗಿಲುಕೋಟೆ.**

೩. ಶ್ರೀ ವಿ. ಕೆ. ಜೋಷಿ, **ಕಲ್ಯಾಣ್.**

—ಸಂ.

Edited and Published by *Haridasaratnam* Sri Gopaldas at Sri Raghavendra Colony, and Printed by D. S. Krishnachar at Prabha Printing House, Basavangudi, Bangalore-4.

**ವಿಜಯೋಂಕರತ್ನ ೫—ಶ್ರೀಹರಿದಾಸರ ಉಗಾಭೋಗಗಳು**

# ಹರಿದಾಸರಲ್ಲಿ ಆದ್ಯರ ಉಗಾಭೋಗಗಳು

## ಶ್ರೀಅಚಲಾನಂದದಾಸಾರ್ಯರವು

೧ ಹರೇ ಗೋವಿಂದ ಎಂದೇಳು
ಹರುಷದಿ ಹತ್ತವತಾರನ ಮನದೊಳು ಪೇಳು
ಗೆರೆ ಕರದೂರ್ಧ್ವ ಕಂಡು ತುಲಸಿ ಗೋ ವಿಪ್ರರಿಗೆ ಎರಗು
ಮೂಡಲಪಡೆಸೆಗ ನಡೆ ನಿರಋತಿಯಲ್ಲಿ
ತೃಣವಿಟ್ಟು ಶೌಚಮಾಡು
ಗುರುಪವಮಾನನೊಡೆಯ **ಅಚಲಾನಂದವಿಠ್ಠಲ**ಹರಿಯ
ಚರಣಸೇವಕನಾಗಿ ನೀ ಬಾಳು ||೧||

೨ ಕೃಷ್ಣಾಜಿನ ಜಪಾಸನ ಜ್ಞಾನಸಿದ್ಧಿ
ಶ್ರೇಷ್ಠವ್ಯಾಘ್ರದ ಚರ್ಮದಿ ಮೋಕ್ಷವಯ್ಯ
ನಿಷ್ಠೆಯಿಂದಲಿ ಕಂಬಳಾಸದಿ ಭಾಗ್ಯ
ಕಾಷ್ಠವೆ ನಿರ್ಭಾಗ್ಯ ಧರಣಿ ದುಃಖ
ಅಷ್ಟೈಶ್ವರ್ಯ ನೀಗಿಸುವುದು
ಕುಷ್ಟರೋಗ ಪಾಷಾಣದಲ್ಲಿ
ಇಟ್ಟು ಆಸನವಿಧಿಯ **ಅಚಲಾನಂದವಿಠ್ಠಲ**
ಘಟ್ಯಾಗಿ ಪೇಳಿಹನು ತಿಳಿಯಿರಯ್ಯ ||೨||

೩ ಭಯವೆಂಬೊ ಗಜಕೆ ಪಂಚಾನನ ಹರಿನಾಮ
ಭಯವೆಂಬೊ ಗಿರಿಗೆ ವಜ್ರವಯ್ಯ ಹರಿನಾಮ
ದುಃಖವೆಂಬೊ ಶರಧಿಗೆ ಬಡಬಾನಲ ಹರಿನಾಮ
ಕೇಳಯ್ಯ, ದೇವ ನಮ್ಮ **ಅಚಲಾನಂದವಿಠ್ಠಲ** ||೩||

೪ ಕೊಡಲಿಬೇಕು ಪಾಪದಬೇರ ಕಡಿವಡೆ
ಕೊಡಲಿಬೇಕು ಗುರುಹಿರಿಯರ ಕೈಯ್ಯಲಿ
ಕೊಡಲಿಬೇಕು ಸತ್ಪಾತ್ರರಿದ್ದೆಡೆಯಲಿ
ಕೊಡಲಿಲ್ಲ ಕೊಡಲಿಲ್ಲ ಕೊಡಲಿಲ್ಲದವಗೆ
ಕೊಡಲಿಲ್ಲ ಎನ್ನೊಡೆಯ
ಕೇಳೋ **ಅಚಲಾನಂದವಿಠ್ಠಲ** ||೪||

೫ ಚಂದ್ರಕಾಂತದ ಕರಡಿಗಿಯೊಳಗೆ ಇಂದ್ರನೀಲದಿಂದೆಸೆವ
ಕುಂದಕುಡ್ಮಲಪ್ರಜ್ವಲಿತ ಇಂದೀವರಶ್ಯಾಮ ಕೋಮಲಾಂಗ
ಚಂದದಿಂದೆನ್ನ ಮನದಿಂದಗಲದಿರು ಹರಿ ನಿನ್ನ ಸಿರಿಚರಣವಿರಲಿ
**ಅಚಲಾನಂದವಿಠ್ಠಲ** ಬೇಲೂರ ಚನ್ನರಾಯ ||೫||

೬ ಧನದಾಸೆ ದೈನ್ಯವಂ ಬಡಿಸುತಿದೆ
ವನಿತೆಯರ ಆಸೆನ್ನ ಓಡ್ಯಾಡಿಸುತಲಿದೆ
ಮನದಾಸೆ ಮನ್ನಣೆಗೆಡಿಸುತಿದೆ
ಇನಿತಾಸೆ ಬಿಡಿಸಿ ನಿನ್ನ ಚರಣಕಮಲದಲ್ಲಿ
ಇರಿಸೋ ದೇವ **ಅಚಲಾನಂದವಿಠ್ಠಲ** ||೬||

೭ ಬೆಟ್ಟದಂಥ ದುರಿತವು ಸುತ್ತುಮುತ್ತು ಕವಿದಾಗ
ಕೃಷ್ಣನಾಮ ಕಿಡಿಬಿದ್ದು ದುರಿತ ಬೆಂದುದ ಕಂಡೆ
ಎಲೆ ಎಲೆ ದುರಿತವೆ ತಿರುಗಿ ನೋಡದೆ ಪೋಗು
ಜವನ ಮೃತ್ಯುವಿನ ದೂತರಿಗೆ ಗಂಟಲಗಾಣ
ದಾತರದಾತ **ಅಚಲಾನಂದವಿಠ್ಠಲ**
ಎನ್ನೊಡೆಯ ಕಂಡರೆ ನಿನ್ನ ಶಿರವ ಚಂಡಾಡುವ ||೭||

೮ ಪಾತಕರೊಳಗೆಲ್ಲ ನಾನು; ವೆಗ್ಗಳನಯ್ಯ
ಪ್ರಾಯಶ್ಚಿತ್ತಕ್ಕೆ ನಿನ್ನ ನಾಮವೆಗ್ಗಳವಯ್ಯ
ಪಾತಕ ಎನಗಿಲ್ಲ ಪ್ರಾಯಶ್ಚಿತ್ತ ನಿನ್ನ ನಾಮಾ
ಇರಲಿಕ್ಕೆ ಇನ್ಯಾತರಭಯವೊ **ಅಚಲಾನಂದವಿಠ್ಠಲ** ||೮||

೯ ಬೆಲ್ಲದ ಕಟ್ಟೆಯು ಕಟ್ಟಿ ಬೇವಿನ ಬೀಜವ ಬಿತ್ತಿ
ಜೇನುಮಳೆಗರೆದರೆ ವಿಷಹೋಗಬಲ್ಲದೆ
ಅಲ್ಲದ ಮನುಜಂಗೆ ಅಸಮತತ್ವಂಗಳು
ಹಲವು ಪೇಳಿದರೇನು ಕೆಲವು ಕೇಳಿದರೇನು
ಕೊಳಲ ಧ್ವನಿಗೆ ಸರ್ಪ ತಲೆದೂಗುವಂತೆ
ಎನ್ನೊಡೆಯ ಕೇಳ**ಚಲಾನಂದವಿಠ್ಠಲ**ರೇಯ ||೯||

೧೦ ಅಂಬರದಾಳವನ್ನು ರವಿಶಶಿಗಳಲ್ಲದೆ ತಳದೊಳಾಡುವ ಪಕ್ಷಿ ತಾವು ಬಲ್ಲವೆ
ಜಲದ ಪ್ರಮಾಣವು ತಾವರೆಗಳಲ್ಲದೆ ವ್ಯಾಲಿದ್ದ ಗಿಡಗಳು ತಾವು ಬಲ್ಲವೆ
ಪುಷ್ಪದ ಪರಿಮಳ ಮಧುಕರಗಳಲ್ಲದೆ ಹಾರುವ ನೊಣಗಳು ಬಲ್ಲವೆ
ಮಾವಿನಹಣ್ಣಿನ ರುಚಿ ಅರಗಿಳಿಗಳಲ್ಲದೆ ಚೀರುವ ಕಾಗಿಗಳು ಬಲ್ಲವೆ
ದೇವ! ನಿನ್ನ ಮಹಿಮೆಗೆ ಸಜ್ಜನರ ಭಕುತಿಗೆ ನೀನೇ ಗತಿಯೋ
**ಅಚಲಾನಂದವಿಠ್ಠಲ** ||೧೦||

೧೧ ಮರವಿದ್ದರೆ ಫಲವೇನು ನೆರಳಿಲ್ಲದನಕ
ವರತಿದ್ದರೆ ಫಲವೇನು ನೀರಿಲ್ಲದನಕ
ಧನವಿದ್ದರೆ ಫಲವೇನು ಮನವಿಲ್ಲದನಕ
ಏನಿದ್ದರೆ ಫಲವೇನು ಜ್ಞಾನವಿಲ್ಲದನಕ
ಕೋಳಿಗೆ ಹೊನ್ನ ಪಂಜರವಿನ್ಯಾಕೋ
ಬೋಳಿಗೆಯಿನ್ಯಾಕೊ, ಜಾಜಿಮಲ್ಲಿಗಿದಂಡೆ
ಆಳಿಲ್ಲದವನ ಅರಸುತನವ್ಯಾಕೆ
ಮಾಳಿಗೆಮನೆಯು ಡೊಂಬಗಿನ್ಯಾಕೊ
ಕೇಳಿಲೊ **ಅಚಲಾನಂದವಿಠ್ಠಲ** ನಿನ್ನ
ಊಳಿಗಿಲ್ಲದವನ ಬಾಳಿವಿನ್ಯಾಕೆ ||೧೧||

೧೨ ಸುರಚಕ್ರವರ್ತಿ ಸುರರ ರಾಜಾಧಿರಾಜ
ತಾ ಮಾಡಿದಕರ್ಮ ತನಗಲ್ಲದಲೆ ಮತ್ತೆ
ತಾ ಮಾಡದಿದ್ದರೆ ತನಗೆಲ್ಲೆದಯ್ಯಾ
ತನಗಿಲ್ಲದೆ ಹೋಗಿ ವಿಧಿಯ ಬೈದರೆ
ವಿಧಿಯು ಎಲ್ಲಿ ಕದ್ದು ತಾ ಹೋಸಯ್ಯ
ಹಗಲು ನಾಲ್ಕು ಝಾಮವು ಹಸಿವಿಗೆ ಕುದಿಯಿತು
ಇರಳು ನಾಲ್ಕು ಝಾಮವು ವಿಷಯಕ್ಕೆ ಕುದಿಯಿತು
ವ್ಯರ್ಥವಾಗಿ ಹೋಯಿತೈಯ್ಯ ಸಂಸಾರ ಸುಖವಿಲ್ಲ
ಕೇಳಯ್ಯ ನಿನ್ನ ನೆನೆಯಲಿಲ್ಲ ವಿಷಯವುಳ್ಳವಗೆ ವಿವೇಕವಿಲ್ಲೋ
ಹಸಿವೆಯರಿತು ಉಂಡವ ರೋಗಿ ಅಲ್ಲ
ತೆಗಸದಪ್ಪುದು ಹೀಗೆ ಅನ್ಯಾಯವಿಲ್ಲ
ಲೋಭಿಗೆ ತನ್ನವರೆಂಬೋದಿಲ್ಲ ನಿನ್ನ ನೆನೆಯುವ ಪಾಮರನಲ್ಲ
ಕೇಳಯ್ಯಾಖಿಳಾ**ಚಲಾನಂದವಿಠ್ಠಲ** ||೧೨||

೧೩ ಇಂದಿಗೆಂಬೋ ಚಿಂತೆ ನಾಳಿಗೆಂಬೋ ಚಿಂತೆ
ನಾಡದ್ದಿಗೆಂಬೋ ಚಿಂತೆ ತೊತ್ತಿಗ್ಯಾತಕಯ್ಯ
ಒಡೆಯನುಳ್ಳ ತೊತ್ತಿಗ್ಯಾತರಚಿಂತೆ
ಒಡೆಯ ಶ್ರೀನಿವಾಸ ಎಂಬೊ ಛತ್ರವಿರಲು
ಎನ್ನೊಡೆಯ **ಅಚಲಾನಂದವಿಠ್ಠಲ** ||೧೩||

೧೪ ವಿಷಯವುಳ್ಳವನಿಗೆ ವಿವೇಕವಿಲ್ಲ
ಹಸಿವಿ ಅರಿತು ಉಂಬನಿಗೆ ರೋಗವಿಲ್ಲ
ಲೋಭಿಗೆ ತನ್ನವರೆಂಬೋರಿಲ್ಲ ಚ್ಯುತಶೀಲಗುಣಗೆ ಸತ್ಯವಿಲ್ಲ
ಕೇಳಯ್ಯ ದೇವ **ಅಚಲಾನಂದವಿಠ್ಠಲ**
ನಿನ್ನ ನೆನೆಯದವ ಪಾಮರನಯ್ಯ ||೧೪||

೧೫ ಕೆಟ್ಟೆನೆಂದೆನಲ್ಯಾಕೋ ಕ್ಲೇಶವಪಡಲ್ಯಾಕೋ
ಪೊಟ್ಟೆಗೋಸುಗ ಪರರ ಕಷ್ಟಬಡಿಸಲ್ಯಾಕೋ

ಕೊಟ್ಟರುಣಲುಂಟು ಕೊಡದಿದ್ದರೇನುಂಟು
ಸೃಷ್ಟಿಮಾಡಿದ ದೇವರು ಹುಲ್ಲುಮೇಯಿಸುವನೆ
ಕೇಳಯ್ಯಾ, ದೇವ **ಅಚಲಾನಂದವಿಠ್ಠಲ**
ಹುಲ್ಲುಮೇಯಿಸುವನೆ ||೧೫||

೧೬ ತಪ್ಪಿಲ್ಲದೆ ಅವಗುಣವಿಲ್ಲದೆ ಒಬ್ಬರನ್ನೊಬ್ಬರು ಮರೆಹೊಗುವರೆ ದೇವ
ಅಳಿ ಕುಲಾಚಾರಗಳ ಅವಗುಣಗಳೆಣಿಸುವರೆ ದೇವ
ದುರಾಚಾರನಾಗಿ ದುಸ್ವಭಾವಿತನಾಗಿ ಮರೆಹೊಕ್ಕೆ
ಕಾಯೋ **ಅಚಲಾನಂದವಿಠ್ಠಲ** ||೧೬||

೧೭ ಶ್ರವಣದಿಂದ ಹೋಯಿತು ಬ್ರಹ್ಮಹತ್ಯಾಪಾಪವು
ಸ್ಮರಣೆಯಿಂದ ಹೋಯಿತು ಶರೀರದ ಪಾಪವು
ಅಲ್ಲಿದ್ದ ಅಜಮಿಳಗೆ ಅಲ್ಲಿತ್ತು ವೈಕುಂಠ
ಪಾಲಿಸೊ ಎನ್ನ **ಅಚಲಾನಂದವಿಠ್ಠಲ** ||೧೭||

೧೮ ದೊರೆತನವುಂಟೆಂದು ಗರ್ವಿಸಲುಬ್ಯಾಡ
ಸಿರಿ ನಮಗಿಲ್ಲೆಂದು ಜರಿದು ನಿಂದಿಸಬ್ಯಾಡ
ನಿನ್ನಂಥ ಒಡೆಯನು ಎನಗುಂಟು ನಿನಗಿಲ್ಲ
ಎನ್ನ ನೀ ಕಾಯೋ **ಅಚಲಾನಂದವಿಠ್ಠಲ** ||೧೮||

೧೯ ಉದರಮಲವನ್ನು ತಾನರಿಯದೆ
ಮರಳಿ ಮರಳಿ ಸರೋವರದಿ ಮುಳುಗುವದಕ್ಕಿಂತ
ಉದಯಾಸ್ತಮಯವಾಗಿ ನೀರೊಳಗಿದ್ದು
ಮುದಿಕಪ್ಪಿಗಳುಮಾಡಿದ ತಂತ್ರಗಳೇನಯ್ಯಾ
**ಅಚಲಾನಂದವಿಠ್ಠಲ** ||೧೯||

೨೦ ಮುನಿಗಳು ಮನದಲ್ಲಿ ತುತಿಸಲರಿಯದ ಮಹಿಮ ನಿನ್ನ
ಉಪನಿಷದುಗಳು ತುತಿಸಲರಿಯದ ಮಹಿಮ ನಿನ್ನ
ಸಕಲಕ್ರತುರಾಶಿಗಳು ತುತಿಸಲರಿಯದ ಮಹಿಮ ನಿನ್ನ
**ಎತ್ತಿಕೊಂಡು ಜೋಗುಳಾಡುವ, ಮೊಲೆ ಇಡುವ,**

ಮೊಗನೋಡುವ, ಗೋಪಿದೇವಿಯ ಪುಣ್ಯ ಎಂಥಾದೊ
**ಅಚಲಾನಂದವಿಠ್ಠಲ** ||೨೦||

೨೧ ಹೊತ್ತುಹೊತ್ತಿಲಿ ಎದ್ದು ಹರಿಶರಣೆನ್ನಬೇಕು
ಹೊತ್ತು ಹೋಗದಿದ್ದರೆ ಹರಿಶರಣೆನ್ನಬೇಕು
ಹೊತ್ತುಕೊಂಡೊಯ್ದರೆ ಹೊತ್ತು ತಡೆದ ಮುನ್ನೆ
ಹರಿಶರಣೆನ್ನಬೇಕು ಕೇಳಯ್ಯ, ದೇವ **ಅಚಲಾನಂದವಿಠ್ಠಲ** ||೨೧||

೨೨ ನಿಂದಿರೆ ನೆಳಲಿಲ್ಲ ಹಿಡಿವರೆ ಕೊಂಬಿಲ್ಲ
ಮುಂದೆ ಭಾವಿ ಹಿಂದೆ ಕಿಚ್ಚು ಬೆನ್ನಟ್ಟುತಿದೆ
ಬಂದಿದೆ ಎನಗೆ ಕಾವರ ನಾ ಕಾಣೆ
ಅಂಧಕನಾಗಿ ಊರ್ವಿಯೊಳು ಶಿಲುಕಿದೆ
ತಂದೆ ಸಲಹೋ **ಅಚಲಾನಂದವಿಠ್ಠಲ** ||೨೨||

೨೩ ನಾಳೆ ಬಾಹೋದು ನಮಗಿಂದೆ ಬರಲಿ
ಇಂದೆ ಬಾಹೋದು ನಮಗೀಕ್ಷಣವೆ ಬರಲಿ
ಈಗ ಬಾಹೋದು ನಮಗೀಕ್ಷಣವಿರಲಿ
ಯಾತರ ಭಯವೋ **ಅಚಲಾನಂದವಿಠ್ಠಲ** ||೨೩||

೨೪ ಮುನಿಯಂತೆ ಒಂದಕಾಂಬುವನಲ್ಲ
ಪರಧನ ಪರಸತಿ ಎರಡಕಾಂಬುವೆ
ಮುನ್ನ ಕೌರವ ರಾವಣಗೇನಾಯಿತು
ಇನ್ನು ನಾ ಅಂಜುವೆ **ಅಚಲಾನಂದವಿಠ್ಠಲ**
ಒಂದೇ ಕಾಂಬುವೆನಾ ||೨೪||

೨೫ ಕಣ್ಣಲ್ಲಿ ನೀರಿಲ್ಲ ಮನದೊಳಕ್ಕರವಿಲ್ಲ
ಅತ್ತೆ ಸತ್ತರೆ ಸೊಸೆ ಅಳುವಳಂತೆ
ಅತ್ತೆ ಅತ್ತೆ ಅತ್ತೆಂದತ್ಯ ಅತ್ತೆ ಸತ್ತರೆಯನಗೆ ಹುಚ್ಚುಹೋಯಿತು
ಅತ್ತೆ ಸತ್ತರೆ ಎನಗೆ ಬುದ್ಧಿಯಾಯಿತು

ಅತ್ತೆ ಅತ್ತೆ ರಾಮಕೃಷ್ಣರ ಭಕ್ತಿಯಿಲ್ಲದವಗೆ
ಇದೆ ಪಾಡು ಕೇಳಯ್ಯ ದೇವ **ಅಚಲಾನಂದವಿಠ್ಠಲ** ||೨೫||

೨೬ ವಿಧಿಯನ್ನು ಮೀರಿತು ನಿನ್ನ ನಿಯಮದ ಬಗೆ
ಹಗಲು ನಾಲ್ಕು ಝಾವವು ಹಸಿವಿಯಿಂದ ಕುಂದಿತು
ನಾ ನಿನ್ನ ಸ್ಮರಿಸಲಿಲ್ಲ ನಿನ್ನನೆನಿಯದ ಪಾಮರ-
ನೈಯ್ಯಾ **ಅಚಲಾನಂದವಿಠ್ಠಲ** ||೨೬||

೨೭ ಕುಂಬಳಕಾಯಿಗೆ ಕಬ್ಬಿಣದ ಕಟ್ಟನುಹಾಕೆ
ಅಳಿವಲ್ಲದೆ ಮತ್ತೆ ವುಳಿಯಬಲ್ಲುದೆ ದೇವ
ಅಳಿಮನದವರಿಗೆ ದೀಕ್ಷೆ ಇತ್ತರೆ ದೀಕ್ಷೆ ದೀಕ್ಷೆಯಂತೆ
ತಾನು ತನ್ನಂತೆ ಕೇಳಯ್ಯ ದೇವ **ಅಚಲಾನಂದವಿಠ್ಠಲ** ||೨೭||

---

## ಶ್ರೀಯೋಗೇಂದ್ರವಿಠ್ಠಲದಾಸಾರ್ಯರ ಉಗಾಭೋಗಗಳು

೨೮ ನೆನಿಯೆ ಮನವನಿತ್ತೆ ಪೊಗಳೆ ನಾಲಿಗೆಯಿತ್ತೆ
ಬೆಲೆಯಿಲ್ಲದನಂತನಾಮಗಳಿತ್ತೆ ನೋಡುವ ಕಂಗಳನಿತ್ತೆ
ಕೇಳೆ ಕಿವಿಗಳನಿತ್ತೆ ಪರಿಚರಿಯುವ ಮಾಡಲು ತನುವನಿತ್ತೆ
ವೃದ್ಧಿಯೌವ್ವನವಿತ್ತೆ ಹರಿದಿನವನಿತ್ತೆ
ಇನ್ನು ನಿನ್ನ ಕರುಣಕ್ಕೆ ಸರಿಯುಂಟೆ
ಅಜಮಿಳನು ಅಣ್ಣನೆ ವಿಭೀಷಣನು ತಮ್ಮನೆ
ರುಕ್ಮಾಂಗದನು ನಿನ್ನ ಮೊಮ್ಮಗನೆ
ದಿನದಿನ ಅವರಿಗೆ ಬೇಡಿದ್ದು ನೀನಿತ್ತೆ
ಇಂದು ಎನಗಿಲ್ಲಧ್ವೋಯಿತೇ
ಅಂದು ಸಿರಿವಂತನೆ ಇಂದು ನೀ ಬಡವನೆ

ಎಂದೆಂದಿಗೆ ನೀ ಲಕ್ಷ್ಮೀಪತಿಯಲ್ಲವೆ ವಿಚಿತ್ರವಿನೋದ
**ಯೋಗೇಂದ್ರವಿಠ್ಠಲ** ನಿನ್ನ
ಚರಣದ ಮಹಿಮೆಗೆ ನಮೋ ನಮೋ ಎಂಬೆ ||೨೮||

೨೯ ಅಲ್ಲದ ಸಂಗವ ಮಾಡದಿರು ಅಚ್ಯುತನ ನಾಮವ ಮರೆಯದಿರು
ವಾರವಧುಗಳಿಗೆ ನೀ ನಲಿಯದಿರು ಪರಲೋಕಕ್ಕೆ ನೀ ದೂರಾಗದಿರು
ಆಡುವುದು ಸಜ್ಜನರೊಡನೆ ಮಾತನಾಡುವದು ಸತ್ಯವಂತರೊಳು
ನೋಡುವುದು ಹರಿಮೂರ್ತಿಯ ಕೇಳುವುದು ಹರಿಕೀರ್ತನೆಯ
ದೇವನೇ ಲಕ್ಷ್ಮೀಪತಿ **ಯೋಗೇಂದ್ರವಿಠ್ಠಲ** ||೨೯||

೩೦ ಚಂದ್ರಮನುದಯವು ನೈದಲಿಗೆ ಜೀವನವು
ಸೂರ್ಯನುದಯವೇ, ತಾಮರಸಕೆ ಜೀವನವು
ಮಾತು ಜೀವನ ಸಖೀಜನರಿಗೆಲ್ಲ
ಎನ್ನ ಪ್ರಾಣದೊಡೆಯ **ಯೋಗೇಂದ್ರವಿಠ್ಠಲ**
ನಿನ್ನ ದಿವ್ಯನಾಮ ಎನಗೆ ಜೀವನವು ||೩೦||

೩೧ ಹರಿಯ ಭಜಿಸಬಲ್ಲವನೊಬ್ಬ ಜಾಣ
ಮರಳಿ ಸಂಸಾರ ಏನು ಕಾಣ
ಹರಿಯರುತ್ತಮರೆಲ್ಲರಿಗತಿಪ್ರಾಣ
ದುರುಳಮಾಯಿಗಳಿಗೆ ಗಂಟಲಗಾಣ
**ಯೋಗೇಂದ್ರವಿಠ್ಠಲನ್ನ** ಚರಣದಶರಣ
ಪರಮ ಮುಕುತನಾಹನಿಲ್ಲದನುಮಾನ ||೩೧||

೩೨ ಹಾಡಿದರೆನ್ನೊಡೆಯನ್ನ ಹಾಡುವೆ
ಬೇಡಿದರೆನ್ನೊಡೆಯನ್ನ ಬೇಡುವೆ
ಒಡೆಯಾ **ಯೋಗೇಂದ್ರವಿಠ್ಠಲನ್ನ**
ಅಡಿಗಳಸಾರಿ ಬದುಕುವೆ ಸಾರಿಬದುಕುವೆ ||೩೨||

೩೩ ತನಗ್ಯಾಕೆ ದನಗಾಯ್ವ ಗೋವಳಗೆ
ವನಿತೆಯರೊಳು, ನಸುವ್ಯಾಳ್ಯಾವೆ ಕೆಳದಿ

ತನಗ್ಯಾಕೆ ಮತ್ತೆ ಹಿರಿಯತನ
ತನಗ್ಯಾಕೆ ಮತ್ತೆ ಕಿರಿಯತನ
ಗೊಲ್ಲರ ಮನೆಯಲ್ಲಿ ನವನೀತಚೋರನೆಂದೆನಿಸಿಕೊಂಬುವಗೆ
ತನಗ್ಯಾಕೆ ದೇಶವಿಲ್ಲದ **ಯೋಗೇಂದ್ರವಿಠ್ಠಲಗೆ**
ಪಾಂಡವರೊಡನಾಟ || ೬ ||

೭ ಕರುಣದಿ ತನುಮನಧನಂಗಳೆಲ್ಲವ ನಿನ್ನ
ಚರಣಕಮಲಕೊಪ್ಪಿಸಿದಬಳಿಕಿನ್ನು
ಮರಳಿ ಮರಳಿ ಎನ್ನ ಮರುಳುಮಾಡುವರೆ
ಸರಕನೊಪ್ಪಿಸಿದಬಳಿಕ ಸುಂಕವುಂಟೆ ದೇವ
ಮರಳಿ ಮರಳಿ ಎನ್ನ ಮರುಳುಮಾಡುವರೆ
ಕರುಣಾಕರ **ಯೋಗೇಂದ್ರವಿಠ್ಠಲ** ನಿನ್ನ
ಚರಣದಡಿಯ ಸೇರಿ ಬದುಕುವೆನಯ್ಯ ನಾನು || ೭ ||

೫ ಸುಖವಾದರೆ ತನ್ನಿಂದಾಯಿತೆಂಬೋರು
ಕಷ್ಟವಾದರೆ ದೈವ ಮಾಡಿತೆಂಬೋರು
ಸುಖಕೆ ತಾನಾರು ಕಷ್ಟಕೆ ತಾನಾರು
ಸುಖದುಃಖವೆರಡು ಶ್ರೀಹರಿಯಧೀನವಯ್ಯ
ಒಡೆಯನುಳ್ಳ ತೊತ್ತಿಗುಣಲುಂಟು ಉಡಲುಂಟು
ಒಡೆಯನಿಲ್ಲದ ತೊತ್ತಿಗುಣಲಿಲ್ಲ ಉಡಲಿಲ್ಲ
ಬಡವರೊಳಗೆ ಎನ್ನಿಂದಾರು ಬಡವರಿಲ್ಲ
ಕೊಡುವರೊಳಗೆ ನಿನ್ನಂತಾರು ಕೊಡುವರಿಲ್ಲ
ಬಿಡೆನೊ, ಬಿಡೆನೊ ನಿನ್ನ ಚರಣಕಮಲವ
ಒಡೆಯ **ಯೋಗೇಂದ್ರವಿಠ್ಠಲ** || ೮ ||

೬ ಪ್ರಲ್ಹಾದನು ನಿನ್ನ ಪೊಗಳಿದನಲ್ಲದೆ ಪೊಡವಿದಾವದ ದಾನಿತ್ತನೇ
ನಾರದಮುನಿ ನಿನ್ನ ಪಾಡಿದನಲ್ಲದೆ ನಾಡದಾವದ ದಾನಿತ್ತನೇ
ವಿಭೀಷಣನು ನಿನ್ನ ಮೊರೆಹೊಕ್ಕನಲ್ಲದೆ ಏನು ಧನವನಿತ್ತನೈಯ್ಯ

ತ್ರಿದಶಾದ್ಯರು ನಿನ್ನ ತುತಿಸಿದರಲ್ಲದೆ ಏನ ಭಾಗ್ಯವನಿತ್ತರೈ
ಅಂದಿನವರು ನಿನಗೆ ಏನುಕೊಟ್ಟರು
ಹರಿಯೇ ನಾನೇನು ಕೊಡಥ್ವೋದೆನೋ
ಅಂದು ಸಿರಿವಂತನೆ
ಇಂದು ನೀಬಡವನೇ
ಎಲೆ ಲೋಲ ಲಕ್ಷ್ಮೀಪತಿಯೆ ತ್ರಿದಶವಂದಿತ
**ಸಿರಿಯೋಗೇಂದ್ರವಿಠ್ಠಲ**
ನಿನಗೆ ನಮೊ ನಮೊ ನಮೊ ನಮೋ ಎಂಬೆ || ೯ ||

೩೭ ಮುಗಿಲಡ್ಡಾಗಲಕಲ್ಲು ಮೇಲೆ ಹೇರಿದರೆ
ಜಗಕೆಲ್ಲ ವಾರಿಧಿ ಮೇರೆತಪ್ಪಿದರೆ
ಕಡೆಗೆ ತೆಗೆಯುವರ್‍ಯಾರೊ ತಡಿಗೆ ಸೇರಿಸುವರಾರೊ
ಒಡೆಯ ನಿನಗೆ ಹುಯಲಿಡುವರಿನ್ನಾರೋ
ಬಿಡೆನೊ ಬಿಡೆನೊ ನಿನ್ನ ಚರಣಕಮಲವ
ಎನ್ನೊಡೆಯ **ಯೋಗೇಂದ್ರವಿಠ್ಠಲ** ದೇವರ ದೇವ || ೧೦ ||

---

## ಶ್ರೀಮುದ್ದುವಿಠ್ಠಲದಾಸಾರ್ಯಕೃತ ಉಗಾಭೋಗಗಳು

೩೮ ನೀರಡಿಸಿ ಜಾನ್ಹವಿತೀರದಲ್ಲಿರಲು, ಭಾವಿ-
ನೀರನು ಕುಡಿದ ಮಾನ್ನವನ ತೆರದಿ |
ಭೂರಿ ದೈವಗಳಿನ್ಯಾಕೆ ಭಜಿಸುವೆ ಮನವೆ |
ಕಾರುಣ್ಯಸಿಂಧು **ಸಿರಿಮುದ್ದುವಿಠ್ಠಲರೇಯ** |
ಬೇಲೂರಚನ್ನರಾಯ ಹರಿಯ ಸಿರಿಚರಣವಿರಲು || ೧ ||

೩೯ ಎನಗೆ ವೈಕುಂಠದಲ್ಲಿ, ಯೋಗಿಗಳ ಹೃದಯದಲ್ಲಿ,
ಇನನ ಮಂಡಲದಲ್ಲಿ, ಎಲ್ಲೆಲ್ಲಿರಲು ಶ್ಯಾರದೋ !
ಎನ್ನ ಭಕ್ತರ ನೆರೆಗಾನಕಾನೆಲೆ-
ಗೊಂಬೆ ಮುನಿನಾರದ ಕೇಳೆಂದು **ಮುದ್ದುವಿಠ್ಠಲನೆಂದ** || ೨ ||

೪೦ ಉದಯಕಾಲದ ಜಪ ಉನ್ನತಾಂಗುಲಿ |
ಮಧ್ಯಾಹ್ನದ ಜಪ ಫಣಿಶಿರದಂದದಿ |
ಕದಳಿಪುಷ್ಪದ ಜೋಲು | ರಾತ್ರಿಗೆ
ಒದಗಿ ಪರಿಸಿರೈಯ್ಯಾ **ಮುದ್ದುವಿಠ್ಠಲನೆಂದ** || ೩ ||

---

## ಶ್ರೀಸೊಬಗುವಿಠ್ಠಲದಾಸಾರ್ಯಕೃತ ಉಗಾಭೋಗಗಳು

೪೧ ಕೃತ ತ್ರೇತ ಆ ದ್ವಾಪರವ ಕಳದವು ಜಗವೆಲ್ಲ
ಅತಿಸುಲಭ ಕಲಿಯುಗದಿ ಅವತರಿಸಲಿಚ್ಛಿಪರು
ಪತಿಯಾದ ನಾರಾಯಣನೆ ಪರಾಯಣನಹುದೆಂದು |
**ಅತಿಸೊಬಗುವಿಠ್ಠಲನ** ಅಪವರ್ಗಬಹುದೆಂದು || ೧ ||

ರಾಗ: ಸಾವೇರಿ. ತಾಳ: ಝಂಪೆ

೪೨ ಆಕಳ ಕಿವಿಯಂತೆ ಅಂಗೈಯನೆ ಮಾಡಿ |
ಈ ಕುಂದು ಮುಳುಗುವ ಪರಿಮಿತ ಜಲವು |
ಸಾಕಾಗದು ಎಂದು ಹೆಚ್ಚುಕಡಿಮೆ ಕುಡಿಯೆ |
ಲೋಕದಿ ಸುರಾ ಎಂದಿನಿಸುವದೋ
ಶ್ರೀಕರಾರ್ಚಿತ **ಸೊಬಗುವಿಠ್ಠಲರೇಯ** |
ಬೇಕೆಂದು ಇದೇ ರೀತಿಮಾಡಿಹನೋ || ೨ ||

೪೩ ಶ್ವಾನನ ಕೊಂಕಳೊಳಿಟ್ಟು ವಾರಣಾಸಿಗೆ ಪೋದಂತೆ |
ಮಾನವ ಕೇಳು ಮದಮತ್ಸರವಳಿಯದಲ್ಲದೆ |
ಏನು ಮಾಡಿದರೇನು ವ್ಯರ್ಥವಲ್ಲವೆ |
ದೀನನಾಥ ನಮ್ಮ **ಸೊಬಗುವಿಠ್ಠಲನ್ನ** |
ಧ್ಯಾನದೊಳಿರಿಸು ನಿನ್ನ ಧ್ಯಾನದೊಳಿರಿಸು || ೩ ||

---

## ಶ್ರೀಪಾಂಡುರಂಗವಿಠ್ಠಲದಾಸಾರ್ಯಕೃತ ಉಗಾಭೋಗಗಳು

೪೪ ರಂಗನ ಚರಣಂಗಳ ಹಿಂಗದೆ ನೀ ನೆನಿಯೊ ಮನವೆ
ಗಂಗಾಜನಕನ ಶರಣರ ಸಂಗದಲ್ಲಿ ಜೀವಿಸೆಲೆ ಮನವೆ |
ಹಿಂಗು ಭವವ ನಂಬು **ಪಾಂಡುರಂಗವಿಠಲನ್ನ** || ೧ ||

೪೫ ಕಲಿಕಾಲಕೆ ಸಮ ಯುಗವಿಲ್ಲವಯ್ಯ |
ಕಲುಷಹಾರಿ ಕೈವಲ್ಯಪದವೀವೊದಯ್ಯ |
ಸಲೆ ನಾಮಕೀರ್ತನೆ ಸ್ಮರಣೆ ಸಾಕಯ್ಯ |
ಸ್ಮರಿಸಲು ಸಾಯುಜ್ಯಪದವೀವೊದಯ್ಯ |
ಕುಲಕೋಟಿಗೆ ವೈಕುಂಠಲೋಕವೀವೊದಯ್ಯ |
ಬಲುಜೀಯ್ಯ **ಪಾಂಡುರಂಗವಿಠ್ಠಲನ** ಸ್ಮರಿಸಲು |
ಕೈವಲ್ಯಲೋಕವೀವೊದಯ್ಯ || ೨ ||

---

## ಶ್ರೀರಾಮಕೃಷ್ಣದಾಸಾರ್ಯಕೃತ ಉಗಾಭೋಗಗಳು

೪೬ ಧರ್ಮಪಥವ ಮೆಟ್ಟಲು ಮನವೆರಗದು, ದು-
ಷ್ಕರ್ಮಕಾದರೆ ಚಿಗಿಚಿಗಿದಾಡುವದು, ಯುಗ-
ಧರ್ಮವೋ ಜೀವನ ಕರ್ಮವೋ, ಹರಿಹರಿ |
ನಿರ್ಮಲಾತ್ಮಕನ ನೆನೆಯಲೀಯದು ಯುಗ.
ದುರ್ಮದೊಕ್ತಿಗಳಿಂದ ಚರಿಸುವ ಜನರ ವೈ-
ಚರ್ಮನ ಸುಲಿಸದೆ ಬಿಡನು, **ಸಿರಿರಾಮಕೃಷ್ಣ** ಯುಗ-
ಧರ್ಮವೋ ಜೀವನ ಕರ್ಮವೋ ಹರಿ ಹರಿ || ೧ ||

೪೭ ನೀರಮೇಲಣ ಗುಳ್ಳೆಯಂತೆ ಈ ದೇಹವಸ್ಥಿರ.
ಬಾರದು. ತಿಳಿಯೆ ನಿಮಿಷವೊ ನಿಮಿಷಾರ್ಧವೋ |
ಹಾರಲೇತಕೆ ಪರಸತಿಪರಧನಕಾಗಿ |
ಹಾರಲೇತಕೆ ಗೇಣುಹೊಟ್ಟೆಯ ಹೊರವುದಕೆ |

ಆರಿಗಾರೊ, ಯಮದೂತರು ಎಳೆವಾಗ |
ಆರು ಬಿಡಿಸುವರೋ **ಶ್ರೀರಾಮಕೃಷ್ಣನಲ್ಲದೆ** |
ಹಾರಲೇತಕೆ, ಪರಸತಿಪರಧನಕಾಗಿ || ೨ ||

೪೮ ಅತಿಥಿ ಬಂದು, ಅನ್ನ ಬೇಡಿದರೆ ಬೇಗ |
ಗತಿ ನಮಗಿಲ್ಲ, ಕೂಡದು ಕೂಡದು ಎಂಬರು |
ಸತಿಸುತರಿಗೆ ನಿರ್ಮಿಸುವರು, ಮೃಷ್ಟಾನ್ನವ |
ಸತತ ಬಂದ ಪೃಷ್ಟಸಂಬಂಧಿಗಳಿಗೆ |
ಅತಿಶಯದಿ ಕುಳ್ಳಿರಿಸಿ ಪೂಜೆ ಮಾಡುವರು |
ಮಾತಾಪಿತೃಬಳಗವ ಮನೆಹೋಗಲೀಯರು |
ಮತಿಹೀನ ಕೆಲಬರು **ಶ್ರೀರಾಮಕೃಷ್ಣ** |
ಸುತರಿಗೆ ನಿರ್ಮಿಸುವರು ಮೃಷ್ಟಾನ್ನವ || ೩ ||

೪೯ ದಾರಿದ್ರ್ಯವೆಂಬ ರಕ್ಕಸಿ ಹಿಡಿದೆನ್ನ |
ಹೀರಿ ಹಿಪ್ಪಿಮಾಡುತಾಳೆ ತಾಳಲಾರೆ ಸಂ-
ಸಾರವೆಂಬ ಮಾರಿಯಿಂದ ಬಲುನೊಂದೆನೋ |
ಆರುಮಂದಿ ವೈರಿಗಳೆನ್ನ ಸುತ್ತಮುತ್ತ |
ಹೋರಿ ತಮ್ಮ ವಿಷಯಂಗಳಿಗೆಳೆನ್ನ ಸೆಳೆಯುತಾರೆ |
ನಾರಾಯಣ ನಿನ್ನ ನಾಮಸ್ಮರಣೆಯಿತ್ತು |
**ಶ್ರೀರಾಮಕೃಷ್ಣ** ಎನ್ನ ನೀ ಸಲಹಯ್ಯ || ೪ ||

೫೦ ಸಿರಿರಮಣ ಎಂದರೆ ಭಾಗ್ಯಕ್ಕೆ ಕಾರಣ |
ನರಹರಿ ಎಂದರೆ ದುರಿತನಿವಾರಣ |
ನಾರಾಯಣ ಎಂದರೆ ಮುಕ್ತಿಗೆ ಕಾರಣ |
ಮರಣಕಾಲದಲ್ಲಿ ಮರೆಯದೆ ಮನಮುಟ್ಟಿ |
ನಾರಾಯಣ ಎಂದರೆ ಮುಕ್ತಿಗೆ ಕಾರಣ |
**ಶ್ರೀರಾಮಕೃಷ್ಣ** ಎಂಬ ದಿವ್ಯ ಮಂತ್ರಗಳಿಂದ |
ದುರಿತಭೂತಗಳಟ್ಟಿ ದುರಹಂಕಾರಬಿಟ್ಟು |
ನಾರಾಯಣೆಂದರೆ ಮುಕ್ತಿಗೆ ಕಾರಣ || ೫ ||

೫೧ ಗಾಳಿಗಿಕ್ಕಿದ ದೀವಿಗೆಯಂತೆ ದೇಹವೆಂದು |
ವೇಳೆವೇಳೆಗೆ ಶ್ರುತಿಸ್ಮೃತಿ ಸಾರುತಲಿದೆ |
ಹಾಳುಹರಟೆಯಿಂದ ಫಲವೇನು ಇಲ್ಲ |
ನಾಲಿಗೆಯಿದ್ದು ನಾರಾಯಣೆನ್ನಬಾರದೆ |
ಹಾಳುಹರಟೆಯಿಂದ ಫಲವೇನು ಇಲ್ಲ |
ಕಾಲಕಾಲದಿ ಹರಿಯ ಕಲ್ಯಾಣಗುಣಗಳ |
ಕೇಳದವನ ಜನ್ಮ ವ್ಯರ್ಥ **ಶ್ರೀರಾಮಕೃಷ್ಣ** |
ಹಾಳು ಹರಟೆಯಿಂದ ಫಲವೇನು ಇಲ್ಲ || ೬ ||

೫೨ ಎಲ್ಲ ಒಂದೆಂಬರ ಎರಡು ದಾಡೆಯಲಿರ್ದ |
ಹಲ್ಲುದರಬಡಿಯಬೇಕು ಹರಿಭಕ್ತರಾದವರು |
ಸಲ್ಲದು ಸಲ್ಲದು ಎನಲಾಗದು ಸಂಶಯಬೇಡ |
ಕ್ಷುಲ್ಲಕ ಸ್ವಾಮಿದ್ರೋಹಿಯ ಕ್ಷುರದಿ ಖಂಡಿಸಬೇಕು |
ಕಲ್ಲು ನಾರಿಯಮಾಡಿದ, **ಶ್ರೀರಾಮಕೃಷ್ಣನ** |
ಪಲ್ಲವಾಂಘ್ರಿಯ ನೆನೆದು ಪರಗತಿ ಪಡೆಯಿರೋ || ೭ ||

೫೩ ಗಟ್ಟಿಗನಾದರೇನು, ಕಟ್ಟಿಸ್ತ್ರರೇನು ಗೇಣು- |
ಹೊಟ್ಟೆಯ ಹೊರೆವುದಕೆ ಪೂರ್ವಜನ್ಮದಲ್ಲಿ |
ಕೊಟ್ಟರೆ ಉಣಲುಂಟು ಕೊಡದಿದ್ದರೇನುಂಟು |
ಪಟ್ಟಾಧಿಪತಿಸೇವೆ ಮಾಡಿದರೆ ಪೂರ್ವದಿ |
ಕೊಟ್ಟರೆ ಉಣಲುಂಟು ಕೊಡದಿದ್ದರೇನುಂಟು |
ಹುಟ್ಟಿದ ವಿತ್ತದೊಳು ಶಕ್ತ್ಯನುಸಾರ ಮನ-
ಮುಟ್ಟಿ **ಶ್ರೀರಾಮಕೃಷ್ಣನ** ಪ್ರೀತ್ಯನುಸಾರವಾಗಿ |
ಕೊಟ್ಟಿದ್ದರುಣಲುಂಟು, ಕೊಡದಿದ್ದರೇನುಂಟು || ೮ ||

೫೪ ಬಲ್ಲವನುಳ್ಳವ ನೀನಿರುತಿರಲಿಕ್ಕೆ |
ಕ್ಷುಲ್ಲಕರ ಮತವಿಡಿದು, ಸುಖವ ಬಯಸುವರುಂಟೆ |
ಕಲ್ಲುಗೋವಿನ ಹಾಲು, ಕರುಬಯಸಿ ಬರಿದಂತೆ |

ಹಲ್ಲುಹೋಹದಲ್ಲದೆ ಅಕಟಕಟ, ಮಂದಮತಿ |
ಕಲ್ಲು ಗೋವಿನ ಹಾಲು ಕರುಬಯಸಿ ಬರಿದಂತೆ |
ಹುಲ್ಲುಗುಂಜಿಯು ನೆರೆಮು ಸಲಹುವ **ಶ್ರೀರಾಮಕೃಷ್ಣನ** |
ಪಲ್ಲವಾಂಘ್ರಿಯ ನೆನದು | ಪರಗತಿ ಪಡೆಯೋ || ೯ ||

೫೫ ಲೋಭವೆಂಬುವದೆ ಎಂದೆಂದು ದಾರಿದ್ರ್ಯ |
ಲಾಭವೆಂಬುವುದೆ ವಿತರಣಸದ್ಗುಣ |
ತ್ರಿಭುವನದೊಳಗೆ ಅನೇಕಪೂಜ್ಯನು |
ಸೌಭಾಗ್ಯಸಂಪನ್ನನು **ಶ್ರೀರಾಮಕೃಷ್ಣ** || ೧೦ ||

---

## ಶ್ರೀವೈಕುಂಠವಿಠ್ಠಲದಾಸಾರ್ಯರ ಉಗಾಭೋಗ

೫೬ ಫಣಿಯನ್ನೆಮೆಟ್ಟಿ ಕುಣಿದನೆಂತೆಂಬುವರೊ |
ಫಣಿಯಂತು ತಾಳಿತೋ ದೇವ ನಿನ್ನ |
ಫಣಿಯು ಬ್ಯಾರಲ್ಲ ನೀನೆವೆ ಫಣಿಯೋ |
ಮನಕೆ ಕಾಣುವುದೆಂತೋ ತ್ರಿಭುವನದೊಳಗೆ |
ಪ್ರಣವಮೂರುತಿ **ವೈಕುಂಠವಿಠ್ಠಲರೇಯ** |
ಬೇಲೂರಚನ್ನ ಹಾರಿಹಾರಿದಿ ಸಿರಿಫಣಿಯಲಿ ನೀನೇವೆ || ೧ ||

---

## ಶ್ರೀನರಕಂಠೀರವದಾಸಾರ್ಯಕೃತ ಉಗಾಭೋಗ

೫೭ ಹರಿಯನಾಮ ಕೋ ಮನವೆ, ಮಾರಮಣ |
ಮದನಜನಕ ಮಧುರಿಪು ನಾರೀಜನ-
**ನರಕಂಠೀರವ** ಮುಕುಂದ ಮುರಾರಿಯ
ನಾಮಕೋ ಮುರಾರಿಯ ನಾಮಕೋ || ೧ ||

---

## ಶ್ರೀನಳಿನಾಕ್ಷವಿಠ್ಠಲದಾಸಾರ್ಯಕೃತ ಉಗಾಭೋಗ

ರಾಗ : ಆಸಾವೇರಿ

೫೮ ಮೊಳಕಾಲಿನ ಹೊರಗೆ ಕೈ ಆಗದಯ್ಯಾ |
ತಿಳಿಯೋ ಮೂರುವ್ಯಾಳ್ಯ ಕುಕ್ಕುಟಾಸನದಿಂದ |
ನಳಿನಾಕ್ಷನು ಪೇಳಿದ ರಾತ್ರಿ ಉಂಬದು ಪದ್ಮಾಸನವೆಂದು |
ಇಳಿಯೊಳುನಿಶಿಭುಕ್ತಿ
ಪದ್ಮಾಸನವೆಂದು | **ನಳಿನಾಕ್ಷವಿಠಲ** ಪೇಳಿವನೊ || ೧ ||

---

## ಶ್ರೀನಾರಾಯಣವಿಠ್ಠಲದಾಸಾರ್ಯಕೃತ ಉಗಾಭೋಗ

ರಾಗ : ಪೂರ್ವಿ- ತಾಳ ಝಂಪಿ

೫೯ ನಕ್ಷತ್ರ ಕಾಣದ ಪ್ರಾತಃ ಸಂಧ್ಯಾ ಅಧಮ |
ನಕ್ಷತ್ರಪತಿಯನುಜಕೃಷ್ಣ ಚಕ್ರವ ಪಿಡಿದ |
ನಕ್ಷತ್ರ ಕಂಡರೆ ನಿಶದಿ ಅಧಮ |
ಈಕ್ಷಿಸಿ ಮಧ್ಯಾಸ್ಹದಿ ಸಂಧ್ಯಾವಂದನೆ ಗೈಯೆ |
**ಅಕ್ಷಯಾನಂತಶ್ರೀನಾರಾಯಣವಿಠಲ** |
ಮೋಕ್ಷವ ಕೊಡುವನು ಈಪರಿ ಚರಿಸಲು || ೧ ||

---

## ಶ್ರೀಲಕ್ಷ್ಮೀಕಾಂತವಿಠ್ಠಲದಾಸಾರ್ಯಕೃತ ಉಗಾಭೋಗ

ರಾಗ : ಕಾಪಿ. ತಾಳ ಝಂಪಿ

೬೦ ಕಾಲಕಾಲದ ಸಂಧ್ಯಾವಂದನೆ ಅಲ್ಪವೆಂದು ನಿರಾಕರಿಸೆ |
ಶ್ರುತಿಸ್ಮೃತಿ ಸಾರುತಿದೆ ಸಕಲಪ್ರಯಾಸವು
ಮಾಡಲು ಬಂಜಿಗೆ ಮಕ್ಕಳಾಗೋದೇನೊ ಮೂಢ
ಕೇಳೋ ಬಕಧ್ವಂಸಿ**ಲಕ್ಷ್ಮೀಕಾಂತವಿಠಲ**
ಮೆಚ್ಚುವನೇನೋ || ೧ ||

## ಶ್ರೀ ಲೋಕೈಕವಿಠ್ಠಲದಾಸಾರ್ಯಕೃತ· ಉಗಾಭೋಗ

ರಾಗ: ಶಂಕರಾಭರಣ. ತಾಳ ತ್ರಿವಿಡಿ

೬೧ ನೀಲವಸ್ತ್ರವಾಗದು ಏಕವಸ್ತ್ರದಿಂದ ಸ್ನಾನಮಾಡಲಾಗದು |
ಏಕವಸ್ತ್ರದಿಂದ ಪೂಜಿಸಲಾಗದು |
ಏಕವಸ್ತ್ರದಿಂದ ಪಿತೃಕಾರ್ಯವಾಗದು |
ಏಕವಸ್ತ್ರದಿಂದ ಭುಂಜಿಸಲಾಗದು ಕೇಳು |
ಏಕವಸ್ತ್ರದಿಂದ ದಾನ ಹೋಮ ಜಪ ತಪವಾಗದು
**ಲೋಕೈಕವಿಠಲನ್ನ** ಮರೆಯಲಾಗದು ನಿತ್ಯ ||೧||

---

## ಶ್ರೀ ರುಕ್ಮಿಣೀಪತಿವಿಠ್ಠಲದಾಸಾರ್ಯಕೃತ ಉಗಾಭೋಗ

೬೨ ಪತಿತನ ಪಾವನಮಾಡುವದು ಹರಿ ನಿನ್ನ
ನಾಮದುಚ್ಚಾರಣೆ | ಷಟ್ಕರ್ಮನಿರತನಮಾಡು-
ವದು ಹರಿ ನಿನ್ನ ನಾಮದುಚ್ಚಾರಣೆ |
ಮಿತಿಯುಂಟೆ ನಿನ್ನ ನಾಮಮಹಿಮೆಗೆ
**ರುಕ್ಮಿಣೀಪತಿವಿಠಲ** ನಮೊ ನಮೋ ಎಂಬೆ ||೧||

---

## ಶ್ರೀ ಲಕ್ಷ್ಮೀಪತಿವಿಠ್ಠಲದಾಸಾರ್ಯಕೃತ ಉಗಾಭೋಗ

೬೩ ಕ್ಷೀರಸಾಗರಕ್ಕೆ ಶ್ರೀಹರಿಬಂದಂತೆ |
ಪ್ರಹ್ಲಾದನ ಮನಿಗೆ ನರಸಿಂಹ ಬಂದಂತೆ |
ವಿದುರನ ಮನಿಗೆ ಶ್ರೀಕೃಷ್ಣ ಬಂದಂತೆ |
ಗೋಪಿಯ ಮನಿಗೆ ಗೋವಿಂದ ಬಂದಂತೆ
**ಲಕ್ಷ್ಮೀಪತಿವಿಠಲನ** ದಿವ್ಯನಾಮವು |
ಎನ್ನ ನಾಲಿಗ್ಗೆ ಬಂದು ನಿಲ್ಲಲಿ ||೧||

---

## ಶ್ರೀ ಸಿರಿಪತಿವಿಠ್ಠಲದಾಸಾರ್ಯಕೃತ ಉಗಾಭೋಗ

೬೪ ಗುರುಹಿರಿಯರಿಗೆ ಎರಗದವಗೆ ಹರಿನಾಮ ಸೊಗಸುವದೆ |
ಕೆರವು ತಿಂಬೊ ನಾಯಿಗೆ ತುಪ್ಪಸಕ್ಕರಿ ಸೊಗಸುವದೆ |
ಹರಿನಾಮಕ್ಕೆ ಹರಿದಾಸರು ಕರಗುವರಲ್ಲದೆ |
ನರಕದ ಬಾಧೆಗೆ ಒಪ್ಪುವ ಮೂಢರು ಕರಗುವರೆ |
ಚಂದ್ರಕಿರಣಕ್ಕೆ ಚಂದ್ರಕಾಂತ ವಸರುವುದಲ್ಲದೆ |
ಕಲ್ಲೊಸರುವದೆ **ಸಿರಿಪತಿವಿಠಲ** || ೧ ||

---

## ಶ್ರೀ ವೇಂಕಟಪತಿವಿಠ್ಠಲಕೃತ ಉಗಾಭೋಗ

೬೫ ಯಾರ ಮನಿಗಳಿಗೆ ಹಾರೈಸಿ ಪೋದರೆ |
ಯಾರಿತ್ತ ಬಾ ಎನ್ನರೊ, ನುಡಿಯರೊ |
ಎಂಟುಗೇಣು ಶರೀರವ | ಒಂಟಿಗೇಣು ಮಾಡಿಕೊಂಡು |
ಗಂಟಲಲ್ಲಿ ಶಿರಬಗಿದು ಪರರ ಬೇಡುವ |
ಸಂಕಟ ಬಿಡಿಸುವದು **ಸಿರಿವೇಂಕಟಪತಿವಿಠಲ** || ೧ ||

---

## ಶ್ರೀ ಯದುಪತಿವಿಠ್ಠಲದಾಸಾರ್ಯಕೃತ ಉಗಾಭೋಗ

೬೬ ಇದು ಕಾಲವೈಯ್ಯ ಸಿರಿಪದುಮನಾಭನೆ ನಿನ್ನ |
ಪದಪದುಮಯುಗ್ಮಂಗಳ ಭಜಿಸೋದಕೆ
ಮುದಮನವನೆ ಇತ್ತು ಹೃದಯದೊಳಗೆ ನಿಂತು |
ಸದಮಲಜ್ಞಾನಭಕುತಿ ಉದಯಮಾಡಿ ನಿತ್ಯ |
ಸದನ ಸತಿ ತನಯ ಮೊದಲಾದಾಸುಸಂ-
ಪದಗಳ ನೀನಿತ್ತು ಸದಾ ಪಾಲಿಸೈಯ್ಯ |
ವಿದುರನ ಸಖ **ಸಿರಿಯದುಪತಿವಿಠಲ** ನೀ
ಕದನದೊಳಗೆ ನಿನ್ನ ಮೈದುನಗೆ ತೋರಿದಂತೆ ತೋರೋ || ೧ ||

---

## ಶ್ರೀ ವಿಠ್ಠಲದಾಸಾರ್ಯಕೃತ ಉಗಾಭೋಗ

೧೭ ಮಲಕೆ ಬಾಯಿಮುಕ್ಕಳಿಸು ಎಂಟುಬಾರಿ |
ಮೂತ್ರವಿಸರ್ಜನಕ್ಕೆ ನಾಲ್ಕುಬಾರಿ |
ಭೋಜನಕ್ಕೆ ಹನ್ನೆರಡುಬಾರಿ |
ಸ್ತ್ರೀಕೂಡೆ ಹದಿನಾರುಬಾರಿ |
ತೋಯಜನೇತ್ರ **ಶ್ರೀವಿಠ್ಠಲನ** ಆಜ್ಞಾ ‖ ೧ ‖

---

## ಶ್ರೀ ದಾನಿವಿಠ್ಠಲದಾಸಾರ್ಯಕೃತ ಉಗಾಭೋಗ

೧೮ ಜ್ಞಾನಿಕೃತಪಾಪಕ್ಕೆ ಅಜ್ಞಾನಿಕೃತಪಾಪಕ್ಕೆ |
ಮಾನವರು ಕಲಿಯುಗದಿ ಮರದೊಮ್ಮೆ ಸ್ಮರಿಸುವದಕ್ಕೆ |
ಏನೆಂಬೆ ನಾಮಶಕ್ತಿಗೆ ಯಿವರ ಪಾಪವೆ ಸಾಕೆ |
**ದಾನಿವಿಠ್ಠಲನ** ನಾಮಕೆ ಡಾರಿಗು ಸಂಶಯವ್ಯಾಕೆ ‖ ೧ ‖

---

## ಶ್ರೀ ಬಲ್ಲಿದವಿಠ್ಠಲದಾಸಾರ್ಯಕೃತ ಉಗಾಭೋಗ

೧೯ ನೆಲ್ಲಿಕಾಯಿಪರಿಮಿತ ಮಣ್ಣು ಲಿಂಗಕ್ಕೆ ಒಂದು |
ಎರಡು ಪೃಷ್ಠಗುಲ್ಲಿಸಿ ಎಡಗೈ ಗೈದು |
ನೀ ತೊಳದಿನ್ನು ಮೆಲ್ಲನೆ ಬಲಹಸ್ತಮಿತಿ ಅಲ್ಲವೆನ್ನದಿರಿ |
ಅಂಗಾಲಿಗೆ ಸಪ್ತ ಊರ್ಧ್ವಕೊನಿಗೆ ಮೂರು ಹಚ್ಚಬೇಕು |
**ಬಲ್ಲಿದವಿಠ್ಠಲನ** ಆಜ್ಞಾ ಇದು ಎಂದು |
ಯತ್ನಿಸಿ ಚರಿಸಬೇಕು ಸರ್ವಕಾಲ ‖ ೧ ‖

---

## ಶ್ರೀ ಸ್ವಾಮಿವಿಠ್ಠಲದಾಸಾರ್ಯಕೃತ ಉಗಾಭೋಗ

೨೦ ಎಡಬಲದ ಪದ ಮುಂದೆ ಇಡಲಾಗದು |
ವಂದೇಕಡೆ ಕಣ್ಣಿಗೆ ಕಾಣದಂತೆ ನಾ |

ಪೊಡವಿಯೊಳು ಕರ್ಮವನಾಚರಿಸಿ ಶುಚಿಯಾಗಿ |
ಸುಖಬಡಲಿಬೇಕು **ಸ್ವಾಮಿವಿಠ್ಠಲನಾಜ್ಞಾ** |
ಶ್ರಮವಾಗದು ಅಯ್ಯ ಶ್ರಮವಾಗುವದು || ೧ ||

---

## ಶ್ರೀ ಶ್ರೀಪಾದರಾಜರವರು ಮಾಡಿದ ಉಗಾಭೋಗಗಳು

೭೧ ಪರರ ಬಾಗಿಲ ಕಾಯ್ದು, ಪೋಯ್ತೆನ್ನ ಸಂಸಾರ |
ಪರರ ಪಾಡಿ ಪಾಡಿ ಪೋಯ್ತೆನ್ನ ಜನ್ಮವು |
ಪರರ ಪೊಗಳಿ ಪೊಗಳಿ ಪೋಯ್ತೆನ್ನ ನಾಲಿಗೆ |
ಪರಮಕರುಣಾಕರನೆ ದೊಡ್ಡ ಬೆಟ್ಟವ ಕಂಡು |
ವರ ಮೃಗಗಳು ಒದರಿದಂತೆ,
ಹರುಷವಾಗುವದೇನೊ |
ಕಲ್ಲುಗೋವಿನ ಹಾಲು ಕರು ಬಯಸುವಂತೆ |
ಅಕಟಕಟ ಮಂದಮತಿಯು ನಾನಲ್ಲವೆ |
ಬಲ್ಲಿದರಾಸೆ ಬಿಡಿಸೊ |
**ಸಿರಿರಂಗವಿಠ್ಠಲರೇಯ** || ೧ ||

೭೨ ಧ್ಯಾನವು ಕೃತಯುಗದಲ್ಲಿ |
ಯಜನವು ತ್ರೇತಾಯುಗದಲ್ಲಿ |
ದಾನವಾಂತಕನ ಅರ್ಚನೆಯು ದ್ವಾಪರದಲ್ಲಿ |
ಅವರಿಗೆಷ್ಟು ಫಲವೋ, ಕಲಿಯುಗದಲ್ಲಿ ಅನಾದಿ ಕೇಶವನೆಂದರೆ |
ಕೈಗೂಡುವದು, **ಮುದ್ದುರಂಗವಿಠ್ಠಲ** || ೨ ||

೭೩ ಎನ್ನ ಮನ ವಿಷಯಂಗಳಲ್ಲಿ ಮುಣುಗಿತೋ |
ಎನ್ನ ತನು ವೃದ್ಧಾಪ್ಯವನು ಐದಿತೋ |
ಅಂತಕರ ಕರೆ ಬಾಹೊ ಹೊತ್ತಾಯಿತೋ |
ಹೀಗೆ ತರಳರ ಬಿಡುವ ತಾಯಿಗಳುಂಟೆ |
ನೀ ಕರುಣನಿಧಿಯೆಂಬ ಬಿರಿದು ಸಲ್ಲಿಸು ದೇವ |

ಕರುಣಾಕರ **ಸಿರಿರಂಗವಿಠ್ಠಲರೇಯ** |
ನೀ ಕರುಣನಿಧಿಯೆಂಬ ಬಿರಿದು ಸಲ್ಲಿಸು ದೇವ |
ಕಾಲ ವಿಲಂಬವು ಇನಿತಿಲ್ಲವೈಯ್ಯ |
ವ್ಯಾಳ್ಯ ಅರಿತು ಬಿನ್ನಹಮಾಡಿದ || ೩ ||

೨೪ ಬಲ್ಲವನು, ಉಳ್ಳವನು, ನೀನಿರಲು ಭಜಿಸದೆ |
ಕ್ಷುಲ್ಲಕರ ಮತವಿಡಿದು ಸುಖವ ಬಯಸುವೆ ನಾನು |
ಕಲ್ಲುಗೋವಿನಹಾಲು ಕರು ಬಯಸಿದಂತೆ ನಾ |
ಹಲ್ಲು ಹೋಹದನರಿಯದಕಟಕಟ ಮಂದಮತಿ |
ಕಳ್ಳಗೋವನು ಹುಲ್ಲುಗಂಜಿಯನೆರದು |
ಸಲಹಿದಡೆ ಏನುಫಲ |
ಬಲ್ಲಿದಾಸಿಯ ಬಿಡಿಸೊ ನಮೋ **ರಂಗವಿಠ್ಠಲ** || ೪ ||

೨೫ ಅನಂತಕಾಲದಲ್ಲಿ ಯಾವ ಪುಣ್ಯದಲ್ಲಿ |
ಎನ್ನ ಮನ ನಿನ್ನಲ್ಲಿ ಎರಗಿಸೊ |
ಎನ್ನ ಮನ ನಿನ್ನಚರಣದೊಳೊಮ್ಮೆ ಇಟ್ಟು |
ಸಲಹೊ **ರಂಗವಿಠ್ಠಲ** || ೫ ||

೨೬ ಮನೆಯಿಂದ ಸಂತೋಷ ಕೆಲವರಿಗೆ ಲೋಕದೊಳು |
ಧನದಿಂದ ಸಂತೋಷ ಕೆಲವರಿಗೆ ಲೋಕದೊಳು |
ವನಿತೆಯಿಂ ಸಂತೋಷ ಕೆಲವರಿಗೆ ಲೋಕದೊಳು |
ತನಯರಿಂ ಸಂತೋಷ ಕೆಲವರಿಗೆ ಲೋಕದೊಳು |
ಇನಿತು ಸಂತೋಷವವರವರಿಗಾಗಲಿ ನಿನ್ನ |
ನೆನಹೆನಗೆ ಸಂತೋಷ **ರಂಗವಿಠ್ಠಲರೇಯ** || ೬ ||

---

## ಶ್ರೀಮದ್ವ್ಯಾಸರಾಜರಿಂದ ವಿರಚಿತವಾದ ಉಗಾಭೋಗಗಳು

೨೭ ಯಾವಜ್ಜೀವಪ್ರಣವವಿಚಾರಣಭಾವದೊಳಗಿಹದಿದೊಂದು ಪಥ |
ಯಜುರ್ವೇದ ಋಗ್ವೇದದಿ ದೇವತಾರ್ಚನೆ ಆಹೋದೊಂದು ಪಥ |

ಶ್ರೀಮದ್ವಾರಾಣಸಿಯಲಿ ಈ ಶರೀರವ ತೋಯಿಸಿಬಿಡುವದೊಂದು ಪಥ
ರಾಜ್ಯದೊಳಗೆ ಶ್ರೀವಿಷ್ಣು ದಿವ್ಯನಾಮವ ಕೀರ್ತಿಸುತಿಪ್ಪದೊಂದು ಪಥ |
ಯಾವನಾದರೊಮ್ಮೆ ನೆನೆದರೆ **ಶ್ರೀಕೃಷ್ಣನ** ದಿವ್ಯಮಂಗಳನಾಮ
ಎಲ್ಲಾ ಸುಪಥ || ೧ ||

೭೮ ನೀರಿಲ್ಲದ ಭಾವಿ ಊರಿಲ್ಲದ ಮಠವು |
ನೆಳಲಿಲ್ಲದ ಫಲವಿಲ್ಲದ ಮರ |
ಧನವಿಲ್ಲದ ದಾತ ದಯವಿಲ್ಲದ ನಾಥ |
ಮನಸಿಲ್ಲದ ಶಕುತಿ ಭಯವಿಲ್ಲದ ಭಕುತಿ |
ನರಹರಿ ಮುಕ್ಕುಂದ **ಶ್ರೀಕೃಷ್ಣ** ಎನ್ನದ |
ನರರಿದ್ದು ಫಲವೇನು ಇಲ್ಲದಿದ್ದರೆ ಏನು || ೨ ||

೭೯ ಆವಜನುಮದ ತಾಯಿ ಆವಜನುಮದ ತಂದೆ |
ಆವಜನುಮದ ಸತಿ ಆವಜನುಮದ ಸುತರು |
ಆವಜನುಮದ ಬಂಧು ಆವಜನುಮದ ಬಳಗ |
ಆವಜನುಮದ ಪಿಂಡ ಆವಂಗೆ ಜನಿಸುವೆವೋ |
ನೀ ಒಲಿದು ಪಾಲಿಸೈ **ಸಿರಿಕೃಷ್ಣರಾಯ** || ೩ ||

೮೦ ಇಂದಿಗೆಂತೊ ನಾಳಿಗೆಂತೊ ನಾಡದ್ದಿಗೆಂತೆಂದು |
ಬೆಂದ ಒಡಲಹೊರಿಯೆ ಹೋಯಿತು ಸಂಸಾರ |
ಹಿಂದೆ ನಾನಾಯೋನಿಯಲ್ಲಿ ಬೆಂದೆನೆಂಬರಿಕಿಲ್ಲ |
ಮುಂದೆ ಮುಕ್ತನಾಗಬೇಕೆಂಬೊ ಎಣಿಕೆಯಿಲ್ಲ |
ಗೊಂದಲ ತಾಪತ್ರಯದಂದುಗಕ್ಕೊಳಗಾಗಿ |
ಬೆಂದು ಮೂರ್ಖರೊಡನಾಡಿ ನಾ ನೊಂದೆನಯ್ಯ |
ಇಂದ್ರಿಯಂಗಳು ತಮ್ಮ ತಮ್ಮ ತಿರೆಗಳಿಗೆ |
ಬಂಧಿಸಿ ಬಳಲಿಸಿ ಎನ್ನ ಕಾಡುತಲಿವೆ |
ಬಂದೆನೆಂದರೆ ಬರಲೀಯವೊ ಎನ್ನನು |
ನಂದನ ಕಂದ **ಕೃಷ್ಣ** ತಂದೆ ವಿಚಾರಿಸಿ ಕಾಯಯ್ಯ || ೪ ||

೮೧ ಕಂಗಳು ಚಲುವನು ನೋಡಿ
ಕರ್ಣಂಗಳು ವಾರುತಿಯ ಕೇಳಿ |
ಹಿಂಗದೆ ನಾಮವ ವದನದಿ ಸವಿಯುತ್ತ ಪ-
ದಂಗಳ ಮನದಿ ನೆನೆನೆನೆದು ರೋ-
ಮಂಗಳು ಪುಳುಕಿತವಾಗಿ ಲೋ-
ಕಂಗಳ ಕಡಲೊಳು ಮುಳುಗಿ ಮೈಯ್ಯುಬ್ಬಿಕೊಬ್ಬುತ್ತ |
ಅಂಗವ ಮರೆದಾನಂದದಿ |
ರಂಗಾ ಎನುತಿದ್ದರೆ ಸಾಲದೆ |
ಮಂಗಳಜಯವನ್ನು ಕರುಣಿಸೋ ಮತ್ತೊಂದು |
ಸಂಗವನೊಲ್ಲೆನೊ **ಸಿರಿಕೃಷ್ಣರಾಯ** || ೫ ||

೮೨ ಜಾರರ ಸಂಗದಿಂದ ಬಂದ ಪಾತಕಕೆ ಗೋಪಿಜಾರನೆಂದರೆ ಸಾಲದೇ
ಚೋರರ ಸಂಗದಿಂದ ಬಂದ ಪಾತಕಗೆ ನವನೀತಚೋರನೆಂದರೆ ಸಾಲದೇ |
ಹಿಂಸಕರ ಸಂಗದಿಂದ ಬಂದ ಪಾತಕಗೆ ಕಂಸ ಹಿಂಸಕನೆಂದರೆ ಸಾಲದೇ
ಜಾರನೆಂದು ಚೋರನೆಂದು. ಹಿಂಸಕಾರನೆಂದು |
ನಾನೆನಿಯಲು ನಮೋ ನಮೋ **ಸಿರಿಕೃಷ್ಣ** || ೬ ||

೮೩ ನಿನ್ನ ಎಂಜಲನುಂಡು ನಿನ್ನ ಬೆಳ್ಪುಡೆಯುಟ್ಟು |
ಮುನ್ನ ಮಾಡಿದ ಕರ್ಮ ಬೆನ್ನಬಿಡದಿದ್ದರೆ |
ನಿನ್ನ ಓಲೈಸಲೇಕೋ ಕೃಷ್ಣ |
ಸಂಚಿತವನುಂಡು ಪ್ರಪಂಚದೊಳಗೆ ಬಿದ್ದು |
ನಿನ್ನ ಓಲೈಸಲೇಕೋ ಕೃಷ್ಣ |
ದಿನಕರನುದಿಸಿ ಕತ್ತಲೆ ಪೋಗದಿದ್ದರೆ |
ಹಗಲೇನೋ ಇರುಳೇನೋ ಕುರುಡಗೆ **ಸಿರಿಕೃಷ್ಣ** || ೭ ||

೮೪ ಹಿಂದೆ ಪ್ರಹ್ಲಾದನ್ನ ಪಾಲಿಸಿದೆ ಗಡ |
ದ್ರುಪದನಂದನಿಯ ಮಾನಮಾಕಾಯ್ದೆ ಗಡ |
ಭಕ್ತರಿಗೆ ಬಂದೆಡರನಾವಗಂ ಪರಿಹರಿಪೆ |

ನರದೇವ ಪೆಸರ್ಗೊಂಡಡೆ |
ಇಂದು ಮೊರೆಯಡರಂ ಕಾಣೆ |
ನಕಟಕಟಾ ಗೋವಿಂದ ನೀನಲ್ಲದೆ |
ವಿಚಾರಿಸುವರಿಲ್ಲ ಸಲಹೆಂದವಂ |
ಚಿತ್ತದೋಳ್ ಕೃಷ್ಣನಂ ಧ್ಯಾನಿಸುತ್ತ |
ನಿರ್ಭಯದೊಳಿರುತಿರ್ದನು || ೮ ||

೮೫ ಜಾರತ್ವವನು ಮಾಡಿದ ದೋಷಗಳಿಗೆಲ್ಲ ಗೋಪೀ-
ಜನಜಾರನೆಂದರೆ ಸಾಲದೇ |
ಚೋರತ್ವವನು ಮಾಡಿದ ಪಾಪಗಳಿಗೆಲ್ಲ ನವನೀತ-
ಚೋರನೆಂದರೆ ಸಾಲದೇ |
ಜೀವಹತ್ಯಮಾಡಿದ ದೋಷಗಳಿಗೆಲ್ಲ |
ಮಾವ ಕಂಸನ ಕೊಂದನೆಂದರೆ ಸಾಲದೆ |
ಪ್ರತಿದಿನದಲಿ ಮಾಡಿದ ಪಾಪಗಳಿಗೆಲ್ಲ |
ಪತಿತಪಾವನನೆಂದರೆ ಸಾಲದೆ |
ಇಂತಿಪ್ಪ ಮಹಿಮೆಯೊಳಗೊಂದನಾದರು ಸರಿಯೆ ಒಮ್ಮೆ |
ಸಂತಸ ನೆನಹುವರ ಸಲಹುವ ಸಿರಿಕೃಷ್ಣ || ೯ ||

೮೬ ಪರಮಪಾವನಮಾಡು ಪೂರ್ಣನೆ ನಿನ್ನ |
ಶರಣರ ಸೇವೆಯನು ಮಾಡುವಂತೆ |
ಕರುಣದಲಿಟ್ಟು ಸಲಹಯ್ಯ ತಂದೆ |
ಕರುಣಾಕರ ನಿರ್ಜಿತಮಾಯ ಸಿರಿಕೃಷ್ಣ || ೧೦ ||

೮೭ ಹರಿನಾಮಕ್ಕೆ ಹರಿದಾಸರು ಕರಗುವರಲ್ಲದೆ |
ನರಕಭಾಜನರು ಅಲ್ಪಮೂಢರು ಕರಗುವರೆ |
ಗುರುಹಿರಿಯರಿಗೆರಗದವಗೆ ಹರಿಭಕುತಿ ಸೊಗಸುವದೆ |
ಕೆರಹುತಿಂಬ ನಾಯಿಗೆ ತುಪ್ಪ ಸಕ್ಕರಿ ಸೊಗಸುವದೆ |
ಚಂದ್ರಕಿರಣಕ್ಕೆ ಚಂದ್ರಕಾಂತ ವಸರುವದಲ್ಲದೆ |
ಉರುಗಲ್ಲು ವಸರುವದೆ ಸಿರಿಕೃಷ್ಣ || ೧೧ ||

೮೮ ಗಾಳಿಗಿಕ್ಕಿದ ದೀವಿಗೆಯಂತೆ ಈ ದೇಹ ।
ವ್ಯಾಳ್ಯ ವ್ಯಾಳ್ಯಕ್ಕೆ ಶ್ರುತಿ ಸಾರುತಿದೆ ।
ಹಾಳುಹರಟೆಯಿಂದ ಫಲವೇನು ಬಾಯಿಲಿ ।
ನಾಲಿಗಿದ್ದು ನಾರಾಯಣನ ನೆನಿಯಬಾರದೆ ।
ಕಾಲಕಾಲದಿ ಹರಿಕಲ್ಯಾಣಗುಣಗಳ ಕೇಳದವನ ।
ಜನ್ಮ ವ್ಯರ್ಥ ನಮ್ಮ **ಸಿರಿಕೃಷ್ಣ** ॥ ೧೨ ॥

---

## ಶ್ರೀ ವಿಜಯೀಂದ್ರತೀರ್ಥಶ್ರೀಪಾದಂಗಳವರಿಂದ ರಚಿತವಾದ ಉಗಾಭೋಗ

೮೯ ತಪ್ಪುಗಳನರಸ ತನ್ನ ನಂಬಿದವರ ।
ಶ್ರೀಪತಿ, ತಪ್ಪುಮಾಡಿದ ಅಜಮಿಳ ಉಮಾಪತಿಮುಖರ ।
ತಪ್ಪು ನೋಡಿದನೆ ।
ಎನ್ನಪ್ಪ **ಶ್ರೀವಿಜಯೀಂದ್ರರಾಮ** ದಯಾನಿಧಿ ॥ ೧ ॥

---

## ಶ್ರೀಮದ್ವಾದಿರಾಜತೀರ್ಥಶ್ರೀಪಾದಂಗಳವರಿಂದ ರಚಿತವಾದ ಉಗಾಭೋಗಗಳು

೯೦ ಕಡಹದ ಮರನೇರಿ ಕಡುವಿಷದ ಕಾಳಿಂಗನ
ಮಡುವಿನ ನಡುವೆ ಧುಮುಕಿ ಸಡಗರದಲೋಲ್ಯಾಡುತಿರಲು ।
ಘುಡಿಘುಡಿಸುತ ಸರ್ಪ ಬಂದು ನೋಡಲಾತನ ।
ನಡುಭಾಗದಿ ಕಟ್ಟಿ ಅಡಿಗಡಿಗೆ ಕೊಳಲನೂದೆ ।
ಮೃಡಮುಖ್ಯಸುರರೊಡೆಯ ಪೊಡವಿನರನ ಹಾಂಗೆ ।
ತಡೆಯದೆ ಬಿಡಿಸಿ ಅವನ ಮಂಡೆಗಳ ಮೆಟ್ಟಿ ।
ಕ್ರೀಡಿಸೆ ಅವನ ಮಡದಿಯರ ನುಡಿಗೆ ಮೆಚ್ಚಿ ।
ಒಡನೆ ಕೃಪೆಮಾಡಿದಿ ಅಯ್ಯ ಸುರರಯ್ಯ ದಮ್ಮಯ್ಯ ।

4

ಎನ್ನಯ್ಯ ಫಣಿಶಯ್ಯ ಕೃಷ್ಣಯ್ಯ ಪಿಡಿ ಬ್ಯಾಗ ಕೈಯ್ಯ |
ಬಡಮತಿಯು ಜಡನು ನಾನು ಕೂಡಿದಘ
ಒದೆದು **ಹಯವದನ** ಕರಪಿಡಿದೆನ್ನ ರಕ್ಷಿಸಯ್ಯ || ೧ ||

೯೧ ಹರಿಪಾದ ನೆನೆವವಗೆ ಅರಿಗಳ ಭಯವಿಲ್ಲ |
ಹರಿಪಾದ ನೆನೆವವಗೆ ದುರಿತದ ಭಯವಿಲ್ಲ |
ಹರಿಪಾದ ನೆನೆವವಗೆ ಉರಗನ ಭಯವಿಲ್ಲ |
ಹರಿಪಾದ ನೆನೆವವಗೆ ಗಜಗಳ ಭಯವಿಲ್ಲ |
ಹರಿಪಾದ ನೆನೆವವಗೆ ರೋಗದ ಭಯವಿಲ್ಲ |
ಹರಿಪಾದ ನೆನೆವವಗೆ ವಿಷದ ಭಯವಿಲ್ಲ |
ಹರಿಪಾದ ನೆನೆವವಗೆ ಯಮನ ಭಯವಿಲ್ಲ |
ಸಿರಿಯರಸ **ಹಯವದನ** ನಿನ್ನ ಶರಣರಿಗಿನ್ನು || ೨ ||

೯೨ ಅಡಿಯಲಾಧಾರವಿಲ್ಲ ಪಿಡಿವರೆ ಕೊಂಬಿಲ್ಲ |
ಕಡೆಹಾಯಿಸುವರಿಲ್ಲ ಕಡುನೊಂದೆನೋ ನಲ್ಲ |
ಪಡೆದು ಹುಟ್ಟಿಲಿಲ್ಲ ಒಡೆಯನ ದಯವಿಲ್ಲ |
ಭಂಗ ಬಟ್ಟೆನಲ್ಲ |
ಬಡತನ ಬಿಡಲಿಲ್ಲ ಲೇಶ ಸುಖಬಡಲಿಲ್ಲ |
ಕಣ್ಣೀರು ತಪ್ಪಲಿಲ್ಲ |
ಕನ್ನಡಿಯೊಳಗಿನ ಗಂಟು ಕನಸಿನೊಳು ನೆಂಟ |
ಉಣಹೋಗಿ ಬಾಯ ಮರೆತಂತಾಯಿತಲ್ಲ |
ಎನ್ನ ಮನದುಬ್ಬಸ ಸ್ವಾಮಿ ಶ್ರೀಹರಿಬಲ್ಲ |
ಆರ ಮುಂದುಸರಲಿ **ಸಿರಿಹಯವದನ**ನಾಣೆ || ೩ ||

೯೩ ಹರಿಯನೆ ಮೆಚ್ಚು ಕಂಡ್ಯಾ ನಿನ್ನ ಗುಣ-
ವರಿಯೇ ನೀನಕಟಕಟ |
ಕರಿಯ ಕಾಯ್ದ ಶಿಶುವ ಸಲಹಿದ |
ಪಿರಿಯರ ನೀನೊಮ್ಮೆ ಕೇಳಯ್ಯ |
ಸಿರಿರಮಣನೇ ಗತಿ ಸರ್ವಾಂತರ್ಯಾಮಿ ಹಯವದನ **ಹಯವದನ**||೪|

*

೯೪ ನಿನ್ನ ನಂಬಿದೆ ಕೃಷ್ಣ ಅನ್ಯರೊಬ್ಬರ ಕಾಣೆ |
ಪನ್ನಗರಕ್ಷಕನೆ ಬಾರೋ ಇರಳು ಹಗಲು ನಿನ್ನ ಚರಣಕ್ಕೆ ಮೊರೆಹೊಕ್ಕೆ
ಸರಿಯಾರೊ ಈರೇಳು ಜಗದೊಳು **ಹಯವದನ** || ೫ ||

೯೫ ಅನ್ನದಾಸೆಗೆ ಪರರ ಮನೆಯ ಬಾಗಿಲ ಕಾಯ್ದು |
ಅನೇಕ ಬಾಧೆಗಳಿಂದ ನೊಂದೆನಯ್ಯ |
ಅನ್ಯತ್ರ ಪೊಡಮಟ್ಟು ಪೋಗಲೀಸರು **ಅ**ವರು |
ಮನ್ನಿಸಿ ಕೃಪೆಯಿಂದ ಕೂಡಿಕೊಂಡಿರರು |
**ಅ**ನಾಥಬಂಧು **ಶ್ರೀಹಯವದನನೆ** |
ನಿನ್ನ ಮನೆಯ ಕುನ್ನಿಯೆಂಜಲಿಕ್ಕಿ ನೀನು ಪೊರೆಯೊ ತಂದೆ || ೬ ||

೯೬ ಅರ್ಚಿಸುವೆನೆಂಬಾಸೆ, ಘನವಯ್ಯ ಹರಿ ನಿನ್ನ |
ಮೆಚ್ಚಿಸಿ ಬದುಕುವೆನೆಂಬ ಮನದಾಸೆ ಘನವೈಯ್ಯ |
ಹೆಚ್ಚಿ ಹಾರಿ ಹೋರಿ ಬೆಚ್ಚಿಸಿ ಉದರದ |
ಕಿಚ್ಚು ಪೆಚ್ಚಿಪ ಬಲುಹುಳಿಯಂತೆ ಹುಚ್ಚುಮಾಡಿಕೊಳುತಿದೆ |
ಅಚ್ಚ ಸರ್ವೇಶ ನಿಚ್ಚಟದಲಚ್ಯುತ ನಿನ್ನ ನೆಚ್ಚಿದೆನೊ |
ಸಚ್ಚಿದಾನಂದ **ಶ್ರೀಹಯವದನ** |
ಕೊಟ್ಟ ನಾನಾವ್ಯಾಧಿ ಕಳದು ದುಶ್ಚಿತ್ತ ಬಿಡಿಸಿ ಬ್ಯಾಗ ಸುಚ್ಚರಿತ್ರ
ಸಲಹಯ್ಯ || ೭ ||

೯೭ ಶಶಿಸಮವಕ್ತ್ರ ಕಂಜನೇತ್ರ ಕೌಸ್ತುಭಧರಾಧೀಶ |
ಉರಸ್ಥಳರಮ ಶ್ರೀವತ್ಸಲಸಿತ ಚತುರ್ದಶಭುವನದಕ್ಷ ರಕ್ಷ |
ಶುಭಚತುಷ್ಟಯೋದರವಳಿತ್ರಯ |
ಪೀನಜಘನ ಅಸಮವರ್ತುಳೋರು-
ಜಾನುಜಂಘ ಪದುಮಪದದಲಸುರಭೀಷಣ |
ನಿನ್ನ ಶಂಖ ಮಾಲೆ ಪುಸ್ತಕ ಬೋಧಮುದ್ರಾಂಕ-
ಲಸದಂಗುಳೀಯಕಶುಭಮಂಡಲ ಶುಭಕುಂಡಲ ಪೀತವಸನ |
ನಿಶಾಕರಬಿಂಬ ಸದಾ **ಹಯವದನ** ನಿಗಮಬೋಧ ಜಿಯ್ಯಾ || ೮ ||

೯೮ ನಾ ನಿನ್ನ ಮರೆತರೆ ನೀನೆನ್ನ ಮರೆವರೆ |
ಹಾನಿಯಲ್ಲವೆ ನಿನ್ನ ಭಕ್ತವತ್ಸಲತೆಗೆ |
ಹೀನತೆ ಬಂದಿತಾಗಿ "ನ ಋತೇ ತ್ವತ್ಕ್ರಿಯತೇ ಕಿಂಚನಾರೇ" ಎಂಬ
ಮಾನವ ನಿಂದಿತಾಗಿ ನೀನುದಾಸಿನವಾಡೆ ಖಳ-
ಸೇನೆ ಸಜ್ಜನರೊಂದಿತಾಗಿ |
**ಶ್ರೀನಾಥಹಯವದನ** ಶಿಶುಗಳ ತಪ್ಪುಗಳ |
ಜನನಿ ಜರಿದರೆ ಜಗವೆಲ್ಲ ನಗುವರೆ |
ಜಾಣರ ಜಾಣ ನೀನು || ೯ ||

೯೯ ನಿನ್ನ ಧ್ಯಾನದ ಶಕ್ತಿಯ ಕೊಡು |
ಅನ್ಯರಲಿ ವಿರಕ್ತಿಯ ಕೊಡು |
ನಿನ್ನ ಪಾದಾರವಿಂದದ ಭಕ್ತಿಯ ಕೊಡು |
ನಿನ್ನಲಿ ಭವಸಂಪತ್ತಿಯ ಕೊಡು |
ನಿನ್ನ ನೋಡುವ ರೂಪವ ಕೊಡು |
ಉನ್ಮತ್ತಜನರ ಅತ್ತತ್ತ ನೂಕುವ |
ಚಿತ್ತತತ್ವದ ಕೃತ್ಯವ ಕೊಡು |
ಕತ್ತಲೆ ಎನ್ನೊಳು ಭವ ಮುತ್ತಿದೆ **ಹಯವದನ** || ೧೦ ||

೧೦೦ ಎನಗೆ ನಿನ್ನಲ್ಲಿ ಭಕ್ತಿ ಇರಲಿ ಇಲ್ಲದಿರಲಿ |
ಜನರು ಹರಿದಾಸನೆಂದೆನ್ನ ಕರಿಯುತಾರೆ |
ಮನಪಾಪ ಕರಗುವಂತೆ ಅನುದಿನವು ನೀ |
ಎನ್ನ ಸಲಹಬೇಕಾಯಿತೆ |
ಅನಿಮಿತ್ತಸುಜನಬಂಧು |
ಕನಸೀಲಿ ಯಮಭಟರೆನ್ನ ಎಳದೊಯ್ವಾಗ |
ಘನತೆಗೆ ಸಾಲದಯ್ಯ ತನ್ನವರ **ಹಯವದನ** |
ಅನ್ಯರಿಗೊಪ್ಪಿಸಿದನೆಂಬೊ ದುರ್ವಾರ್ತೆ |
ತಪ್ಪಿಸಿಕೊಳ್ಳೊ ತಂದೆ ಮುನಿಜನವಂದ್ಯ || ೧೧ ||

೧೦೧ ಮದಮತ್ಸರದಿ ಬಂದು ಕೆಲವು ಕಾಲವ ಕಳದೆ |
ಕುದಿವ ಕಾಮಕ್ರೋಧಗಳಲ್ಲಿ ಸಂಕಟಗೊಂಬೆ |
ಅಂಧಕನಾಗಿ ಪರರಬೇಡಿ ಬೇಸರನಾದೆ |
ಸಾಧನಸಂಪದಕ್ಕೆ ಹರಿಪಾದವನ್ನು ನೆರೆನಂಬದದರೊಳಗೆ |
ಬಹುವ್ಯಾಧಿಗಳಲ್ಲಿ ಸಂಕಟಗೊಂಬೆ |
ಪದುಮನಾಭ **ಹಯವದನನ್ನ** ಪಾದವನ್ನು ನಂಬೊ ಮನವೆ ||
|| ೧೨ ||

೧೦೨ **ಸತ್ಯಂಭಿದಾ**ಶ್ರುತಿ, **ಮುಕ್ತಾನಾಂ ಪರಮಾಗತಿ** |
ಎಂಬೊ ಶ್ರುತಿ |
ಮುಕ್ತಿ ಸಂಸಾರದೊಳು ಭೇದ ಪೇಳಿತು |
**ಸರ್ವಂ ಮಿಥ್ಯಾ** ಐಕ್ಯವೆಂಬೊ ಮಾತು ಎಲ್ಲಿಹದೊ |
ಉಕ್ತಿ ವಿಚಾರಿಸಿ ಯುಕ್ತಿಯಿಂದಲಿ ಹರಿಭಕ್ತರ ಕೇಳೊ |
ತಿಳಿಯದಿದ್ದರೆ ಮತ್ತನಾಗದೆ **ಹಯವದನನ** ಭಜಿಸೊ |
ನೀ ಮುಕ್ತನಾಗೊ ಭವಸಾಗರದಿಂದ || ೧೩ ||

---

## ಶ್ರೀಪುರಂದರದಾಸಾರ್ಯ ವಿರಚಿತ ಉಗಾಭೋಗಗಳು

### ಮಂಗಳಾಚರಣೆ

೧೦೩ ಸತತ ಗಣನಾಥ ಸಿದ್ಧಿಯನೀವ ಕಾರ್ಯದಲಿ |
ಮತಿಪ್ರೇರಕಳು ಪಾರ್ವತೀದೇವಿ | ಮು-
ಕುತಿಪಥಕೀವ ಮನ ಮಹರುದ್ರದೇವರು | ಹರಿಭ-
ಕುತಿದಾಯಕಳು **ಭಾ**ರತೀದೇವಿ | ಯು-
ಕುತಿಶಾಸ್ತ್ರಗಳಲ್ಲಿ ವನಜಸಂಭವನರಸಿ |
ಸತ್ಕರ್ಮಗಳ ನಡಿಸಿ ಸುಜ್ಞಾನಮತಿ ಇತ್ತು |
ಗತಿಪಾಲಿಸುವ ನಮ್ಮ ಪವಮಾನನು |
ಚಿತ್ತದಲಿ ಆನಂದಸುಖವನೀವಳು ರಮಾ
ಭಕ್ತಜನರೊಡೆಯ **ಶ್ರೀಪುರಂದರವಿಠಲನು** |

ಸತತ ಇವರೊಳು ನಿಂತು ಈ |
ಕೃತಿಯ ನಡೆಸುವನು ||೧||

೧೦೪ ಆದಿಯಲಿ ಗಜಮುಖನ ಅರ್ಚಿಸಿ ಆರಂಭಿಸಲು |
ಮೋದದಿಂ ಸಲ್ಲಿಸುವ ಮನೋಭೀಷ್ಟವ |
ಸಾಧು ಜನರೆಲ್ಲ ಕೇಳಿ ಸಕಲ ನಿರ್ಜರರಿಗೆಲ್ಲ |
ಮಾಧವನೆ ನೇಮಿಸಿಪ್ಪನಧಿಕಾರವ |
ಆದರಿಂದಲವರೊಳಗೆ ತಾ ನಿಂದು ಕಾರ್ಯಗಳ |
ಭೇದಗೊಳಿಸದೆ ಮಾಳ್ಪ **ಪುರಂದರವಿಠಲ** || ೨ ||

೧೦೫ ಬಾರಿಬಾರಿಗೆ ನಿನ್ನ ಚರಣಕ್ಕೆ ಶರಣೆಂದೆ |
ಭಾರತಿರಮಣನೆ ಬಾರೊ ಮನೆಗಿಂದು |
**ಶ್ರೀಪುರಂದರವಿಠಲರಾಯನೆ** |
ಎಂದೆಂದಿಗು ನೀನೆ ಜಗಕೆ ಬಂಧು || ೩ ||

೧೦೬ **ಶ್ರೀಪತಿಯ ನಾಭಿಯಲಿ ಅಜ** ಜನಿಸಿದನು |
ಅಜನ ಮಾನಸಪುತ್ರರೇ **ಸನಕಾದಿಗಳು** |
ಸನಕಾದಿಗಳ ಶಿಷ್ಯರೇ **ದೂರ್ವಾಸರು** |
ದೂರ್ವಾಸರ ಶಿಷ್ಯರೇ **ಪರತೀರ್ಥರು** |
ಪರತೀರ್ಥರ ಶಿಷ್ಯರೇ **ಸತ್ಯಪ್ರಜ್ಞರು** |
ಸತ್ಯಪ್ರಜ್ಞರ ಶಿಷ್ಯರೇ **ಪ್ರಾಜ್ಞತೀರ್ಥರು** |
ಪ್ರಾಜ್ಞತೀರ್ಥರ ಶಿಷ್ಯರೇ **ಅಚ್ಯುತಪ್ರೇಕ್ಷರು** |
ಅಚ್ಯುತಪ್ರೇಕ್ಷರ ಕರಸಂಜಾತರೇ **ಮಹಾಭಾಷ್ಯಕಾರರು** |
**ಆ ಮಹಾಭಾಷ್ಯಕಾರರೇ** ನಮ್ಮ **ಗುರುಮುಖ್ಯಪ್ರಾಣ** |
ಗುರುಮುಖ್ಯಪ್ರಾಣಪತಿ **ಶ್ರೀಪುರಂದರವಿಠ್ಠಲನ** |
ದಾಸರಿಗೆ ನಮೋ ನಮೋ ನಮಃ || ೪ ||

## ಆಹ್ನಿಕ ಭಾಗ

೧೦೭ ಏಳುತ ಗೋವಿಂದ ಕೈಮುಗುವೆ |
ಕಣ್ಣಿಲಿ ತೆಗದು ನೋಡುವೆ ಶ್ರೀಹರಿಯ |
ನಾಲಿಗೆ ತೆಗದು ನಾರಾಯಣ ನರಹರಿ |
ಸೋಳಸಾಸಿರ ಗೋಪಿಯರರಸ |
ಎನ್ನಾಳುವ ದೊರೆ **ಪುರಂದರವಿಠಲ** ‖ ೫ ‖

೧೦೮ ಪ್ರಾತಃಕಾಲದ ನಿದ್ರೆ ಪರಿಹರಿಸಿ ಹರಿಸ್ಮರಿಸಿ |
ನಾಥ ಗೋವಿಂದಗೆ ಪ್ರದಕ್ಷಣೆ |
ಪ್ರೀತಿಯೊಳತಿಥಿಪೂಜೆ ಪುರಾಣ ಶಾಸ್ತ್ರವ ಕೇಳಿ |
**ನಾಥ ಶ್ರೀಪುರಂದರವಿಠಲಗೆ** ನಮೋ ಎನ್ನೋ ‖ ೬ ‖

೧೦೯ ಹತ್ತೈದು ಘಳಿಗೆ ಮೇಲೆ ಮತ್ತೈದು ಬರಲಿದ್ದು |
ಚಿತ್ತಜನೈಯ್ಯನನ ಚಿತ್ತದಿ ಧ್ಯಾನಿಸಿ |
ಅತ್ತ ಉದಯಕ್ಕೆ ಘಳಿಗಿ ಎರಡಿರುವಲ್ಲಿ |
ನಿತ್ಯ ಸ್ನಾನವನು ಮಾಡೊ ಆ-
ದಿತ್ಯಗರ್ಘ್ಯವನೀಡೆ ಉತ್ತುಮ ಜನರ |
ಪೊತ್ತಿದ್ದ ಪಾಪಗಳನೆಲ್ಲ ಉತ್ತರಿಸುವೆನೆಂದ |
**ಪುರಂದರವಿಠಲ** ‖ ೭ ‖

೧೧೦ ನುಡಿವೆ ಲಿಂಗ ಶೌಚಕ್ಕೊನ್ಮೆ ಗುದಕ್ಕೆ ಮೂರು |
ನೆಲ್ಲಿಕಾಯಿಯಷ್ಟು ಮಣ್ಣು ನಿಲಿಸಿ ನೀರೊಳು |
ತೊಳೆದು ಬಲಗೈಗೆ ಐದುಮಣ್ಣು |
ಎಡಗೈಗೆ ಏಳುಮಣ್ಣು |
ಜೋಡು ಪಾದಕ್ಕೆ ಐದೈದು ಮಣ್ಣು |
ಐದುಕಡೆಯೊಳಿಟ್ಟು **ಪುರಂದರವಿಠಲ** ಎನ್ನು ‖ ೮ ‖

೧೧೧ ಮಲಮೂತ್ರ ಮಾಡುವಾಗ ಕರದಲ್ಲಿ ಜಲವಿರೆ |
ಮಲಕೆ ಸಮಾನ ಅದು ಶುದ್ಧವಲ್ಲ |
ವಿಲಸಿತ ಕರ್ಮವಾಚರಿಸಿ ಹರಿಯ ನೆನೆಯೆ |
ಒಲಿವ **ಪುರಂದರವಿಠಲ ನಿತ್ಯ** || ೯ ||

೧೧೨ ಎರಡು ಘಳಿಗೆ ಬೆಳಗು ಇರಲು ಗೃಹಸ್ಥಗೆ ಸ್ನಾನ |
ಕರವ ಮುಗಿದು ಮಾಡು ಸಂಕಲ್ಪ ವೇದ |
ಪರಮಪುಣ್ಯ ಬ್ರಾಹ್ಮಣಧರ್ಮವೆಂದು |
**ಪುರಂದರವಿಠಲನು** ಮೆಚ್ಚಿ ಪಾಲಿಸುವ || ೧೦ ||

೧೧೩ ನಿಲಸಿರಿಯಾಗದು ಬಲದಲಿ |
ಪರರ ಧೋತ್ರ ಕಾಯಕೆ ಕರ್ಮ ಕಷಾಯವು |
ಸಿಲುಕಿ ಒದ್ದೆವಸ್ತ್ರ ಆಗದಯ್ಯ |
**ವಿಲಸಿತಪುರಂದರವಿಠಲನ** ಆಜ್ಞೆ || ೧೧ ||

೧೧೪ ಅಂದವಿಲ್ಲದ ಅಶಕ್ತಗೆ ಒಂದೆ ಅರಿವಿಯಲಿಂದ |
ಮೈದೊಳೆದು ಮಡಿಯುಟ್ಟು ನಾಮಗಳಿಟ್ಟು |
ಚಂದದಲಿ ಸಂಧ್ಯಾವಂದನ ಮಾಡೆ ಫಲವಹುದು |
ನಿಂದೆ ಹಿಂಗಲೆಂದು ಮಾಡಿದಾಮನುಜಂಗೆ |
ಇಂದ್ರ ಹದಿನಾಲ್ಕು ಮನು ನರಕವೆಂದು |
ಅಂದು **ಪುರಂದರವಿಠಲ** ಪೇಳಿದದು ಸಿದ್ಧ || ೧೨ ||

೧೧೫ ಕೂಪದಲ್ಲಾದರೂ ಕೊಳದಿ ಮುಳಗಿದಲ್ಲಾದರು |
ವಾಪಿಯಲ್ಲ್ಯಾದರೂ ಅಶುಚಿಯಲ್ಲ್ಯಾದರು |
ಪತ್ನಿನೆರೆದಾದರೂ ಗೋಪಿಚಂದನದ ಸಂಪರ್ಕ-
ವಿದ್ದರೆ ಮುಖ್ಯವಿದು ಕಾಲಸಂಧ್ಯಾವೆಂದು |
**ಶ್ರೀಲಕ್ಷ್ಮೀಪತಿ ಪುರಂದರವಿಠಲ** ಪೇಳ್ದ || ೧೩ ||

೧೧೬ ಕುಲಪತಿಯಾದರೂ ಸಂಧ್ಯಾವಂದನ |
ಗೈಯ್ಯದ ಪಾಪಿಯಾದರೂ ಪರ ದ್ರೋಹಿಯಾದರೂ |
ಪಾಪಗೈಯ್ಯುತ ಪರಪತ್ನಿಯ ನೆರೆದರೂ ಶ್ರೀಪತಿ-
ಗೋಪೀಚಂದನಲಿಪ್ತಾಂಗಗೆ ಭೂಪತಿ |
**ಪುರಂದರವಿಠಲ** ಪಾದವ ತೋರ್ವ ||೧೪||

೧೧೭ ಹಲವು ಕರ್ಮಗಳಿಗೆ ಹವಣೆ ಎರಡಾಚಮನ |
ಮಲಮೂತ್ರವಿಸರ್ಜನಿಗೆ ಮಾಡು ಮೂರು
ನಲಿದುಂಡವ್ಯಾಲೆ ನಾಲ್ಕು, ಲಲನೆಸಂಗಕೆ ಹನ್ನೆರಡು |
ಅಲ್ಲಿದ್ದು ಒಲಿವನು **ಪುರಂದರವಿಠಲ** |
ಆಚಮನವನು ಮಾಡೆ ||೧೫||

೧೧೮ ಎಡಗೈಯಿಂದಲಿ ನೀರು ಅಭ್ಯಂಗನಾಚಮನ |
ಪೊಡವಿಯೊಳಗೆ ದಾನಮಾಡಿದ ಮನುಜಗೆ |
ಎಡೆ ಮೃತ್ಯು ದಾರಿದ್ರ ತಾಕೆ ಕಟ್ಟುವುದು ಎಂದು |
ಒಡನೆ ಶ್ರುತಿ ಸ್ಮೃತಿ ಪೇಳುವದೋ |
ಬಡವರಾಧಾರಿ **ಶ್ರೀಪುರಂದರವಿಠಲನ್ನ** ಸರಿ |
ಅಡಿಗಳರ್ಚಿಸಿ ಬಾಳೋ ಅಬ್ಜದಂತೆ ||೧೬||

೧೧೯ ರಮೆಯು ರಮಣನು ತಾನು ಬೊಮ್ಮಾದಿಗಳನೆಲ್ಲ |
ಸುಮನಸರೊಳು ಸೂರ್ಯಗರ್ಘ್ಯವನಿತ್ತು |
ನಿಮ್ಮ ಪಾಪಗಳ ಚಿಮ್ಮಿ ಕಳಿಯಿರಿ ಎಂದು |
ಬೊಮ್ಮ ಮೂರುತಿ ತಾ ಘಮ್ಮನೆ ಪೇಳಿರೆ |
ನಿಮ್ಮಜ್ಞಾನದಿ ಸಿಲುಕಿ ಸುಮ್ಮನೆ ಕೆಡದಿರಿ |
ನಿಮ್ಮ ಶಿಕ್ಷಿಪನು **ಪುರಂದರವಿಠಲ** ||೧೭||

೧೨೦ ನಕ್ಷತ್ರ ಸೂಸಿ ಕಂಡ ನರಗೆ ಉತ್ತಮಸಂಧ್ಯಾ |
ನಕ್ಷತ್ರ ಒಂದರೆ ಕಂಡ ನರಗೆ ಮಧ್ಯಮಸಂಧ್ಯಾ |

ನಕ್ಷತ್ರ ದೂರ ಕಾಣದ ನರಗೆ ಅಧಮಸಂಧ್ಯಾ |
ನಕ್ಷತ್ರ ಬಿಟ್ಟರೆ ನಾರಾಯಣ **ಪುರಂದರವಿಠಲ** ಬಿಡುವ || ೧೮ ||

೧೨೧ ಅನಾಮಿಕಾ ಮಧ್ಯದ ಎರಡನೇ ಗೆರೆ ಆದಿ |
ಇನಿತು ಮಧ್ಯಾಂಗುಲಿ ಕೊನೆಗೆರೆ ಕೂಡಿಸಿ |
ಮನುಮೂರ್ತಿ ಪರಿಮಾಣ ಅಂಗುಷ್ಠದಿಂದಲಿ |
ಎಣಿಸು ತರ್ಜನಿಮೂಲಪರಿಯಂತರ |
ಘನ ಹತ್ತುಗೆರೆ ಜಪ **ಪುರಂದರವಿಠಲಗೆ** |
ಮನದಿ ಅರ್ಪಿಸುತ ಗಾಯತ್ರಿಜಪವ || ೧೯ ||

೧೨೨ ಉದಯಕಾಲದ ಜಪ ನಾಭಿಗೆ ಸರಿ |
ಹೃದಯಕೆ ಸರಿಯಾಗಿ ಮಧ್ಯಾಹ್ನದಿ |
ವದನಕೆ ಸಮನಾಗಿ ಸಾಯಂಕಾಲಕೆ ನಿತ್ಯ |
ಪದುಮಭವನ ತಂದೆ **ಪುರಂದರವಿಠಲಗೆ** |
ಇದೆ ಗಾಯತ್ರಿಯಿಂದ ಜಪಿಸಬೇಕು || ೨೦ ||

೧೨೩ ಒಂದೇ ಒಂದು ಬೆರಳ ಜಪ |
ಒಂದೇ ಐದು ಗೆರೆಯ ಜಪ |
ಒಂದೇ ಹತ್ತು ಪುತ್ರಜೀವಿಮಣಿಯ ಜಪ |
ಒಂದೇ ನೂರು ಶಂಖಮಣಿಯ ಜಪ |
ಒಂದೇ ಸಾವಿರ ಹವಳದ ಜಪ |
ಒಂದೇ ಹತ್ತುಸಾವಿರ ಮುತ್ತಿನ ಮಣಿಯ ಜಪ |
ಒಂದೇ ಹತ್ತುಲಕ್ಷ ಸುವರ್ಣಮಣಿಯ ಜಪ |
ಒಂದು ಕೋಟಿ ದರ್ಭೆ ಬೆಟ್ಟಿನ ಜಪ |
ಒಂದೇ ಅನಂತ ಶ್ರೀತುಲಸಿಮಣಿಯ ಜಪ-
ವೆಂದು **ಪುರಂದರವಿಠಲ** ಪೇಳ್ದ || ೨೧ ||

೧೨೪ ಮಧ್ಯಾಂಗುಲಿಮ್ಯಾಲೆ ಮಣಿಸರವಿಟ್ಟು |
ಬದ್ಧ ಅಂಗುಟವೆಣಿಸಬೇಕು |
ತಿದ್ದಿ ಅಂಗುಲಿ ಪಂಚ ಬೊಗ್ಗಿಸಿ ಇರಬೇಕು |
ಭದ್ರವಾಗಿ ನಿಲಿಸಿ ನೀರು ಸೋರದೆ ಗಾಯತ್ರಿ |
ಬುದ್ಧಿಪೂರ್ವಕದಿಂದ ಗೈಯುತ್ತಲಿರಬೇಕು |
ಮುದ್ದುಮೂರುತಿ ನಮ್ಮ **ಪುರಂದರವಿಠಲನ್ನ** |
ಎದ್ದೆದ್ದು ನೋಡುವ ಬಗೆ ಕಾಣಲಿ ಬೇಕು || ೨೨ ||

೧೨೫ ಬಡಮನುಜರಿಗೀಜಪವು ಸಿದ್ಧಿ ಬಾರದೊ |
ತೊಡೆಯು ಕೆಳಗೆ ಕೈ ಹಿಂದೆಮುಂದೆ ಕೈ ಚಾಚಿ |
ಬಿಡುತ ಮಂತ್ರಾರ್ಥ ನೋಡದಲೆ |
ಅಡಿಗಡಿಗೆ ಜಪವ ಮಾಡೆ ದೈತ್ಯರಿಗೆ ಅಹುದಯ್ಯ |
**ಒಡೆಯ ಪುರಂದರ**ವಿಠಲನೊಲಿಸಬೇಕಾದರೆ |
ಹಿಡಿಯೊ ಈಪರಿ ಪೇಳಿದ್ದ ವಚನತತ್ವಗಳ || ೨೩ ||

೧೨೬ ಆರು ಅಕ್ಷರವುಳ್ಳ ವ್ಯಾಹೃತಿಯಿಂದ ಓಂಕಾರ ವಿ-
ಸ್ತಾರವಾಗುವದು ಕೇಳಿ |
ಈ ರೀತಿ ಇಪ್ಪತ್ತುನಾಲ್ಕು ಅಕ್ಷರದಿಂದ |
ತೋರುತಲಿ ಗಾಯತ್ರಿ ರಚಿಸಿದ ಹರಿಯು |
ಮೆರೆವದೈ ಪುರುಷಸೂಕ್ತಾದಿ ಅನಂತ ವೇದರಾಶಿ |
ದೊರೆ ಎಂದು ಪೊಗಳುವ ಓಂಕಾರ ಶ್ರೀ-
ಕಾರ ಮೆರದ ದೈವತೊಂದು ಲಕ್ಷಗಳು |
ಈ ರೀತಿ ಅಶೇಷಗುಣಧಾರಯೆಂದು |
ನಾರಾಯಣೋದಪೂರ್ಣಗುಣಯುತ |
ಭರದಿ ಜ್ಞಾನರೂಪ ಶಬ್ದನೋ |
ಮೆರೆವ ದೇವೇಶ ಶತರ್ದನ ಧರಿಸಿದೆ |
**ಪುರಂದರವಿಠಲ** || ೨೪ ||

೧೨೭ ಸಂತತಾನಂತಕೋಟಿ ಸುವರ್ಣಪುಷ್ಪವನು |
ಸಂತಸ ಸಮರ್ಪಿಸಲು ಅಂತರಿಕ್ಷಫಲ |
ಕೋಟಿಕೋಟಿಯಗಣಿತ ಅರ್ಧ ತುಲಸಿದಲಕೆ |
ತಂತುಮಾತ್ರ ಭಕುತಿಯಿಂದ ತವಕದಿ ಪೂಜಿಸಲು ಶ್ರೀ-
ಮಂತ**ಪುರಂದರವಿಠಲ** ವೈಕುಂಠವೀವನು || ೨೫ ||

೧೨೮ ತುಲಸಿಯ ಸ್ವರ್ಣಪುಷ್ಪತೊಡಿಗೆ ನವರತ್ನದ |
ಬಿಲ್ವಪತ್ರಿಯ ಮುತ್ತು ಬೆಡಗಿನಾಭರಣ |
ತಲೆಬಾಗಿ ಅಡಿಗಡಿಗಡಿಗೆ ಶೃಂಗರಿಸಿ |
ವಿಲಸಿತ **ಪುರಂದರವಿಠಲ**ಗರ್ಪಿಸಬೇಕು || ೨೬ ||

೧೨೯ ಆದಿವಾರ ಸಂಜೆ ರಾತ್ರಿಲಿ ಅಂಗಾರಕ ಶುಕ್ರವಾರದಿ |
ಆದಿತ್ಯ ಸೋಮಗ್ರಹಣದಿ ಅಮವಾಸಿ ಹುಣ್ಣಿಮಿ |
ದ್ವಾದಶಿಲಿ ವೈಧೃತಿ ವ್ಯತೀಪಾತ ಸಂಕ್ರಮಣಗಳಲಿ ತುಳಸಿ ತೆಗದರೆ |
**ಪುರಂದರವಿಠಲನು** ಮುನಿವನು ಕಾಣಿರೋ || ೨೭ ||

೧೩೦ ಅಪರಾಧ ಹತ್ತಕೆ ಅಭಿಷೇಕ ಉದಕ |
ಅಪರಾಧ ನೂರಕೆ ಕ್ಷೀರ ಹರಿಗೆ |
ಅಪರಾಧ ಸಹಸ್ರಕೆ ಹಾಲು ಮೊಸರು ಕಾಣೊ |
ಅಪರಾಧ ಲಕ್ಷಕೆ ಜೇನು ಘೃತ |
ಅಪರಾಧ ಹತ್ತುಲಕ್ಷಕೆ ಬಲುಪರಿಕ್ಷೀರ |
ಅಪರಾಧ ಹೆಚ್ಚಿಗೆಗೆ ಹತ್ತು ಟೆಂಗಿನ ಹಾಲು |
ಅಪರಾಧ ಕೋಟಿಗೆ ಅಚ್ಚ ಜಲ |
ಅಪರಾಧ ಅನಂತಕ್ಷಮಿಗೆ ಗಂಧೋದಕ |
ಉಪಮೆರಹಿತ ನಮ್ಮ **ಪುರಂದರವಿಠಲಗೆ** |
ತಾಪಸೋತ್ತಮನ ಬಲುಮೆವಾಕ್ಯ || ೨೮ ||

೧೩೧ ಸ್ನಾನದಾನಕೆ ತುಳಸಿದಳ |
ಪ್ರಯೋಜನಕೆ ತುಲಸಿ |
**ಶ್ರೀಪುರಂದರವಿಠಲಗೆ** |
ಪ್ರೀತಿಯು ತುಳಸಿ || ೨೯ ||

೧೩೨ ಮೂರುದಿನ ಕಣಿಗಲಪುಷ್ಪ |
ಮೂರು ತಿಂಗಳ ಕಮಲ ಅಚ್ಯುತಾರ್ಚನೆಗೆ |
ಆರುತಿಂಗಳ ಬಿಲ್ವ ಸಂವತ್ಸರ ತುಲಸಿ |
ಬಾಹುದು **ಶ್ರೀಪುರಂದರವಿಠಲ** ಪೇಳ್ದ || ೩೦ ||

೧೩೩ ಶ್ರೀತುಲಸಿ ಇಲ್ಲದಿರೆ ಶ್ರೀಕೃಷ್ಣತುಲಸಿ |
ತುಲಸಿದಳ ಇಲ್ಲದಿರೆ ತುಲಸಿಕಾಷ್ಟ |
ಇಲ್ಲದಿರೆ ತುಲಸಿಶುಷ್ಕ ಅದು ಹಳೆತಾದರೆ ಏನು |
ಅವನೀಶಗರ್ಪಿಸಬಹುದು |
ಇಲ್ಲದಿರೆ ಚಿಗುರುತುಲಸಿ ಇಲ್ಲದಿರೆ ಮುಗುಳುತೆನೆ |
ಇಲ್ಲದಿದ್ದರೆ ಬೇರು ಮಣ್ಣು |
ಇಲ್ಲದಿರೆ ತುಲಸಿ ತುಲಸಿ ಎಂದು ಕೂಗಿದರೆ ಸಾಕು |
ಇಲ್ಲದಿರೆ **ಪುರಂದರವಿಠಲಯ್ಯ** ಎಲ್ಲ ವಸ್ತುಗಳ ಈಡ್ಯಾಡುವ ||೩೧||

೧೩೪ ಕುಟುಂಬಭರಣಕೆರಡಷ್ಟು ಬ್ರಾಹ್ಮಣರಿಗೆ
ವಿಧಿ ಗಡಗಡಿಸಿತು |
ಮೂರು ವಾನಸ್ಥರಿಗೆ ವಿಧಿಸಿತು |
ಜಡಮತಿಯ ಬಿಟ್ಟು ಯತಿಗಳಿಗೆ ನಾಲ್ಕರಷ್ಟು |
**ಕುಂಡಲೀಶಯನ ಪುರಂದರವಿಠಲ**
ಈಪರಿ ಪೊಡವಿಜನರಿಗೆ ವಿಧಿಕರ್ಮ ನಿರ್ಮಿಸಿದ || ೩೨ ||

## ಸಾಧನ ಭಾಗ

೧೩೫ ಉದಯಕಾಲದೊಳೆದ್ದು ಗದಗದನೆ ನಡುಗುತ |
ಮುದಿಗುಬ್ಬಿಯಂದದಿ ಅದರಿಂದಲೇನಹುದು |
**ಪುರಂದರವಿಠಲನ** ನಾಮ ನೆನೆಯದನಕ ಫಲವೇನು || ೩೩ ||

೧೩೬ ಸ್ನಾನಮಾಡುವರು, ಆಸನಹಾಕುವರು,
ಚಪ್ಪಾಳೆಯನಿಕ್ಕುವರು, ಹಕ್ಕಿಯೆಬ್ಬಿಸುವರಂತೆ, ಬ-
ಕನ ವೈರಿಯಂತೆ ಧ್ಯಾನವರಿಯದೆ |
**ಪುರಂದರವಿಠಲನೊಲಿಯ** ಮಾನವನೆ || ೩೪ ||

೧೩೭ ಹಸಿವ್ಯಾಯಿತೇಳು ದೇವರತೊಳಿಯೆಂಬರು |
ಹಸನಾಗಿ ಮನದಲ್ಲಿ ಮುಟ್ಟಿ ಪೂಜೆಯ ಮಾಡರು |
ಹಾಸಿ ಹಾವಿನ ಬುಟ್ಟಿಯಂತೆ ಮುಂದಿಟ್ಟುಕೊಂಡು |
ವಸುಧಿಯೊಳಗೆ ಉರಗಗಾರನಾಟಮಾಡುವರಯ್ಯ |
ಪರಧನ ಪರಸತಿ ಪರಧನಕ್ಕೆರಗೋರು |
ತ್ವರೆಗಳಿದ್ದರೆ ದುರಿತ ಪೋಗುವದೆ || ೩೫ ||

೧೩೮ ತನುಶುದ್ಧಿಯಿಲ್ಲದಗೆ ತೀರ್ಥದಲಿ ಫಲವೇನು |
ಮನಶುದ್ಧಿಯಿಲ್ಲದಗೆ ಮಂತ್ರದಲಿ ಫಲವೇನು |
ಮಿಂದಲ್ಲಿ ಫಲವೇನು ಮೀನ ಮೊಸಳಿಗಳಂತೆ |
ವಾಸದಲಿ ಫಲವೇನು ಶ್ರೀಶೈಲಕಾಗೆಯಂತೆ |
ಹೊರಗೆ ಮಿಂದು ಒಳಗೆ ಮಾಯದವನ ಕಂಡು |
ಬೆರಗಾಗಿ ನಗುತಿಪ್ಪ **ಪುರಂದರವಿಠಲ** || ೩೬ ||

೧೩೯ ಹೃದಯದ ಮಲವನ್ನು ತೊಳಿಯಲರಿಯದೆ ತಾವು |
ಉದಯದೊಳೆದ್ದು ಮಿಂದು ಗದಗದ ಮುಪ್ಪುವಂತೆ |
ಅದರಿಂದಲೇನುಫಲ **ಪುರಂದರವಿಠಲ** || ೩೭ ||

೧೪೦ ಕೋಳಿಗೆ ಯಾತಕ್ಕೆ ಹೊನ್ನಿನ ಪಂಜರವು |
ಬೋಳಿಗೆ ಯಾತಕ್ಕೆ ಜಾಜಿಮಲ್ಲಿಗಿದಂಡೆ |

ಆಳಿಲ್ಲದವನಿಗೆ ಅರಸುತನವ್ಯಾತಕ್ಕೆ |
ಮಾಳಿಗೆ ಮನೆಯು ಬಡವನಿಗ್ಯಾತಕೆ |
ಕೇಳಯ್ಯ ದೇವ **ಪುರಂದರವಿಠಲ** || ೩೮ ||

೧೪೧ ಅಲ್ಲದ ಕರ್ಮವ ಆಚರಿಸುವ ಕೆಟ್ಟ |
ಎಲ್ಲರೊಳಗೆ ವಿರೋಧಿಸುವ ಕೆಟ್ಟ |
ಬಲ್ಲಿದರೊಳಗೆಲ್ಲ ಕೆಣಕ್ಯಾಡುವ ಕೆಟ್ಟ |
ಫುಲ್ಲಲೋಚನ **ನಮ್ಮ ಪುರಂದರವಿಠಲನ** ನೆನೆಯದವ ಕೆಟ್ಟ ||೩೯||

೧೪೨ ಕುಡಿಕೊಟ್ಟ ಅಮೃತವೆಂಬ ನೊರೆಹಾಲನೊಲ್ಲದೆ |
ಬಟ್ಟಲೊಳಗೆ ತಿರಿತಿಂಬುವರು ಕೆಲರು |
ಪಟ್ಟವಾಳಿಯು ಮುಂದೆ ಅರವಿಯ ಬಯಸುವರು |
ಭ್ರಷ್ಟರಿಗೇನೆಂಬೆ **ಪುರಂದರವಿಠಲ** || ೪೦ ||

೧೪೩ ಆಯುಸ್ಸು ಇದ್ದರೆ ಅನ್ನಕ್ಕೆ ಕೊರತಿಲ್ಲ |
ಜೀವಕ್ಕೆ ಎಂದೆಂದಿಗೆ ತನುಗಳ ಕೊರತಿಲ್ಲ |
ಸಾವು ಹುಟ್ಟು ಎಂಬೋದು ಸಹಜ ಲೋಕದೊಳಗೆ |
ಕಾಲಕಾಲದಿ ಹರಿಯ ಕಲ್ಯಾಣಗುಣಗಳ |
ಕೇಳದವನ ಜನ್ಮ ವ್ಯರ್ಥ **ಪುರಂದರವಿಠಲ** || ೪೧ ||

೧೪೪ ಹಾರುವನ್ನ ಕಟ್ಟಬೇಕು ಹಾರುವನ್ನ ಕುಟ್ಟಬೇಕು |
ಹಾರುವನ್ನ ಕಂಡರೆ ಚಂಪೆಮ್ಯಾಲೆ ಹೊಡಿಯಬೇಕು |
ಹಾರುವರು ಪರಧನಕೆ ಹಾರುವರು ಪರಸತಿಗೆ |
ಊರೊಳಗಾರುಮುಂದಿ ಹಾರುವರ್‍ಕೈಧಾರೆ |
ನೀನೆ ವಿಚಾರಿಸೊ **ಪುರಂದರವಿಠಲ** || ೪೨ ||

೧೪೫ ಬೆಲ್ಲದ ಕಟ್ಟೆಯ ಕಟ್ಟಿ ಬೇವಿನ ಬೀಜವ ಹಾಕಿ |
ಹಾಲುಮಳೆಗರೆದರು ವಿಷಹೋಗಬಲ್ಲದೆ |
ಏನು ಓದಿದರೇನು ಏನು ಕೇಳಿದರೇನು |
ಮನದೊಳು ಮದ ಅಹಂಕಾರವು ಮಾಣದನಕ |

ಏನು ಓದಿದರೇನು, ಏನು ಕೇಳಿದರೇನು |
**ಪುರಂದರವಿಠಲನ** ದಾಸರ ಒಲಿಸದೆ |
ಏನು ಓದಿದರೇನು ಏನು ಕೇಳಿದರೇನು || ೪೩ ||

೧೪೬ ಹೊಲೆಯ ಹೊರಗ್ಹಾನೆಂದು ಒಳಗೆ ದೇವರನಿಟ್ಟು |
ಘಣಘಣ ಗಂಟೆಯ ಭಾರಿಸೋರು ಈ |
ತನುವಿನ ಕಾಮಕ್ರೋಧ ಹೊಲೆಯಲ್ಲವೆ |
ಈ ಮದಮತ್ಸರಗಳು ಹೊಲೆಯಲ್ಲವೆ |
ಈ ಪರಧನ ಪರಸತಿ ಹೊಲೆಯಲ್ಲವೆ |
ಈ ಗುರುನಿಂದೆ ಪರನಿಂದೆ ಹೊಲೆಯಲ್ಲವೆ |
ಹೊರಗಿದ್ದ ಹೊಲೆಯರ ಒಳಗೆ ಬಚ್ಚಿಟ್ಟುಕೊಂಡು |
ಇದಕೇನು ಮದ್ದು **ಶ್ರೀಪುರಂದರವಿಠಲ** || ೪೪ ||

೧೪೭ ಜಗದಂತರ್ಯಾಮಿ ನಿನ್ನ ಬಟ್ಟಬಯಲೆಂದು |
ಬಗೆವವನೆ ಜಗದೊಳಗೆ ಬ್ರಹ್ಮಹತ್ಯಕಾರ |
ಅಗಣಿತಗುಣ ನೀನು, ನಿನ್ನ ಗುಣಗಳೆಂಟೆಂದು |
ಬಗೆವವನು ಜಗದೊಳಗೆ ಸುವರ್ಣಸ್ತೇಯೀ |
ಜಗದೊಡೆಯ ನೀನಿರಲು, ಅನ್ಯದೇವರೊಡೆಯರೆಂದು |
ಬಗೆವವನೆ ಜಗದೊಳಗೆ ಮದ್ಯಪಾಯಿ |
ಜಗದ ತಂದೆ ನೀನು, ನೀನೆ ತಾನೆಂದು |
ಬಗವವನು ಜಗದೊಳಗೆ ಗುರುತಲ್ಪಗ |
ಇವರ ಸಂಸರ್ಗಿಯೇ ತತ್ಸಂಯೋಗಿ |
ಇವರೇ ಮುಖ್ಯ ಪಂಚಮಹಾಪಾತಕಿಗಳು |
ಅದು ಕಾರಣದಿಂದ ನೀ ನಿತ್ಯ ನೀ ಸತ್ಯ |
ನೀ ಸೇವ್ಯ ಅಗಣಿತಗುಣನಿಲಯನೇ |
ನಿನ್ನ ದಾಸರಸಂಗ ಸಕಲಾರ್ಥಸಾಧನವು |
ಮನ್ನಿಸೆನ್ನ **ಪುರಂದರವಿಠಲರೇಯ** || ೪೫ ||

|| ಶ್ರೀಕೃಷ್ಣಾರ್ಪಣಮಸ್ತು ||

೧೪೮ ತುಲಸಿಯಿರಲು ತುರುಚಿಯುನೆ, ತಂದೆ
ಗಂಗೆಯಿರಲು, ತೋಡಿದ ಕೂಪದಿ ಪಾನವ ಮಾಡಿದೆ
ರಾಜಹಂಸವಿರಲು 'ಕೋ" ಎಂದು ಕೂಗುವ ಕೋಳಿಗೆ ಹಾತೊರೆದೆ
ಬಾವನ್ನವಿರಲು, ಬೇವಿನ ನೆರಳೊಳಗೊರಗಿದೆ
ತಾಯ ಮಾರಿ, ತೊತ್ತುತರುವ ಮಾನವನಂತೆ
**ಪುರಂದರವಿಠಲ** ನೀನಿರಲನ್ಯತ್ರ ದೈವಗಳ ಎಣಿಸಿದೆ ॥ ೪೬ ॥

೧೪೯ ದಿನ ದಿನದಿ ನೆನೆದು ನೆನೆದು ತೋದು ತೋದು
ಜನ್ಮ ವ್ಯರ್ಥವಾಯಿತು, ಒಂದೆ ಹರಿಗೋಲು ವೈಕುಂಠಕ್ಕೆ
ನಿನ್ನವಧಾನವು ಕಂಡಿಲ್ಲ ಹರಿ
ಆದಿಮೂರುತಿ **ಶ್ರೀಪುರಂದರವಿಠಲ** ನಿನ್ನವಧಾನವು ಕಂಡಿಲ್ಲ
ನಿನ್ನ ಪಾದತೀರಥದಲಿ ನಡೆಯಲಿ ಎನ್ನ ಮನ
ನಿನ್ನ ಪಾದತೀರಥದಲಿ ನಡೆಯಲಿ ಎನ್ನ ಮನ ॥ ೪೭ ॥

೧೫೦ ಕತ್ತೆ ಕುದುರೆಯಾಗಿ ಹರಿಗೆ ಶರಣೆನಲುಂಟೆ
ಹಂದಿ ನಾಯಿಯಾಗಿ ಹರಿಗೆ ಶರಣೆನಲುಂಟೆ
ಕ್ರಿಮಿಕೀಟನಾಗಿ ಹರಿಗೆ ಶರಣೆನಲುಂಟೆ
ಮರತೆಯಾ ಮಾನವ ಹಿಂದಿನನುಭವಗಳನು
ನಿನಗೆ ಮಾನುಷಜನ್ಮವು ಬರಲಾಗಿ
**ಪುರಂದರವಿಠಲನ್ನ** ನೆನಿಕಂಡ್ಯ ಎರಗು ಕಂಡ್ಯ ॥ ೪೮ ॥

೧೫೧ ಗುರುಕರುಣ ಪೊಂದುವುದು ಪರಮ ದುರ್ಲಭವಯ್ಯ
ಪರಿಪರಿಯ ವ್ರತಗಳನು ಚರಿಸಲು ಫಲವೇನು
ಶರೀರದಿ ಪುತ್ರಮಿತ್ರಕಳತ್ರಾದಿ ಬಾಂಧವರು
ಇರಿಸೋರೆ ಸದ್ಗತಿಗೆ ಸಾಧನದಿ
ನಿರುತವು ಗುರುಪಾದ ನಿಜವಾಗಿ ಮನದ-
ಲರಿತು ಭಜಿಸಲು ಅಖಿಲಸಂಪದವಕ್ಕು **ಪುರಂದರವಿಠಲ** ॥೪೯॥

೧೫೨ ತನುವೆಂಬ ದೊಡ್ಡ ದೋಣಿಯಲ್ಲಿ
ಹರಿನಾಮವೆಂಬ ಬಾಂಡೋಲು ತುಂಬಿ
ವ್ಯವಹಾರವನು ಮಾಡುವೆನಯ್ಯ
ಇಂದ್ರಿಯಗಳೆಂಬೊ ಸುಂಕ ಅಡ್ಡಾದರೆ
ಮುಕುಂದನ ಮುದ್ರಿಯನ್ನೆ ತೋರಿ
ಹೊಳಿಯ ದಾಟುವೆನಯ್ಯ
**ಪುರಂದರವಿಠಲನಲ್ಲಿಗೆ ಪೋಗಿ**
ಮುಕುತಿಸುಖ ಲಾಭ ಪಡೆವೆ ||೫೦||

೧೫೩ ಉದಯಾಸ್ತಮಾನವೆಂಬೆರಡು ಕೊಳಗವನಿಟ್ಟು
ಆಯುಸ್ಸು ಎಂಬೊ ರಾಶಿ ಅಳದು ಹೋಗುವ ಮುನ್ನೆ
ಹರಿಯ ಭಜಿಸಬೇಕು, ಮನಮುಟ್ಟಿ ಭಜಿಸಿದರೆ
ತನ್ನ ಕಾರ್ಯವು ಘಟ್ಟಿ, ಹಾಗಲ್ಲದಿದ್ದರೆ
ತಾಪತ್ರಯ ಬೆನ್ನಟ್ಟಿ ವಿಧಿಯೊಳು ಗೈವ
ದಿಟ್ಟ**ಪುರಂದರವಿಠಲನ** ಕರುಣದ ದೃಷ್ಟಿ ಅವನ ಮೇಲಿದ್ದರೆ
ಆಗ ಜಗಜಟ್ಟಿ ||೫೧||

೧೫೪ ಹರಿಯ ನೆಚ್ಚುವನೆ ಬಿಲ್ಲಾಳು
ಹರಿಯ ಭಜಿಸದವನೆ ಮಾಸಾಳು
ಹರಿಯೆಂದು ವದರದವನದೆಲ್ಲ ಹಾಳು
**ಪುರಂದರವಿಠ್ಠಲ** ಪಾರ್ಥನ ಮನೆಯಾಳು ||೫೨||

೧೫೫ ಅನುಕೂಲವಿಲ್ಲದವರ ವರ್ಜಿಸಬೇಕು
ವಿನಯದಿ ಗುರುಹಿರಿಯರಲ್ಲಿ ಮನ್ನಣೆ ಬೇಕು
ಮನದಿ ತನ್ನ ತಾನೆ ತಿಳಿದುಕೊಳಬೇಕು
ವನಜನಾಭನ ಭಕ್ತರ ಸಂಗವಿರಬೇಕು
ಜನರಪವಾದ ನಿಂದೆಗಂಜಿಕೊಳಬೇಕು
**ಪುರಂದರವಿಠಲನ್ನ** ಚರಣಸ್ಮರಣೆ ಬೇಕು ||೫೩||

೧೫೬ ಬಡಗುನಾಡಿನೊಳು ವಿಪರೀತ ಹುಟ್ಟಿ
ಮಿದ್ದು ಮಿದ್ದು ಮಾಡಿದ ಕಣಕದ ರೊಟ್ಟಿ
ಅದಕೆ ಸಾಧನವಾದ ತೊವ್ವೆ ಕಟ್ಟಿಯ ಕಟ್ಟಿ
ಅದರ ಮ್ಯಾಲೆ ಹೆತ್ತ ತುಪ್ಪವನೊಟ್ಟಿ
**ಪುರಂದರವಿಠ್ಠಲನ** ಪ್ರಸಾದವೆ ಘಟ್ಟಿ
ಆರಿಗೆ ದೊರಕುವುದೊ ಅವನೆ ಜಗಜಟ್ಟಿ ॥ ೫೪ ॥

೧೫೭ ಎಲ್ಲ ಒಂದೆಂಬರ ಉದರವನ್ನೆ ಸೀಳಿ
ಹಲ್ಲುದರಗುಟ್ಟಲಿಬೇಕು ಹರಿಭಕ್ತರಾದವರು
ಸಲ್ಲದು ಸಲ್ಲದು ಈ ಮಾತು ಸಂಶಯ ಬ್ಯಾಡಿ
ಕಲ್ಲು ನಾರಿಯ ಮಾಡಿದ **ಪುರಂದರವಿಠ್ಠಲ** ॥ ೫೫ ॥

೧೫೮ ಅಚ್ಯುತನ ಭಕುತರಿಗೆ ಮುನ
ಮೆಚ್ಚದವನು ಪಾಪಿ
ಆ ನರನೊಳಾಡಿ ನೋಡಿ ನುಡಿಯೆ
ಮನುಜವೇಷದ ರಕ್ಕಸನೊಳಾಡಿ ನುಡಿದಂತೆ
**ಸಚ್ಚಿದಾನಂದಾತ್ಮ ಪುರಂದರವಿಠಲನು**
ಮೆಚ್ಚ ಮೆಚ್ಚನು ಕಣೋ ಎಂದೆಂದಿಗು ॥ ೫೬ ॥

೧೫೯ ಧ್ವಜ ವಜ್ರಾಂಕುಶರೇಖಾಂಕಿತವಾದ
ಹರಿಯ ಪಾದಾಂಬುಜವ ಸೇವಿಪ
ಅಜಭವರ ಭಾಗ್ಯವ ನೋಡು
ಕುಜನಮತವ ಬಿಡು
ದುರ್ಜನರ ಸಂಗವ ಸುಡು
ತ್ರಿಜಗವಂದ್ಯನ ಪಾಡು
ಮುಕುತಿ ಸುಖವ ಬೇಡು
ಗಜೇಂದ್ರಗೊಲಿದ ಸಿರಿಕೃಷ್ಣನ್ನ ಧ್ಯಾನವಮಾಡು

ನಿಜ **ಪುರಂದರವಿಠಲರಾಯನ**
ಬಿಡದಲೆ ಕೊಂಡಾಡು || ೫೭ ||

೧೬೦ ಹಗಲು ನಾಲ್ಕುಜಾವ ಹಸಿವೆಯಲಿ ಕಳೆದನು
ಇರಳು ನಾಲ್ಕು ಜಾವ ವಿಷಯಕ್ಕೆ ಕೂಡಿದೆನು
ವ್ಯರ್ಥವಾಯಿತೆಲ್ಲ, ಈ ಸಂಸಾರ ಸುಖವಿಲ್ಲ
**ಕೇಳಯ್ಯ ತಂದೆ ಶ್ರೀಪುರಂದರವಿಠಲ** || ೫೮ ||

೧೬೧ ಹಗಲು ನಿನ್ನ ನೆನೆಯಲಿಲ್ಲ ಹಸಿವು ತೃಷೆಯಿಂದ
ಇರಳು ನಿನ್ನ ನೆನೆಯಲಿಲ್ಲ ನಿದ್ರೆಯ ಭರದಿಂದ
ಎರಡರ ಬಾಧೆಗೆ ನಾನೊಳಗಾದೆನೊ **ಪುರಂದರವಿಠಲ** || ೫೯ ||

೧೬೨ ಪರರ ಮನೆಯ ಬಾಗಿಲ ಕಾಯ್ದು ಪರಿತಪಿಸುವುದಕಿಂತ
ಮರಣವೇ ಲೇಸು ಸಿರಿದೇವಿರಮಣ
ಪರರ ಮನಸು ಹಿಡಿದು ತಿರಿತಿಂಬುವುದಕಿಂತ
ಮುರಹರನ ದಾಸರ ಮನೆಯ ಬೋನವೆ ಲೇಸು
**ಪುರಂದರವಿಠ್ಠಲ ನಿನ್ನ** ಊಳಿಗದವನ ಸುಖ ಲೇಸು || ೬೦ ||

೧೬೩ ಕೀರ್ತಿ ಕಿಂಕರಗೆ ಅಪಕೀರ್ತಿ ಮಂಕುಗಳಿಗೆ
ನಷ್ಟ ಕಷ್ಟರಿಗೆ ಲಾಭ ಮಹಾತ್ಮರಿಗೆ
ದಾರಿದ್ರ್ಯ ದ್ರೋಹಿಗಳಿಗೆ ವಚನಭ್ರಷ್ಟರಿಗೆ ಅಂಧಂತಮಸು
ಸಂದೇಹವಿಲ್ಲಿದಕೆ **ಪುರಂದರವಿಠಲ** || ೬೧ ||

|| **ಶ್ರೀಹರಿಪ್ರಸಾದೋಽಸ್ತು** ||

---

## ಪ್ರಮೇಯಭಾಗ

೧೬೪ ನೀನೆ ಕರ್ತನು ಅಕರ್ತರು ಅಜಭವೇಂದ್ರಾದ್ಯಮರರು
ನೀನೆ ಸ್ವತಂತ್ರ ಅಸ್ವತಂತ್ರರವರು

ನೀನೆ ಸಾರಾತ್ಮಕನಾಗಿ ಸ್ವೀಕರಿಸುವವ
ಜ್ಞಾನ ನಿನ್ನಧೀನ ಕರ್ಮ ನಿನ್ನಧೀನ
ಅನಾದಿಕಾಲದಿ ಇರುವ ಜೀವರಿಗೆ
ನೀನೆ ಸುಖವನೀವ ನೀನೆ ದುಃಖವನೀವ
ಜೀವ ಕರ್ಮ ಜ್ಞಾನ
ಅನಾದಿಗಳು ನಿನ್ನಧೀನವಯ್ಯ ಅನಾದಿಕರ್ಮ ನೀನೆ
**ಪುರಂದರವಿಠಲ** ನೀನೆ ಸಲಹೋ ನಿನ್ನಡಿ ಪೊಂದಿದವರ || ೬೨ ||

೧೬೫ ಸಂಕರುಷಣನೆನಿಸಿ ಶಂಕರನ ಅಂತರ್ಯಾಮಿಯಾಗಿ ಸಂಹಾರ ಮಾಡುವಿ
ಸರಸಿಜೋದ್ಭವನಲ್ಲಿ ವಾಸುದೇವನಾಗಿ ಸೃಷ್ಟಿಯ ಮಾಡುವಿ
ಅನಿರುದ್ಧನೆನಿಸಿ ಪಾಲನೆ ಮಾಡುವಿ ಅನಾದಿಕಾಲದಿ
ನೀನು ನಿತ್ಯ, ಬ್ರಹ್ಮರುದ್ರರೆ ಅವರು
**ಬೊಮ್ಮ ಪುರಂದರವಿಠಲರೇಯ** || ೬೩ ||

೧೬೬ ತ್ರಿವಿಧಜೀವರಿಹರು ಜಗದೊಳಗೆ
ಭವ ವಿಮೋಕ್ಷ ಅವರವರ ಗತಿಗಳು
ಜೀವಜೀವರಿಗೆ ಭೇದ, ಜೀವ ಜಡರಿಗೆ ಭೇದ,
ಜಡ ಜಡಕೆ ಭೇದ ಜಡಪರಮಾತ್ಮಂಗೆ ಭೇದ
ಇಂತು ಜ್ಞಾನವು ನಿತ್ಯವಾಗಲೆಂದು ಸಂತತ
ವರದ ಶ್ರೀಪತಿ **ಪುರಂದರವಿಠ್ಠಲರೇಯ**
ಇಂತು ಜ್ಞಾನವು ನಿತ್ಯವಾಗಲಿ ಎನಗೆ || ೬೪ ||

೧೬೭ ಜೀವಜೀವಕೆ ಭೇದ ಜಡಜಡಕೆ ಭೇದ
ಜೀವಜಡ ಪರಮಾತ್ಮನಿಗೆ ಭೇದ
ಜೀವಜೀವ ಮುಕ್ತಾಮುಕ್ತರ ಭೇದ
ಸಂಸಾರದೊಳು ಭೇದ ಮುಕ್ತರೊಡೆಯ
ಹರಿ ಭಕ್ತರಾಧೀನ ಜಗತ್ಕರ್ತ ನೀ ಸಲಹಯ್ಯಾ
**ಪುರಂದರವಿಠಲ** || ೬೫ ||

೧೬೮ ಸಾಗರ ಸಡ್ಡಿಯು ಧರೆಯು ಕೂರಿಗಿ ಮಾಡಿ
ಶಿವ ಬ್ರಹ್ಮರೆಂಬೊ ಎರಡೆತ್ತು ಹೂಡಿ
ಜೀವರಾಶಿಗಳೆಂಬೊ ಬೀಜವ ತಕ್ಕೊಂಡು
ಬಿತ್ತುವಾತ ಇಂದ್ರನು ಬೆಳೆಸುವಾತ ಚಂದ್ರನು
ಬಿತ್ತಿದ ಬೆಳಸುವನು ಕಿತ್ತಿಕೊಂಡೊಯ್ವಾಗ
ದುಃಖಬೇಡೆಂದ **ಪುರಂದರವಿಠಲ** ||೬೬||

೧೬೯ ಎಡಕೆ ಭಾವಿಯುಂಟು ಬಲಕೆ ಕೆರೆ ನೋಡು
ಮುಂದೆ ಕಾಡ್ಗಿಚ್ಚು ಹತ್ತಿತು ಎಲೊ ದೇವ
ಹಿಂದೆ ಹುಲಿ ಬೆನ್ನಟ್ಟಿ ಬರುತಲಿದೆ
ಯಾರಿಗೆ ಯಾರೋ **ಪುರಂದರವಿಠಲ** ||೬೭||

೧೭೦ ಗರ್ಭವಾಸ ಗಿರ್ಭವಾಸ ಜನನ ಗಿನನ
ಮರಣ ಗಿರಣ ದುಃಖ ಗಿಖ್ಖ ಪ್ರಾ-
ರಬ್ಧ ಗೀರಬ್ಧ ಆಗಾಮಿ ಗೀಗಾಮಿ
ಸಂಚಿತ ಗಿಂಚಿತ ಎಲ್ಲ **ಪುರಂದರವಿಠಲ** ||೬೮||

೧೭೧ ಯಾರು ಮುನಿದು ನಮಗೇನು ಮಾಡುವರಯ್ಯ
ಯಾರು ಒಲಿದು ನಮಗೇನು ಕೊಡುವರಯ್ಯಾ
ಕೊಡಬೇಡ ನಮ್ಮ ಕುನ್ನಿಗೆ ಕಾಸನು
ಈಯ್ಯಲು ಬೇಡ ನಮ್ಮ ಶುನಕಗೆ ತಳಗಿಯ
ಆನೆಯ ಮೇಲೆ ಪೋಪಗೆ ಶ್ವಾನ ಮುಟ್ಟಬಲ್ಲದೆ
ನಮಗೆ **ಶ್ರೀಪುರಂದರವಿಠಲನೇ ಸಾಕು** ||೬೯||

೧೭೨ ಗಂಡ ಮಾಡಿದ ಪಾಪ ಹೆಂಡತಿಗಿಲ್ಲ
ಹೆಂಡತಿ ಮಾಡಿದ ಪಾಪ ಗಂಡಗುಂಟು
ಹೆಂಡತಿ ಮಾಡಿದ ಪುಣ್ಯ ಗಂಡಗಿಲ್ಲ
ಗಂಡ ಮಾಡಿದ ಪುಣ್ಯ ಹೆಂಡತಿಗುಂಟು

ಜೀವ ಜೀವರು ಭೇದ
ನೀನೆ ಉದ್ಧರಿಸಯ್ಯಾ **ಪುರಂದರವಿಠಲ** || ೭೦ ||

೧೭೩ ಸಂತತಿ ಆಹೋದು ರಾಮಾಯಣ ಕೇಳಲು
ಸಕಲಪಾಪ ಹರವು ಭಾರತ ಕೇಳಲು
ತಂತುಮಾತ್ರ ವಿಷ್ಣುಪುರಾಣವ ಕೇಳಲು
ತತ್ವವಿವೇಕವು ಬಾಹೋದು, ಅಂತರವರಿತು
ಭಾಗವತ ಕೇಳಲು ಆಹೋದು ಜ್ಞಾನಭಕ್ತಿವೈರಾಗ್ಯವು
ಸಂತತ **ಪುರಂದರವಿಠಲನ್ನ** ಸಂಕೀರ್ತನ ಪಾಡಲು
ಸಕಲವು ಬಾಹೋದು ಸಾಯುಜ್ಯವು || ೭೧ ||

೧೭೪ ಹರಿಸರ್ವೋತ್ತಮನೆಂಬೊ ಹಿರಿಪುತ್ರನಿರಲಾಗಿ
ಈ ನರಪುತ್ರರಿಂದ ಆಹೋದೇನಯ್ಯಾ
ಪದ್ಮನಾಭನೆಂಬೊ ಈ ದೊಡ್ಡಪುತ್ರನಿರಲಾಗಿ
ಈ ದಡ್ಡಪುತ್ರರಿಂದ ಆಗೋ ಗತಿಯೇನಯ್ಯಾ
ಶ್ರೀಕೇಶವನೆಂಬೊ ಜ್ಯೇಷ್ಠಪುತ್ರನಿರಲಾಗಿ
ಈ ನಷ್ಟಪುತ್ರರಿಂದಲಾಗೋ ಗತಿ ಏನಯ್ಯಾ
**ಪುರಂದರವಿಠಲನೆಂಬೊ** ಪುಣ್ಯ ಮಿತ್ರನಿರಲಾಗಿ
ಈ ಅನ್ಯ ಮಿತ್ರರಿಂದಲಿ ಆಗೋ ಗತಿಯೇನಯ್ಯಾ || ೭೨ ||

೧೭೫ ಇದೇ ಮುನಿಗಳ ಮನದ ಕೊನೆತಾವು
ಇದೇ ಬ್ರಹ್ಮಾದಿಗಳ ಹೃತ್ಕಮಲದತಾವು
ಇದೇ ಅರಿವ ಸುಜ್ಞಾನಿಗಳಿಗೆ ವೈಕುಂಠವು
ಇದೇ ದ್ವಾರಕವು ಇದೆ ಕ್ಷೀರಾಂಬುಧಿ
ಇದೇ **ಪುರಂದರವಿಠಲನ** ಮನಮಂದಿರ || ೭೩ ||

೧೭೬ ಯಶೋದೆ ಕೋಪಿಸಿಕೊಂಡು ಎಡವುತ ಮುಗ್ಗುತ
ಕೋಲುಕೊಂಡು ಕೊಲ್ಲಹೊಡಿಯಬೇಕೆಂದು

ಕೋಲುಕೊಂಡುಬಂದಳು ನಿನ್ನಬಳಿಗೆ ನೀನೆಲ್ಲಿ
ಪೊಕ್ಕೆಯೊ ಪೇಳೊ **ಪುರಂದರವಿಠಲ** || ೭೪ ||

೧೭೭ ಸುಖವು ಬಂದರೆ ತಮ್ಮಿಂದ ಆಯಿತೆಂಬೋರು
ದುಃಖವು ಬಂದರೆ ದೈವಮಾಡಿತೆಂಬೋರು
ಸುಖಕೆ ತಾನ್ಯಾರು ದುಃಖಕೆ ತಾನ್ಯಾರು
ಸುಖದುಃಖವು ಎರಡೂ ಶ್ರೀಹರಿ ನಿನ್ನ ಅಧೀನವಲ್ಲವೆ
**ಪುರಂದರವಿಠಲರೇಯ** || ೭೫ ||

೧೭೮ ಕೆಟ್ಟನೆಂದೆನಲ್ಯಾಕೆ ಕ್ಲೇಶ ಪಡುವದ್ಯಾಕೆ
ಹೊಟ್ಟಿಗೋಸುಗ ಪರರ ಕಷ್ಟಪಡಿಸಲ್ಯಾಕೆ
ಬೆಟ್ಟದ ಮ್ಯಾಲಿದ್ದರೇನು ವನದೊಳಗಿದ್ದರೇನು
ಹುಟ್ಟಿಸಿದ ದೇವರು ಹುಲ್ಲುಮೇಯಿಸುವನೆ
ಘಟ್ಯಾಗಿ ನೆರೆನಂಬು **ಪುರಂದರವಿಠಲನ್ನ**
ಸೃಷ್ಟಿಮಾಡಿದ ಬ್ರಹ್ಮಸ್ಥಿತಿಮಾಡಲರಿಯನೆ ||೭೬||

## ಹರಿನಾಮಮಹಿಮೆ

೧೭೯ ಆವಿನ ಕೊಂಬಿನ ತುದಿಯಲ್ಲಿ ಸಾಸುವೆ ನಿಂತಿದ್ದ ಕಾಲವೆ
ನಿನ್ನ ನೆನೆದವ ಜೀವನ್ಮುಕ್ತನಲ್ಲವೆ
ಸರ್ವಕಾಲದಲಿ ಒರಲುತ ನರಳುತ
ಹರಿಹರಿ ಎಂದವ ಜೀವನ್ಮುಕ್ತನೆಂಬುವುದು
ಏನು ಆಶ್ಚರ್ಯವಯ್ಯಾ **ಪುರಂದರವಿಠಲ** || ೭೭ ||

೧೮೦ ಅಣಕದಿಂದಲಾಗಲಿ ಡಂಭದಿಂದಾಗಲಿ
ಎಡಹಿದಡಾಗಲಿ ಬಿದ್ದಡಾಗಲಿ
ತಾಗಿಡಡಾಗಲಿ ತಾಕಿಲ್ಲದಡಾಗಲಿ
ಮರೆದು ಮತ್ತೊಮ್ಮೆಯಾಗಲಿ
ಹರಿಹರಿ ಅಂದವನಿಗೆ ನರಕದ ಭಯವ್ಯಾಕೆ
ಯಮಪಟ್ಟಣ ಕಟ್ಟಿದರೇನು ಯಮಪಟ್ಟಣಬಟ್ಟೆ ಬಯಲಾದರೇನು
ಹರಿದಾಸರಿಗೆ **ಪುರಂದರವಿಠಲ** || ೭೮ ||

೧೮೧ ಹರಿಯೆಂಬುವುದೆ ಸುದಿನವು
ಹರಿಯೆಂಬುವುದೆ ತಾರಾಬಲವು
ಹರಿಯೆಂಬುವುದೆ ಚಂದ್ರಬಲವು
ಹರಿಯೆಂಬುವುದೆ ವಿದ್ಯಾಬಲವು
ಹರಿಯೆಂಬುವುದೆ ದೈವಬಲವು
ಹರಿ **ಪುರಂದರವಿಠಲನ** ಬಲವೆ ಬಲವಯ್ಯ ಸಜ್ಜನರಿಗೆ || ೭೯ ||

೧೮೨ ಹರಿಯೆ ನಿಮ್ಮ ಸ್ಮರಣೆಯ ಮಾಡಲು
ದುರಿತ ಪೀಡಿಪುದುಂಟೆ
ಅರಿತು ಭಜಿಪರಿಗೆಲ್ಲ ಕೈವಲ್ಯ ಜೋಕೆ
ಕರುಣವರಿತು ತನ್ನ ಮಗನ ಕೂಗಿದವಗೆ
ಮರಣಕಾಲದಿ ಒದಗಿದಿ **ಪುರಂದರವಿಠಲ** || ೮೦ ||

೧೮೩ ಹರಿಹರೀ ಎಂದು ಕರೆಯೋದೆ ತಡ
ಕರದಲ್ಲಿಗೆ ಬರುವ ನರಹರಿಯೆಂದು
ಕರಿಯುವದೆ ತಡ ಕರದಲ್ಲಿಗೆ ಬರುವ
ಸುರನರಲೋಕದಲ್ಲೆಲ್ಲಿದ್ದರೂ ಕರದಲ್ಲಿಗೆ ಬರುವ
**ಪುರಂದರವಿಠಲನೆಂದು** ಕರಿಯೊ ಕರದಲ್ಲಿಗೆ ಬರುವ || ೮೧ ||

೧೮೪ ಮನಚಂಚಲದಿ ತಪವು ಮಾಡಲು ಅಶಕ್ಯವು
ಘನಅಜ್ಞಾನದಿ ಕೆಲವು ಕರ್ಮವು ಹತ್ತವು
ಮನಶುದ್ಧಿಯಿಲ್ಲದ ಧ್ಯಾನವು ವೃಥಾ
ಇನಿತದರಿಂದ **ಪುರಂದರವಿಠಲ**
ಈ ಯುಗದಲ್ಲಿ ಸ್ಮರಣೆ ಲೇಸೆಂದ || ೮೨ ||

೧೮೫ ಮಾನವರು ಕೃತಯುಗದಿ ಮಾಡಬೇಕು ತಪವನು
ಜ್ಞಾನಸಾಧನಬೇಕು ಆದಿತ್ರೈತಾಯುಗದಿ
ಏನೆಂಬೆ ದ್ವಾಪರದಿ ಯಜ್ಞಸಾಧನ ಬೇಕು
**ಪುರಂದರವಿಠಲನ** ಗಾನ ದಾನ ಕಲಿಯುಗದಿ ಬೇಕು || ೮೩ ||

೧೮೬ ಬೆಟ್ಟದಂಥ ದುರಿತವು ಸುತ್ತಮುತ್ತಲೊಟ್ಟರೆ
ಶ್ರೀಕೃಷ್ಣನಾಮಕಿಡಿಬಿದ್ದು ಬೆಂದುಹೋದದು ಕಂಡೆ
ಎಲೆಎಲೆ ದುರಿತವೆ ತಿರುಗಿ ನೋಡದೆ ಹೋಗು
ಎಲೆಎಲೆ ದುರಿತವೆ ಮರಳಿ ನೋಡದೆ ಹೋಗು
ನಿನ್ನ ಕಂಡರೆ ಶಿರವ ಚಂಡಾಡುವನು
ಇನ್ನೊಮ್ಮೆ ಕಂಡರೆ ಶಿಕ್ಷಿಸದೆ ಬಿಡನು ಪುಂಡರೀಕಾಕ್ಷ
**ನಮ್ಮ ಪುರಂದರವಿಠಲ** || ೮೪ ||

೧೮೭ ಚೋರಗೆ ಚಂದ್ರೋದಯ ಸೊಗಸುವುದೆ
ಜಾರಗೆ ಸೂರ್ಯೋದಯ ಸೊಗಸುವುದೆ
ಶ್ರೀರಮಣನ ಕಥೆಯು ಕಳ್ಳಗೆ ಮೆಚ್ಚುವುದೆ
ನಾರಿಗೆ ನಯನವಿಲ್ಲದೆ ಚಲುವಿಕೆಯು
ಹರಿಸ್ಮರಣೆಯಿಲ್ಲದ ಹಾಡಿಕೆಯು
ಅರಣ್ಯರೋದನ **ಪುರಂದರವಿಠಲ** || ೮೫ ||

೧೮೮ ನವರತ್ನಗಳು ಕಂಡ ಕಂಡ ಠಾವಿನಲ್ಲಿ ಉಂಟೆ
ನವವಿಧಭಕುತಿ ಕಂಡಕಂಡವರಿಗುಂಟೆ
ದೇವ ನಿನ್ನಭಕುತಿ ಸುಖಾನುಭವ ಸೂರೆ
ಕಂಡರೆ ಬಾರದು ಕಲಿತರೆ ಬಾರದು
**ಪುರಂದರವಿಠಲ** ನಿನ್ನ ದಯವಿಲ್ಲದನಕ || ೮೬ ||

೧೮೯ ಉದಕ ಧಾವತಿಯುಂಟು ಶಿವನ ಪೂಜೆಗೆ ನಿತ್ಯ
ಪದುಮಸಂಭವನಿಗೆ ಹೃದಯದಂಡನೆ ಬೇಕು
ಮಧುರ ನುಡಿಯೇ ಸಾಕು ಚಲುವ ಶ್ರೀಕೃಷ್ಣಗೆ
ಒದಗಿ ಪೊರೆವ ನಮ್ಮ **ಪುರಂದರವಿಠಲ** || ೮೭ ||

೧೯೦ ಶ್ರೀರಾಮ ಎಂದರೆ ಭಾಗ್ಯಕ್ಕೆ ಕಾರಣ
ಶ್ರೀಕೃಷ್ಣ ಎಂದರೆ ದುರಿತನಿವಾರಣ
ಎಚ್ಚತ್ತಿರು ಎಲೆ ಮನವೆ ಎಚ್ಚತ್ತಿರು ಎಲೆ ಮನವೆ

*

ಯಾಕೆ ಬೈಲನೆ ನೆನವೆ ಅಚ್ಯುತಾನಂತ ಗೋವಿಂದನೆಂಬ ನಾಮದಲಿ
ಎಚ್ಚೆತ್ತಿರಲೆ ಮನವೆ ಯಾಕೆ ಬೈಲನೆ ನೆನವೆ
ಅಚ್ಯುತನೆ ಆದಿಕೇಶವನೆ ಅನಾಥಬಂಧೋ ಸಲಹೆಂದು
ಅಚ್ಯುತನ ಪಾದವನೆ ನಂಬು ಗತಿಯೆಂದು
ಎಚ್ಚರಿತ್ತಿರಲೆ ಎಲೆ ಮನವೆ ಅನಂತಾನಂತದೇವರ ದೇವ ರಂಗೇಶ
ಅನಂತನೆಂದರೆ ಬಲುಭಯ ವಿನಾಶ
ಅನಂತನೆಂದರೆ ತಡೆವ ಯಮ ಪಾಶ
ಎಚ್ಚತ್ತಿರಲೆ ಮನವೆ ಗೋವಿಂದನೆಂದರೆ ಸಕಲ ತೀರ್ಥಸ್ನಾನ
ಗೋವಿಂದನೆಂದರೆ ಸಕಲಮೂರ್ತಿಧ್ಯಾನ ಗೋವಿಂದನೆಂದರೆ
**ಪುರಂದರವಿಠಲ** ಕೊಡುವ ಸಕಲಸುಜ್ಞಾನ || ೮೮ ||

೧೯೧ ಕ್ಷೀರಸಾಗರಕ್ಕೆ ಶ್ರೀರಮಣ ಬಂದಂತೆ
ಪ್ರಲ್ಹಾದಗೆ ಒಲಿದು ನರಸಿಂಹ ಬಂದಂತೆ
ಭಗೀರಥನ ಮನೆಗೆ ಶ್ರೀಗಂಗೆ ಬಂದಂತೆ
ಮುಚುಕುಂದನ ಮನೆಗೆ ಮುಕ್ಕುಂದ ಬಂದಂತೆ
ವಿದುರನ ಮನೆಗೆ ಶ್ರೀಕೃಷ್ಣ ಬಂದಂತೆ
ಲಕ್ಷ್ಮೀಕಾಂತ **ಪುರಂದರವಿಠಲ** ಬರೆ ನನ್ನ ನಾಲಿಗೆ
ತುದಿಯಲಿ ಗಾಯನಮಾಡುತ ಧನ್ಯನಾದೆ || ೮೯ ||

೧೯೨ ಹತ್ತು ಗೋದಾನಕೆ ಸಮ ಹರಿಗೆ ವೃಷದಾನ
ಹತ್ತು ವೃಷಭಕೆ ಸಮ ಹಾರುವ ಕುದುರೆ ಕಾಣಿರೊ
ಹತ್ತು ಕುದುರೆಗೆ ಸಮ ಹಸ್ತಿದಾನ ಕಾಣಿರೊ
ಹತ್ತು ಹಸ್ತಿಗೆ ಸಮ ಒಂದು ಕ್ರತುವು
ಹತ್ತು ಕ್ರತುವಿಗೆ ಸಮ ಹರಿಭಕ್ತರಿಗೆ ಕನ್ಯಾದಾನ ಕಾಣಿರೊ
ಹತ್ತು ಕನ್ಯಾದಾನಕೆ ಸಮ ಹಸಿದವಗೆ ಅನ್ನದಾನ ಕಾಣಿರೊ
ಹತ್ತು ಅನ್ನದಾನಕೆ ಸಮ ಉದಕದಾನ ಕಾಣಿರೊ
ನಿತ್ಯ **ಪುರಂದರವಿಠಲನ** ನೆನೆವ ಪುಣ್ಯಕೆಣೆಯಿಲ್ಲ ಎಣೆಯಿಲ್ಲ
ಕಾಣಿರೊ || ೯೦ ||

## ಹರಿಭಕ್ತರ ಮಹಿಮಾ

೧೯೩ ಹರಿಯ ಒಂಭತ್ತು ಭಕ್ತಿಯ ಬಲ್ಲ ಧೀರ
ಮರಳಿ ಸಂಸೃತಿಯ ದಾರಿಗೆ ಹುಟ್ಟಿಬಾರ
ದುರಾಚಾರ ದುಷ್ಕೃತಿಗಳ ಕಂಡು ಸೇರ
ಹಿರಿಯರೋಳ್ ಬಿರುನುಡಿಯ ಜಿಹ್ವೆಗೆ ತಾರ
**ಪುರಂದರವಿಠಲರೇಯನುದಾರ-**
**ಚರಣಾಬ್ಜನಿಷ್ಠೆ** ಅಂಗಡಿಯಲಿಟ್ಟುತೋರ ॥ ೯೧ ॥

### ಶ್ರವಣಭಕ್ತಿ

೧೯೪ ಹರಿಕಥಾಶ್ರವಣಕ್ಕೆ ಮನವಿಟ್ಟ ಪ್ರೌಢ
ಅರವತ್ತು ಘಳಿಗೆಯ ವ್ಯರ್ಥ ಹೋಗಾಡ
ಪರಮಪದವಿಗೈದುವನವನೆ ಗಡ
ನರಕದ ಬಟ್ಟೆ ದೂರದಲೊಮ್ಮೆ ನೋಡ
**ಪುರಂದರವಿಠಲನಂಘ್ರಿ** ಗಾಢ-
ತರದಲಪ್ಪುವ ನೈಮರದು ಮಾತಾಡ ॥ ೯೨ ॥

### ಕೀರ್ತನಭಕ್ತಿ

೧೯೫ ಹರಿನಾಮ ಕೀರ್ತನೆಯ ಭಕುತಿಯಿಂ ಪೇಳ್ವ
ಚಿರಸ್ವಭಾವದಲಿ, .ಕಣ್ಣೊರತಿಯ ತಾಳ್ವ
ಹರಿಯಂತೆ ಕೂಗಿ ಸುಜನರೊಳು ಬಾಳ್ವ
ದುರಿತಗಜಗಳ ಮಂಡೆಯನೇರಿ ಸೀಳ್ವ
ಹರುಷಾಮೃತಾಬ್ಧಿಯೊಳಿಳಿಮುಳಿಗೇಳ್ವ
**ಪುರಂದರವಿಠಲೇಶನ** ಹೊಂದಿ ತಾ ಬಾಳ್ವ ॥ ೯೩ ॥

### ಸ್ಮರಣಭಕ್ತಿ

೧೯೬ ಹರಿಸ್ಮರಣೆಗೆ ವಿಸ್ಮೃತಿಯನಾವ ಜರಿದ
ಚಿರಕಾಲದಘವನೊದ್ದೊಮ್ಮೆ ತರಿದ

ಪರಮಭಾಗವತರ ಸಮ್ಯಾಳ ಬೆರದ
ಹಿತರಾದವರಿಗೆ ಮುಕುತಿಯ ಕರದ
ವರಬಿಂಬಕಾಂಬ ಕಂಗಳಗಳ ತೆರದ
**ಪುರಂದರವಿಠಲರೇಯನ** ಹೊಂದಿ ಮೆರದ ॥ ೯೪ ॥

## ಪಾದಸೇವಭಕ್ತಿ

೧೯೭ ಹರಿಪಾದಸೇವೆ ಧ್ಯಾನವ ಬಲ್ಲಣ್ಣ
ವರಪುಟವನಿಟ್ಟ ಚಿನ್ನವು ಮುಖದ ಬಣ್ಣ
ದೂರುಚಿಯ ದುರ್ವಿಷಯಕೆತ್ತನವ ಕಣ್ಣ
ಹರಿಗುರುಗಳಿಗಲ್ಲದೆ ಶರಣೆನ್ನ
**ಪುರಂದರವಿಠಲನ** ಪತಿತಪಾವನ್ನ-
ಚರಣಾಬ್ಜರಸವೀಂಟಿ ಮೊಲೆವಾಲನುಣ್ಣ ॥ ೯೫ ॥

## ಅರ್ಚನಭಕ್ತಿ

೧೯೮ ಹರಿಯರ್ಚನೆಯ ಭಕ್ತಿಯ ಪ್ರವೀಣ
ಥರಥರದಿ ಬರುವ ಎಡರನು ಒಮ್ಮೆ ಕಾಣ
ಹರಿಗೆ ದೇಹೇಂದ್ರಿಯವನರ್ಪಿಸೆ ಪ್ರಾಣ
ಹರಿಪುರದೊಳಗೆ ಮಾಡಿದ ತನ್ನ ಠಾಣ
**ಪುರಂದರವಿಠಲರೇಯನ** ಪೂಜೆ ತ್ರಾಣ-
ವರಿತು ಕಾಯದೊಳಿರ್ದು ನಿರ್ವಾಣ ॥ ೯೬ ॥

## ವಂದನಭಕ್ತಿ

೧೯೯ ಹರಿಭಕ್ತಿ ಅಷ್ಟಾಂಗ ಪೊಡಮಟ್ಟ ನಿಚ್ಚ
ಉರುಪಾಪಾಟವಿಗೆ ಘಮ್ಮನೆಯಿಟ್ಟ ಕಿಚ್ಚ
ಸುರಲೋಕ ಮುಂತಾದ ಸಿರಿಗೆ ಅವ ಮೆಚ್ಚ
ನರರ ಸಂಪದವೆಲ್ಲ ಸ್ಥಿರವೆಂದು ನೆಚ್ಚ
**ಪುರಂದರವಿಠಲನಂಘ್ರಿಯ ನಂಬಿದುಚ್ಚ**
ನಿರಯದರಸನಿಗೆ ಬೆದರನು ತಾನು ಸ್ವಚ್ಛ ॥ ೯೭ ॥

## ದಾಸ್ಯಭಕ್ತಿ

೨೦೦ ಹರಿದಾಸದಾಸರ ದಾಸತ್ವ ಪಿಡಿದ
ನರಜೀವನ್ಮುಕ್ತನೆನಿಸಿ ಕೀರ್ತಿಪಡೆದ
ಹರಿಯೆ ನಾನೆಂಬವನೆದೆ ಮೆಟ್ಟುತ ನಡೆದ
ಹರಿಯ ಭಟರ ಬಾಕುಳಿಗವೃತ್ತಿ ಹಿಡಿದ
**ಪುರಂದರವಿಠಲರೇ**ಯನ್ನ ಯಡದ-
ಚರಣನಿರ್ಜರತರುಛಾಯವ ಹಿಡಿದ || ೯೮ ||

## ಸಖ್ಯ

೨೦೧ ಹರಿಯಲ್ಲಿ ಭಕ್ತಿಯ ಗೆಳೆತನವಿಟ್ಟ
ತರುಣಿ ಸಂಪದ ಪ್ರಜೆಗಳ ಗೇಹ ಬಿಟ್ಟ
ಕರ್ಮತ್ರಯಗಳ ನಿವಹ ಹಿಂದಕಿಟ್ಟ
ತಿರುಗಿ ಬರುವ ಊರ ಬಟ್ಟೆಯ ಮೆಟ್ಟ
**ಪುರಂದರವಿಠಲನಲಿ** ಚಿತ್ತವಿಟ್ಟ
ನರಸಿಂಹನೊಲಿಸಿ ಲಿಂಗಾಂಗವ ಸುಟ್ಟ || ೯೯ ||

## ಆತ್ಮನಿವೇದನ

೨೦೨ ಹರಿಗೆ ತನ್ನಾತ್ಮನಿವೇದನದಿಂದ
ಉರಿ, ಜಲ, ಮಣ್ಣು, ಬಯಲು, ಘಾಳಿಹೊಂದ
ಸ್ವರೂಪವ ಹರಿಯಂಘ್ರಿಗರ್ಪಿಸಿ ನಿಂದ
ಹರುಷವನುಂಬುವ ಉನ್ಮಾಹಗಳಿಂದ
**ಪುರಂದರವಿಠಲರೇಯನ** ದಯದಿಂದ
ಸುರಋಷಿನರರಿಗೆಲ್ಲವು ನಿಜಾನಂದ || ೧೦೦ ||

೨೦೩ ಹರಿಕಥಾಶ್ರವಣ, ಹರಿನಾಮಕೀರ್ತನೆ,
ಹರಿಸ್ಮರಣೆ, ಹರಿಪಾದಸೇವನ,
ಹರಿಪೂಜನ, ಹರಿವಂದನ, ಮನದ ದಾಸ್ಯ, ಸಖತ್ವ

ಹರಿಗಾತ್ಮಾರ್ಪಣೆ ಮುಕ್ತಿಪಥತತ್ವ
**ಪುರಂದರವಿಠಲ** ಪರಮಾತ್ಮ ಸಿದ್ಧ
**ಗುರುಮಧ್ವಮತ** ಶ್ರುತಿ-ಸ್ಮೃತಿಯೋಳ್ಪ್ರಸಿದ್ಧ ||೧೦೧||

೨೦೪ ತಂಬೂರಿಮೀಟಿದವ, ಭವಾಂಬುಧಿಯ ದಾಟಿದವ
ಗೆಜ್ಜೆಯ ಕಟ್ಟಿದವ ಖಳರೆದೆ ಮೆಟ್ಟಿದವ
ತಾಳವ ಕಟಿದವ ಸುರರೊಳು ಕೂಡಿದವ
ಗಾನವ ಮಾಡಿದವ ವೈಕುಂಠಕೋಡಿದವ
**ಪುರಂದರವಿಠಲನ್ನ** ಧ್ಯಾನವ ಮಾಡಿದವ
ಹರಿಮೂರ್ತಿ ನೋಡಿದವ ||೧೦೨||

೨೦೫ ದಾಸನಾದವನಿಗೆ ವೈಕುಂಠಲೋಕದಲ್ಲಿ ವಾಸ
ದಾಸನಾಗದವನೆಲ್ಲಿಪೋದರಾಭಾಸ
ದಾಸನೆಂದೆನಿಸಿದ ಭಾರತಿಯ ಗಂಡ ಸತ್ಯಲೋಕವನಾಳ್ವ ಶೌಂಡ
ದಾಸರ ಹೃದಯದಿ ಮಿನುಗುವ ಶ್ರೀಶವಾಸವಾದಿವಂದ್ಯ ದ್ವಿ-
ಸಾಶಿರಂಬಕ ಶರಣ್ಯ ದಾಸರಿಗೊಲಿವ **ಶ್ರೀಪುರಂದರವಿಠಲ** ೧೦೩

೨೦೬ ಹಂಗಿಸಿ ಹಂಗಿಸಿ ಎನಗೆ ಹರಿನಾಮ ನಿಲಿಸಿದರು
ಭಂಗಿಸಿ ಭಂಗಿಸಿ ಬೈಲರಾಶಿ ಕೆಡಿಸಿದರು
ಕಂಗೊಳಿಸೆ ಕಾಮವೆಂಬೊ ಕ್ರೋಧ ಕೆಡಿಸಿದರು
ಎನ್ನ ನಿಂದಿಸಿದ ಬಂಧುಬಳಗ ಬಾಯಿಬಡಕರಿಂದ
ನಾನು ಬದುಕಿದೆನೊ ಹರಿಯೆ ಕಾಡಿಕಾಡಿ ಕೈವಲ್ಯ-
ಪದವಿತ್ತರು ಕಸುಹುಟ್ಟಿದಂತೆ ಪ್ರಾಯಶ್ಚಿತ್ತಮಾಡಿದರು
ಮೀಸಲುಮಾಡಿಸಿದರು ಹರಿಯೆ ನಿನ್ನ
ಒಡವೆಯೆಂದು ಲೇಸು ಕೊಡೊ ನಮ್ಮ **ಪುರಂದರವಿಠಲ** ನಿನ್ನ
ದಾಸರ ದಾಸನೆಂದೆನಿಸಯ್ಯಾ ಹರಿಯೇ ||೧೦೪||

೨೦೭ ದರಿದ್ರರೆನಬಹುದೆ ಹರಿದಾಸರ
ಶಿರಿವಂತರೆನಬಹುದೆ ಹರಿದ್ರೋಹಿಗಳ

ಹರಿದಾಸರಮೇಲಿದ್ದ ಕರುಣವು ಸಿರಿದೇವಿಯ ಮೇಲಿಲ್ಲವು
**ಪುರಂದರವಿಠ್ಠಲನಾಳ್ಗಳಿಗೆ**
ಎಲ್ಲಿಹುದೈ ಮಾನ ಅಭಿಮಾನ ಜಗದಿ || ೧೦೫ ||

೨೦೮ ಒಡಲೊಳು ಪೊಗದನಕ ಅರಿಗೊಡರು ನಾಮಸುಧೆಯ
ಕೊಡುವರೊ ಮುಕುತಿಯ
ತಡೆವರೊ ಭವಸಿಂಧು
**ಮೃಡಸಖಪುರಂದರವಿಠಲನ್ನದಾಸರು**
ಕೊಡುವರೊ ಮುಕುತಿಯ || ೧೦೬ ||

೨೦೯ ಮಾರಿಯ ಕೈಯ್ಯಲ್ಲಿ ನೀರು ಹೊರಿಸುವರು
ಮಸಣಿಯ ಕೈಯ್ಯಲ್ಲಿ ಕಸವ ಹೊಡಿಸುವರು
ಮುಸುಮಾನ ಕೈಯಿಂದ ಭತ್ತ ಕುಟ್ಟಿಸುವರು
ಜವನ ದೂತರ ಕೈಯ್ಯ ಜಂಗುಳಿ ಕಾಯಿಸುವರು
ಪಾಂಡುರಂಗ **ಪುರಂದರವಿಠಲನಾಳುಗಳು** || ೧೦೭ ||

## ಪ್ರಾರ್ಥನಾಭಾಗ

೨೧೦ ಉರಿಗಂಜೆ ಸಿರಿಗಂಜೆ ಶರಧಿಯ ಭಯಕಂಜೆ
ಹಾವಿಗಂಜೆ ಕತ್ತಿಧಾರೆಗಂಜೆ
ಒಂದಕಂಜುವೆ ಮತ್ತೊಂದಕಳುಕುವೆ
ಈ ಪರಧನ ಪರಸತಿ ಎರಡಕ್ಕೆ
ಹಿಂದೆ ಮಾಡಿದ ರಾವಣ ತಾನೇನಾದ
ಮುಂದಕ್ಕೆ ಕರುಣಿಸೊ **ಪುರಂದರವಿಠಲ** || ೧೦೮ ||

೨೧೧ ಎನ್ನಮ್ಮ ಸಿರಿದೇವಿ ಇನ್ನು ಅರಿಯಳು ಮಹಿಮೆ
ಕುನ್ನಿಮಾನವನು ನಾನೇನು ಬಲ್ಲವನೆ
ಪನ್ನಗಾದ್ರಿನಿಲಯನೆ ಪರಮಪಾವನ್ನ ಕೃಷ್ಣ
ಎನ್ನನುದ್ಧರಿಸಯ್ಯ **ಪುರಂದರವಿಠಲ** || ೧೦೯ ||

೨೧೨ ತಂಪೆ ನೀ ತಂದೆ ನಾ ಬಂದೆ
ಕಾಮದಲಿ ತಂದೆ ಕ್ರೋಧದಲಿ ನೀ ತಂದೆ
ತಾಮಸಕಡುಯೋನಿಯಲ್ಲಿ ನೀ ತಂದೆ ನಾ ಬಂದೆ
ಒಂದಲ್ಲ ಎರಡಲ್ಲ ಮೂರಲ್ಲ ನಾಲ್ಕಲ್ಲ
ಎಂಭತ್ತುನಾಲ್ಕುಲಕ್ಷ ಯೋನಿಯಲ್ಲಿ ನೀ ತಂದೆ ನಾ ಬಂದೆ
ಹಿಂದಿನ ಜನ್ಮ ಹೇಗಾದರಾಗಲಿ ಮುಂದೆನ್ನ ಸಲಹೊ
**ಪುರಂದರವಿಠಲ** || ೧೧೦ ||

೨೧೩ ಮರ್ಕಟನ ಕೈಯ್ಯ ತಕ್ಕಡಿಯತ್ತಂತೆ
ಸಿಕ್ಕಿಕೊಂಡು ಕಾಮಕ್ರೋಧಾದಿಗಳು ಎನ್ನ
ಒಕ್ಕಿ ಹೀರುತಲಿದೆ ಯಾಕೆ ನೋಡುತಲಿದ್ದ್ಯೋ
ಅಕ್ಕಟಕ್ಕಟ ನಿನ್ನ ದಾಸನಲ್ಲವೆ ನಾನು
ಸಿಕ್ಕುಬಿಡಿಸಿ ನಿನ್ನ ಭಕುತಿಯ ತೋರಿಸೋ
ಪಕ್ಕದೊಳಗಿಟ್ಟು ಸಲಹೊ **ಪುರಂದರವಿಠಲ** || ೧೧೧ ||

೨೧೪ ಕಿಚ್ಚಿನೊಳಗೆ ಬಿದ್ದ ಕೀಟಕ ನಾನಯ್ಯ
ಅಚ್ಚುತ ತೆಗಿಯೊ, ಅನಂತ ಕಾಯೊ
ಗೋವಿಂದ ರಕ್ಷಿಸೊ ಘೋರಪಾತಕಿ ನಾನು
ಕರುಣಾಳು ಕಾಯಯ್ಯ **ಪುರಂದರವಿಠಲ** || ೧೧೨ ||

೨೧೫ ಪ್ರಪನ್ನರಕ್ಷಕ ನೀನು ಪಾಲಿಸೊ ನಿನ್ನವನು ನಾನು
ಉಪಸಾಧನವರಿಯೆನು ಒಮ್ಮೆ ನಿನ್ನ ನೆನೆವೆನು
ಅಪರಾಧಿಗಾದಡೇನು ಅಭಯಪ್ರದನು ನೀನು
ವಿಪರೀತಮಾಡದೆನ್ನನು **ಪುರಂದರವಿಠಲ ನಂಬಿದೆನೊ** || ೧೧೩ ||

೨೧೬ ತಪ್ಪುರಾಶಿಗಳ ಒಪ್ಪಿ ಕಾಯೊ ಕೃಪಾಳು
ಮುಪ್ಪುರವನಳಿದಂಥ ಮುನೀಂದ್ರವಂದ್ಯ
ಅಪ್ರಮೇಯನೆ ನಿನ್ನ ಅದ್ಭುತಮಹಿಮೆಗಳ
ಅಪ್ಪುನಿಧಿಯಲ್ಲಿ ಪುಟ್ಟಿದವಳು ಬಲ್ಲಳೆ
ಕಪ್ಪುಮೇಘಕಾಂತಿಯೊಪ್ಪುವ ತಿಮ್ಮಪ್ಪ
ಅಪ್ರಾಕೃತರೂಪ **ಪುರಂದರವಿಠಲ** || ೧೧೪ ||

೨೧೭ ಹೀನ ಮಾನವಯೋನಿಯಲಿ ಜನಿಸಿದೆನೊ ನಾನು
ಏನಾದರೇನು ದೀನದಯಸಾಗರನೆ
ಕುಯೋನಿಯಲಿ ಎನ್ನದೇಹವೆನ್ನದಂತೆ ಮಾಡೊ
ನೀನು ಬೋಧಿಸಿ ಸಾನುರಾಗದಿ ಕಾಯೊ
ವೇಣುಧರ ವೇದಾಂತವೇದ್ಯ ನರಹರಿಯೆ
ಕಾನನದೊಳು ಕಣ್ಣುಕಾಣದವ ಬಿದ್ದಂತೆ
ನಾ ಬಿದ್ದೆ ಕಾಯೊ **ಪುರಂದರವಿಠಲ** || ೧೧೫ ||

೨೧೮ ಬೇಡುವ ಕಷ್ಟಕ್ಕಿಂತ ಸಾವುದೇ ಕಡುಲೇಸು
ಬೇಡುವರಿಗೆ ಒಬ್ಬರೊಡೆಯರುಂಟೆ
ಗೂಡು ಕಿರುದುಮಾಡಿ ಬಲಿಯು ದಾನವ ಬೇಡಿ
ನಾಡೊಳಗೆ ಸ್ಥೂಲಸೂಕ್ಷ್ಮವು ನೀನಾದೆ
ಬೇಡುವ ಕಷ್ಟವನು ನೀನೆ ಬಲ್ಲಿ ಕೃಷ್ಣ
ಬೇಡದಂತೆಲೆ ಮಾಡೊ **ಪುರಂದರವಿಠಲ** || ೧೧೬ ||

೨೧೯ ಎರಗಿ ಭಜಿಪೆನು ನಿನ್ನ ಚರಣಸನ್ನಿಧಿಗೆ
ಕರುಣದಿಂದಲಿ ನಿನ್ನ ಸ್ಮರಣೆಯು ಎನಗಿತ್ತು
ಮರಿಯದೆ ಸಲಹೊ **ಶ್ರೀಪುರಂದರವಿಠಲ** || ೧೧೭ ||

೨೨೦ ಈ ಮರ್ತ್ಯದೊಳಗೆಲ್ಲ ಅರಸಿ ನೋಡಲು ದೇವ
ಅರಸು ಮೆಚ್ಚನು ಪ್ರಜೆ ದ್ವೇಷಿಸುವರು
ಆಳುಗಳು ಪೊಲಿದಲ್ಲಿ ಅರಸು ಮೆಚ್ಚನು ಒಮ್ಮೆ
ಈ ಮರ್ತ್ಯಜನರ ಚರಿತ್ರೆ ಚಿತ್ರವೊ ಎಲೊ ರಂಗ
ಭೂಲೋಕದರಸೆ ನಿನ್ನ ಭಕತಜನರುಗಳು
ನೀ ಕರುಣಿಸಲು ತಾವು ಕರುಣಿಸುವರು
ನೀನೊಲಿದು ಒಮ್ಮೆ ತಿರುಗಿ ನೋಡೋ ಹರಿಯೆ
ಈ ಪರಿಯಲಿ ನಿನ್ನ ದಯೆಯಲಿ ಮಹವಿಭವದೊಳು
ಅರೆಮೊರೆ ಆಗುತಿದೆ ಎನಗೆ ಆರು ರಕ್ಷಿಪರೋ
ಅಂಜದಿರು ನೀನೆಂದು ಅಭಯನೀವರ ಕಾಣೆ

ಶ್ರೀನಾಥ ಅನಿಮಿತ್ತದಯಾಸಿಂಧು
ನಿನ್ನ ದಾಸರೊಲಿಮೆ ಪಾಲಿಸೆಲೊ ಗುಣನಿಧಿಯೆ
ನಿನ್ನ ಚರಿತಾಮೃತವು ತೋರಿ ಸಲಹಯ್ಯ
ಪ್ರಸನ್ನಮೂರುತಿ ಅಹೋಬಲ **ಪುರಂದರವಿಠಲರೇಯ** ||೧೧೮||

೨೨೧ ನಿನ್ನ ನುಡಿದೆ ನಾನು ನಿನ್ನ ಪಾಡಿದೆ ನಾನು
ನಿನ್ನ ಕಾಡಿದೆ ನಾನು ನಿನ್ನ ಮುಂದೆ ಎನ್ನ ಬಡತನ ಪೇಳಿಕೊಂಡು
ಅನ್ನಂತ ಬಗೆಯಿಂದ ಕೊಂಡಾಡುವೆನು ವಿಠಲ
ಎನ್ನ ಭಾರ ನಿನ್ನದು ಅನಂತಕ್ಷಣಕೆ
ಮುನ್ನೆ ಪೇಳುವದಿಲ್ಲ ಉಪಚಾರವೊ ಸ್ವಾಮಿ
ಘನ್ನ ಪಂಡರಿರಾಯಾ ರನ್ನ ಪ್ರಸನ್ನ ಸಂಪನ್ನಮತಿಯ ಕೊಡು
**ಪುರಂದರವಿಠಲ** || ೧೧೯ ||

೨೨೨ ಗಾಣದೆತ್ತಿನಂತೆ ತಿರುಗಾಡಲಾರೆ
ಬಂಡಿಯ ನೊಗದಂತೆ ಬೀಳಲಾರೆ
ಗಿಳಿಯಂತೆ ನಾ ನಿನ್ನ ಕೂಗಾಡಲಾರೆ
ನವಿಲಿನಂತೆ ನಾ ನಿನ್ನ ನಲಿದಾಡಲಾರೆ
**ಪುರಂದರವಿಠಲ** ನೀನೆ ಕರುಣಾಳು ಕಾಯೋ || ೧೨೦ ||

೨೨೩ ಪೊಕ್ಕಳಲಿ ಗಂಡು ಪಡೆದವರುಂಟೆ
ಅಂಗುಟದಲ್ಲಿ ಪೆಣ್ಣ ಪೆತ್ತವರುಂಟೆ
ಮಿಕ್ಕಾದ ದೇವರಿಗೆ ಈ ಸೊಬಗು ಉಂಟೆ
ಮೊರೆಹೊಕ್ಕೆ ಮೊರೆಹೊಕ್ಕೆ ಕಾಯಯ್ಯ **ಪುರಂದರವಿಠಲ** ||೧೨೧||

೨೨೪ ಆನೆಯ ಕಾಯ್ದಾಗ ಜ್ಞಾನವಿದ್ದದ್ದೇನೊ
ನಾನು ಒರಲಲು ಈಗ ಕೇಳದಿದ್ದದ್ದೇನು
ದಾನವಾಂತಕ ದೀನರಕ್ಷಕನೆಂಬೊ
ಮಾನ ಉಳುಹಿಕೊಳ್ಳೊ **ಶ್ರೀಪುರಂದರವಿಠಲ** || ೧೨೨ ||

೨೨೫ ನಿನ್ನ ಧ್ಯಾನವ ಕೊಡು ಎನ್ನ ಧನ್ಯನ ಮಾಡು
ಪನ್ನಂಗಶಯನ **ಶ್ರೀಪುರಂದರವಿಠಲ** || ೧೨೩ ||

೨೨೬ ಹರಿ ನೀನೊಲಿವಂತೆ ಮಾಡು
ಒಲಿದರೆ ತಿರಿವಂತೆ ಮಾಡು
ತಿರಿದರೆ ಆರೂ ನೀಡದಂತೆ ಮಾಡು
ನೀಡಿದರೆ ಹೊಟ್ಟೆ ತುಂಬದಂತೆ ಮಾಡು
ಹೊಟ್ಟೆ ತುಂಬಿದರೆ ಬಟ್ಟೆ ದೊರೆಯದಂತೆ ಮಾಡು
ಬಟ್ಟೆ ದೊರೆತರೆ ಇಂಬುದೊರೆಯದಂತೆ ಮಾಡು
ಇಂಬು ದೊರೆತರೆ ನಿನ್ನ ಪಾದಾರವಿಂದದಲಿ ಇಂಬು ತೋರೋ
**ಪುರಂದರವಿಠಲ** ॥ ೧೨೪ ॥

೨೨೭ ಕಂಡಕಂಡವರಿಗೆ ಅಲ್ಪರಿವ ಬಾಳುವೆಗಿಂತ
ಕೊಂಡವನೆ ಧುಮುಕಲಿಬಹುದು
ತಂಡತಂಡದ ನರರ ಕೊಂಡಾಡುವುದಕಿಂತ
ತುಂಡರೀಸಲಿಬಹುದು ಈ ಜಿಹ್ವೆಯನ್ನು
ಮುಂಡೆಬಾಗಿ ಪರರಿಗೆ ನಮಿಸುವದಕಿಂತ
ಗಂಡುಗತ್ತರಿ ಕೊರಳೊಳಿಟ್ಟರೆ ಘನವು
ಪಂಡಿತನೆನಸಾಲೊಲ್ಲೆನೊ ಪರಮಾತ್ಮ ನಿನ್ನ
ತೊಂಡರವನೆನಿಸುವ, ಭಾಗ್ಯವೀಯೋ **ಪುರಂದರವಿಠಲ** ॥ ೧೨೫ ॥

೨೨೮ ಬಡವರೊಳಗೆ ಎನ್ನಿಂದಾರು ಬಡವರಿಲ್ಲ
ಕೊಡುವರೊಳಗೆ ನಿನ್ನಿಂದಾರು ಕೊಡುವರಿಲ್ಲ
ದೃಢಭಕುತಿ ನಿನ್ನಲ್ಲಿ ಕಲ್ಪಿಸಿ
ಬಿಡದೆ ಸಲಹೊ **ಶ್ರೀಪುರಂದರವಿಠಲ** ॥ ೧೨೬ ॥

೨೨೯ ದಾಸನಾಗುವುದಕ್ಕೆ ಏಸೇಸು ಜನ್ಮದ ಸುಕೃತ
ರವಿಕೋಟಿ ಭಾಸುರ ಶ್ರೀಶ ಸುಗುಣವಂತ
ನಾಶರಹಿತ ನಿನ್ನ ದಾಸರ ದಾಸ್ಯವ ಲೇಸಾಗಿ ಕೊಡು
ಕಂಡ್ಯ **ಪುರಂದರವಿಠಲ** ॥ ೧೨೭ ॥

೨೩೦ ಬಲಿಯ ಮನೆಗೆ ವಾಮನ ಬಂದಂತೆ
ಭಗೀರಥಗೆ ಶ್ರೀಗಂಗೆ ಬಂದಂತೆ

ಮುಚುಕುಂದಗೆ ಶ್ರೀಮುಕ್ಕುಂದ ಬಂದಂತೆ
ವಿದುರನ ಮನೆಗೆ ಶ್ರೀಕೃಷ್ಣ ಬಂದಂತೆ
ವಿಭೀಷಣನ ಮನೆಗೆ ಶ್ರೀರಾಮ ಬಂದಂತೆ
ನಿನ್ನ ನಾಮವು ಎನ್ನನಾಲಿಗೆಲಿ ಬಂದು
ನಿಂದಿರಲಿ **ಶ್ರೀಪುರಂದರವಿಠಲ** ‖ ೧೨೮ ‖

೨೩೧ ನಿನ್ನ ನಾಮಭಂಡಾರ ಕದ್ದ ಕಳ್ಳ ನಾನು
ನಿನ್ನ ಭಕ್ತಿಯೆಂಬೊ ಸಂಕಲೆಯ ಹಾಕಿ
ನಿನ್ನ ದಾಸರ ಕೈಯ್ಯ ಎನ್ನ ಒಪ್ಪಿಸಿಕೊಟ್ಟು
ನಿನ್ನ ಮುದ್ರಿಕೆಯಿಂದ ಘಾಸಿಮಾಡಿಸೊ ಕೃಷ್ಣ
ನಿನ್ನ ವೈಕುಂಠದುರ್ಗದಲ್ಲಿ ಎನ್ನ ಸೆರೆಯಿಟ್ಟು
ಚನ್ನಾಗಿ ಸಲಹೋ **ಶ್ರೀಪುರಂದರವಿಠಲ** ‖ ೧೨೯ ‖

೨೩೨ ನಿನ್ನ ದಾಸನು ಆಗಿ ನಿನ್ನ ಎಂಜಲನುಂಡು
ಅನ್ಯ ದಾಸನಾದರೆ ಲೋಕ ನಗರೆ
ನಿನ್ನ ಚರಣಯುಗ್ಮವ ಪಿಡಿಸಿ
ಎನ್ನ ಕಾಯೊ **ಪುರಂದರವಿಠಲ** ‖ ೧೩೦ ‖

೨೩೩ ಹೆತ್ತ ಮಕ್ಕಳು ಮೂರ್ಖರಾದರೆ ತಾಯಿ ತಂದೆ
ಎತ್ತಿ ಇಳುಹುವರೆ ತಿಪ್ಪಿಯೊಳ್ ಒರಗಿಸುವರೆ ಗೋವಿಂದ
ಮತ್ತ ನಾ ನಿನ್ನ ದಾಸ ಅಜ್ಞಾನಿಯಾದರೆ
ಪೊರೆಯದಿರುವರೇನು **ಪುರಂದರವಿಠಲ** ‖ ೧೩೧ ‖

೨೩೪ ನಿನ್ನಾಳೆಂದಡೆ ಹರಿಯೆ ಇನ್ನೇನಿನ್ನೇನೋ
ಎನ್ನೊಳಿದ್ದವ ನೀನಾದೆ
ನಿನ್ನ ದಾಸ ನಾನಾದೆ ಇನ್ನು ಸಾಕದಿರಲು ನಗರೆ ನಿನ್ನ ದಾಸರು
**ಘನ್ನಮಹಿಮ ಪುರಂದರವಿಠಲರೇಯ** ‖ ೧೩೨ ‖

೨೩೫ ಮಾತಾಪಿತರು ನಿನಗಂದೆ ಮಾರಿದರೆನ್ನ
ನೀತವೇ ನೀನೆನ್ನ ಸಲಹದಿದ್ದರೆ ದೇವ
ಯಾತಕೆ ಭಕ್ತವತ್ಸಲನೆಂದೆನಿಸಿದಿ

ನಾ ತಡವುವನಲ್ಲ ನಿನ್ನ ಬಿರುದಿಗಂಜುವನಲ್ಲ
ಸಾತ್ವಿಕದೈವವೆನಿಸು ನೀ ಸಲಹಬೇಕಯ್ಯ ವಿ-
**ಖ್ಯಾತವನೂರುತಿಪುರಂದರವಿಠಲ** || ೧೩೩ ||

೨೩೬ ಅನ್ಯರೊಬ್ಬರ ಕಾಣೆ ಮನ್ನಿಸುವರೆನ್ನ ಆ-
ಪನ್ನ ರಕ್ಷಕನೆ ಪರಿಪಾಲಿಸು ಇನ್ನು
**ಪನ್ನಂಗಶಯನ ಪುರಂದರವಿಠಲ** || ೧೩೪ ||

೨೩೭ ಅರ್ಭಕನ ತೊದಲನುಡಿ ಅವರ ತಾಯಿ ತಂದೆ
ಉಬ್ಬಿ ಕೇಳುವರಯ್ಯ ಉರಗೇಂದ್ರಶಯನ
ಕೊಬ್ಬು ನಾನಾಡಿದರು ತಾಳಿ ರಕ್ಷಿಸು ಎನ್ನ
ಕಬ್ಬುಬಿಲ್ಲನಪಿತ **ಪುರಂದರವಿಠಲ** || ೧೩೫ ||

೨೩೮ ಒಡೆಯನುಳ್ಳ ತೊತ್ತಿಗ್ಯಾತರಚಿಂತೆ
ಎನ್ನೊಡೆಯ ದ್ವಾರಕವಾಸ ಎಂಬೊ ಛತ್ರವಿರೆ
ಇಂದಿಗೆಂಬುವ ಚಿಂತೆ ನಾಳಿಗೆಂಬೊ ಚಿಂತೆ
ನಾಡದಿಗೆಂಬೊ ಚಿಂತೆ ಯಾತಕಯ್ಯಾ
ಅಡಿಗಡಿಗೆ ನಮ್ಮೊಡನಿದ್ದು ಕಾವ ಭಕ್ತರೊ-
ಡೆಯ **ಪುರಂದರವಿಠಲನಿರಲಿಕ್ಕೆ** || ೧೩೬ ||

೨೩೯ ನಿನ್ನ ಮೆಲ್ಲಡಿ ಈರಡಿ ಮಾಡಿತು
ನಿನ್ನ ಉಂಗುಟವು ಬ್ರಹ್ಮಾಂಡ ನುಂಗಿತು
ನಿನ್ನ ನಖ ಸುರನದಿಯ ತಂದಿತು
ನಿನ್ನ ಕರ ಮಧುಕೈಟಭರನೊರಸಿತು
ನಿನ್ನ ಸರಿತೋಳು ಶ್ರೀಲಕುಮಿಯನಪ್ಪಿತು
ನಿನ್ನ ಪಾದದ ನೆನಹೆ ಸಕಲಸಂಪದ **ಪುರಂದರವಿಠಲ** || ೧೩೭ ||

೨೪೦ ಸಿರಿದೇವಿ ನಿನಗೆ ಮಾಯಮಾಡಿದಳೇನೋ
ಸಿರಿ ತುಳುಕಿದಂಥ ಸೌಭಾಗ್ಯ ಮದವೇನೋ
**ಎನ್ನೊಳಿಹ ಪುರಂದರವಿಠಲ** ಏನನಬಹುದೊ-
ನಿನ್ನ ಅಯ್ಯಯ್ಯಾ || ೧೩೮ ||

೩೪೧ ಕಲಿಕಾಲ ದಂಡಪಿಡಿದು ಕಾಲರಾತ್ರಿಯು
ಬೇಳೆ ಕತ್ತಲು ನೀ ಮುನ್ನೆ ಪರಿಹರಿಸಲು
ಅಚಿಂತ್ಯಮಹಿಮಾ ನಿರ್ಗುಣಧಾಮನು ನೀನೆ
ನಿರ್ವಿಕಲ್ಪನು ನೀನೆ **ಎನ್ನೊಳಗಿಹ ಪುರಂದರವಿಠಲ**
ಏನನಬಹುದು ಅಯ್ಯಯ್ಯಾ ಜಗದಧಾರನೂ ನೀನೆ || ೧೩೯ ||

೩೪೨ ಸ್ತ್ರೀಯರಿಗೆ ಪುರುಷರು ಮೋಹಿಸುವರಲ್ಲದೆ
ಪುರುಷರಿಗೆ ಪುರುಷರು ಮೋಹಿಸುವದೆಂತೊ
ಹರಿ ಪರಮಪುರುಷ ಪುರುಷೋತ್ತಮ
ಪುರುಷರಮಾಬ್ರಹ್ಮಾದಿಗಳು, ನಿನಗೆ ಮೋಹಿಸುವರೈ
ತಿರುವೆಂಗಳಪ್ಪ **ಸಿರಿಪುರಂದರವಿಠಲರೇಯ**
ಜಗದೊಳಗೆ ನೀನು ಮೋಹನ್ನರೂಪ ಕಣೊ
ಹರಿ ಪರಮಪುರುಷ ಪುರುಷೋತ್ತಮ || ೧೪೦ ||

೩೪೩ ಹುಟ್ಟುವ ಭೀತಿ ಹೊಂದುವ ಭೀತಿ
ವಿಠಲಸಂಘ್ರಿ ನೆನೆಯದವಗೆ ಕಾಲನ ಭೀತಿ
ಕರ್ಮದ ಭೀತಿ ಗೋಪಾಲನ ದಾಸನಾಗದವಗೆ
ಅತಳದಲ್ಲಿರಿಸೊ, ವಿತಳದಲ್ಲಿರಿಸೊ, ಸುತಳದಲ್ಲಿರಿಸಿಸೊ
ಮರ್ತ್ಯೋನಿಯಲ್ಲಿರಿಸೊ
ನೀನೆಲ್ಲಿರಿಸಿದರೆ, ನಾನಲ್ಲಿರಬಾದೆನೆ
ನೀನೆಂತು ನಡಸಿ ನುಡಿಸಿಕೊಂಬುವಿಯೊ
ನಾನೆಂತಂತೆ ನಡೆವೆನು ನುಡಿವೆ ನೋಡೊ ಹರಿಯೆ
ಸುರಚಕ್ರವರ್ತಿ **ಅಸುರಮದಭಂಜನ**
**ರಾಜಾಧಿರಾಜ ಪುರಂದರವಿಠಲ** || ೧೪೧ ||

೩೪೪ ಸಿರಿಯು ಅಕ್ಕರದಲ್ಲಿ ಗುಣದಲ್ಲಿ
ಸಕಲಸಂಪದವೀವಲ್ಲಿ
ವಿತರಣಾದಿಗಳಲ್ಲಿ ಸವಿಯನ್ನು ತಿಳಿವಲ್ಲಿ
**ಶ್ರೀರಂಗರಾಜ ಪುರಂದರವಿಠಲ-**
**ದೊರೆಯಿರೆ ನರಾಧಮರ ಮನ್ನಿಸಲ್ಯಾತಕೆ** || ೧೪೨ ||

೨೪೫ ರಾವಣನು ಬಂದು ರಥದ ಮೇಲೇರುತಿರಲು
ರಾಮು ಭೂಮಿಯಲ್ಲಿ ಪಾದಚಾರಿಯಾಗಿರಲು
ನಮ್ಮ ಹನುಮಂತ ಬಂದು ತನ್ನ ಪೆಗಲಲ್ಲಿ ಪೊತ್ತು
ಚಾಲ್ವರಿದು ಬೊಬ್ಬಿರಿಯೆ
ನಮ್ಮ ಹಿರಿಯರು ನಿಮ್ಮವಾಳ್ಯಕೊವಗಿರಲಾಗಿ
ನಮ್ಮ ಮರೆಯಲಾಗದೊ **ಪುರಂದರವಿಠಲ** || ೧೪೩ ||

೨೪೬ ಸಿಕ್ಕಿದಿಯಲ್ಲೊ ಸಿರಿ ಕೃಷ್ಣ ನೀನು
ಸಿಕ್ಕಿದಿಯಲ್ಲೊ ಕಳ್ಳರ ಗುರುವೆ
ಸಿಕ್ಕಿದಿಯಲ್ಲೊ ಸಿರಿಕೃಷ್ಣ ನೀನು
ಠಕ್ಕಿಸಿಕೊಂಡರೂ ಬಿಡೆ **ಪುರಂದರವಿಠಲ** || ೧೪೪ ||

೨೪೭ ಸಿರಿವಿರಿಂಚಾದಿಗಳು ಅರಿಯದಂತಹ ಮಹಿಮೆ
ಎಣಿಸಿ ಪಾಡುವದಕೆ ಅರುಹರ್‍ಯಾರೊ
ಅರವಿಂದದಳನಯನ ಶರಣೆಂದವರ ಕಾಯ್ವ
**ಕರುಣಾಸಾಗರ ನಮ್ಮ ಪುರಂದರವಿಠಲ** || ೧೪೫ ||

೨೪೮ ಸಕಲಶ್ರುತಿ ಪುರಾಣಗಳೆಲ್ಲ ದಾವನ ಮಹಿಮೆ
ಸುಖಪೂರ್ಣ ಸುರಕರಾರ್ಚಿತಪಾದ
ಶಕಟಮರ್ದನ ಶಾರದೇಂದು-
ವಕ್ತ್ರ ರುಚಿರವರ ಕಲ್ಯಾಣರಂಗ
ರುಕುಮಿಣಿ ರಮಣಪರಿಪೂರ್ಣ **ನಮ್ಮ ಪುರಂದರವಿಠಲ** || ೧೪೬

೨೪೯ ಶ್ರೀಪತಿಯ ಕಟಾಕ್ಷವೀಕ್ಷಣ ತಪ್ಪುವಡೆ
ಅನೇಕಬಂಧುಗಳು ಲಕ್ಷ ವೈದ್ಯರುಗಳು
ಇರಲಾಗಿ ಕಣ್ಣ ಕಣ್ಣ ಬಿಡುವರು
ತಾಪಸಿಯಾರಣ್ಯದೊಳಗೆ ಒಬ್ಬ ಒಂಟಿಯಾಗಿರಲು
ಅಂಜಬೇಡೆಂದು ನಮ್ಮ ಕಂಜನಾಭನೆ ಬಂದು
**ಆಪತ್ತುಗಳು ಪರಿಹರಿಸುವ ನಮ್ಮ ಪುರಂದರವಿಠಲ** || ೧೪೭ ||

೨೫೦ ಶ್ವೇತದ್ವೀಪ ಅಮುಕ್ತ ಸ್ಥಳದಲ್ಲಿ ಚತುರಮುಖ ಭವ ಇಂದ್ರಾದಿ
ಸುರರು ಭೂಭಾರನಿಳಹಬೇಕೆಂದು ನಿನ್ನ ಸ್ತುತಿಸಿ ಸ್ತುತಿಸಿ ಬಹು-
ಕಾಲದಲ್ಲಿ ಮತ್ಸ್ಯಕೂರ್ಮವರಹನಾಗಿ ದುಷ್ಟರ ತರಿದೊಟ್ಟಿ
ಶಿಷ್ಟರ ಪಾಲಿಪನೆಂಬ ಬಿರಿದು ಸಲಹೊ
**ಶರಣಾಗತವಜ್ರಪಂಜರ ಪುರಂದರವಿಠಲರೇಯ** ॥ ೧೪೮ ॥

೨೫೧ ನಿನ್ನಂಥ ತಂದೆ ನನಗುಂಟು ನಿನಗಿಲ್ಲ
ನಿನ್ನಂಥ ಸ್ವಾಮಿ ಯೆನಗುಂಟು ನಿನಗಿಲ್ಲ
ನಿನ್ನಂಥ ಧೊರೆ ಯೆನಗುಂಟು ನಿನಗಿಲ್ಲ
ನೀನೆ ಪರದೇಶಿ ನಾನೆ ಸ್ವದೇಶಿ
ನಿನ್ನ ಅರಸಿ ಲಕ್ಷ್ಮಿಯೆನಗೆ ತಾಯಿಯುಂಟು
ಎನಗಿದ್ದ ತಾಯಿ ತಂದೆ ನಿನಗ್ಯಾರು
**ತೋರೋ ಪುರಂದರವಿಠಲ** ॥ ೧೪೯ ॥

೨೫೨ ನೀರಡಿಸಿ ಜಾನ್ಹವಿತೀರದಲಿ ಬಂದು
ಭಾವಿನೀರ ಕುಡಿವ ಮಾನವರುಂಟೆ
ಹರಿಯ ಸಿರಿಚರಣವಿರಲು
ಭೂರಿ ದೈವಂಗಳಿನ್ನ್ಯಾಕೆ ಭಜಿಸುವಿ ಮನವೆ
ಹರಿಯ ಸಿರಿಚರಣ ಬೇಲೂರು ಚನ್ನಿಗ-
ರಾಯ **ಪುರಂದರವಿಠಲ**
ನಿರಲು ಇನ್ನ್ಯಾಕೆ ಭೂರಿ ದೈವಂಗಳ ಭಜಿಸುವೆ ॥ ೧೫೦ ॥

೨೫೩ ಕಮಲಜನು ನಿನ್ನ ಪಾದಕಮಲವನು ತೊಳದಾನೆ
ಉಮಾಪತಿಯು ನಿನ್ನ ಪಾದಜಲಪೊತ್ತಾನೆ
ಯಮಜ ಮಾಡುವ ರಾಜಸೂಯಾಗದಲ್ಲಿ
ಮಮಕರಿಸಿದ್ದೆಂತೊ ನೀ ಕಾಲತೊಳದೊಳಿಗವ
**ಮಮ ಪ್ರಾಣಾ ಹಿ ಪಾಂಡವಾಃ** ಬಿರುದಿಗಾಗಿ
ನಮೊ ನಮೊ ನಮೊ ಎಂಬೆ **ಪುರಂದರವಿಠಲ** ॥ ೧೫೧ ॥

೨೫೪ ಕಾವ ದೈವವು ನೀನೆ ಕೈಮುಗಿಯುವವ ನಾನು
ಕೈವಲ್ಯ ಫಲದಾತ ಕೇಶವನೆ ರಘುನಾಥ
ಯಾವ ದೈವಕ್ಕಿನ್ನು ಈ ವೈಭವಗಳ ಕಾಣೆ
ರಾವಣಾಂತಕ **ಶ್ರೀಪುರಂದರವಿಠಲ** ॥ ೧೫೨ ॥

೨೫೫ ಒಂದು ಕಾಲದಲಿ ಆನೆ ಕುದುರೆಯೇರಿ ಮೆರಸುವಿ
ಒಂದು ಕಾಲದಲಿ ಬರಿಗಾಲಲಿ ನಡಿಸುವಿ
ಒಂದು ಕಾಲದಲಿ ಅಮೃತಾನ್ನ ಉಣಿಸುವಿ
ಒಂದು ಕಾಲದಲಿ ಉಪವಾಸದಲ್ಲಿರಿಸುವಿ
ನಿನ್ನಾಳು ನಾ ನೀ ಬಲ್ಲಿ ನಾನೇನು ಬಲ್ಲೆನಯ್ಯಾ
ನಿನ್ನ ಮಹಿಮೆ ನೀನೆ ಬಲ್ಲೊ ಶ್ರೀ
ಪನ್ನಗಶಯನ **ಶ್ರೀಪುರಂದರವಿಠಲ** ॥ ೧೫೩ ॥

೨೫೬ ಒಡವೆಯನೆ ಗಳಿಸಿದರೆ ಚೋರರ ಭಯವುಂಟು
ಸೊಬಗುಳ್ಳ ಮಡದಿಯನೆ ಗಳಿಸಿದರೆ ಜಾರರ ಭಯವುಂಟು
ಪೊಡವಿಯನು ಗಳಿಸಿದರೆ ಪರರಾಜರ ಭಯವುಂಟು
ನಿನ್ನ ಪಾದವನೆ ಗಳಿಸಿದರೆ ಮತ್ಯಾರಭಯವಿಲ್ಲ
**ಪುರಂದರವಿಠಲ** ॥೧೫೪॥

೨೫೭ ಒಂದೊಂದವತಾರದೊಳನಂತವ್ಯಾಪಾರ
ಒಂದೊಂದವಯವದೊಳನಂತವ್ಯಾಪಾರ
ಒಂದೊಂದು ರೋಮದೊಳು ಅಜಭವಾದಿ ಕಾರ್ಯ
ಒಂದೊಂದೆ ನಿನ್ನ ಮಹಿಮೆ **ಪುರಂದರವಿಠಲ** ॥ ೧೫೫ ॥

೨೫೮ ಏಕೈಕಮೂರುತಿ ಲೋಕಕ್ಕೆಲ್ಲ
ಈತನೇ ಮೂರುತಿ ಗೋಕುಲದೊಳಗೆಲ್ಲ
ಗೋಪಾಲಮೂರುತಿ ಏಕನಾಮ **ಪುರಂದರವಿಠಲ**
ನಮಗೊಂದು ಮೂರುತಿ ॥ ೧೫೬ ॥

೨೫೯ ಎಂದಿಗಾದರು ನಿನ್ನ ಪಾದಾರವಿಂದವೆ ಗತಿಯೆಂದು ನಂಬಿದೆನೊ
ಬಂಧುಬಳಗವ ಬಿಟ್ಟು ಬಂದೆ ನಿನ್ನ ಮನೆಗಿಂದು
ಮಂದರಧರ ಗೋವಿಂದ **ಪುರಂದರವಿಠಲನೆ** ನೀ ಬಂಧು ॥ ೧೫೭ ॥

೨೬೦ ಎಲ್ಲಿ ಹರಿಕಥಾಪ್ರಸಂಗವು ಅಲ್ಲಿ ಯಮುನಾ
ಗಂಗಾ ಗೋದಾವರಿಯು ಸರಸ್ವತಿ
ಎಲ್ಲ ತೀರ್ಥವು ಬಂದು ಎಣೆಯಾಗಿ ನಿಲ್ಲಲು
**ಸಿರಿವಲ್ಲಭಪುರಂದರವಿಠಲ** ಮೆಚ್ಚಲು ಜಯಜಯ || ೧೫೮ ||

೨೬೧ ಉಗುರು ಬ್ರಹ್ಮಾಂಡಖರ್ಪರ ಒಡದಿತು
ಅಂಗುಟ ದುರ್ಯೋಧನನ ಕೆಡಹಿತು
ಬಾಹು ಕೂಸಿನ್ನ ಎತ್ತಿ ಕೆಡಹಿ ಬಿಸಾಟಿತು
ದೃಷ್ಟಿ ಕೌರವೇಶನ ನಸುಗುಂದಿಸಿತು
**ಜಗಜಟ್ಟಿಪುರಂದರವಿಠಲಗೆದಿರುಂಟೆ** || ೧೫೯ ||

೨೬೨ ಆ ಹರಿಸಿರಿಚರಣವಿರಲು ಮಿಕ್ಕ
ಭೂರಿ ದೈವಗಳ್ಯಾಕೆ ಭಜಿಸುವಿ ಮರುಳೆ
ನೀರಡಿಸೆ ಜಾಹ್ನವಿತೀರದಲ್ಲಿದ್ದು ಭಾವಿನೀರು ಕುಡಿವರುಂಟೆ ಮಾನವ
ಕಾರುಣ್ಯ ವೈಕುಂಠವಿಠ್ಠಲರೇಯ ತಿರಿವೆಂಗಳಪ್ಪ ಸಿರಿ-
**ಪುರಂದರವಿಠಲ** || ೧೬೦ ||

೨೬೩ ಅಂಬರದಳವನು ರವಿ ಶಶಿ ಬಲ್ಲರು
ಅಂತರಲಾಡುವ ಪಕ್ಷಿ ತಾ ಬಲ್ಲುದೇ
ಜಲದ ಪ್ರಮಾಣ ತಾವರೆಗಲ್ಲದೆ
ಮ್ಯಾಲಿರುವ ಗಿಡಗಳು ತಾವು ಬಲ್ಲವೇ
ಸುರತಸುಖವನೆಲ್ಲ ಯುವಕ ಬಲ್ಲನು
ಬಾಲಕತನದವರು ತಾವು ಬಲ್ಲರೇ ದೇವ ನಿಮ್ಮ ಮಹಿಮೆಯ
ಜ್ಞಾನಿಗಳ ಭಕುತಿಯ ನೀನೇ ಬಲ್ಲಯ್ಯಾ **ಪುರಂದರವಿಠಲ** ||೧೬೧||

೨೬೪ ಅಣುವಿಗೆ ಅಣುವಾಗಿ ಘನಕೆ ಘನವಾಗಿ
ಗುಣತ್ರಯ ತತ್ವಕ್ಕೆ ಮೀರಿದ ದೊರೆಯಾಗಿ
ತೃಣ ಮೊದಲಾಗಿ ಮೇರುಪರಿಯಂತ ಇರುವ ನೀನಾಗಿ
**ಗುಣನಿಧಿ ಪುರಂದರವಿಠಲ** ನಿನ್ನ ಮಹಿಮೆ
ಎಣಿಕೆಮಾಡುವರ್ಯಾರೊ ಎನ್ನಪ್ಪನೆ || ೧೬೨ ||

೨೬೫ ನಿನಗೆ ನೀನೆ ಮೋಹ ನಿನಗೆ ನೀನೇ ಪ್ರೀತಿ
ನಿನಗೆ ನೀನೆ ಭಕ್ತ ನಿನಗೆ ನೀನೇ ದ್ವೇಷಿ ನಿನಗೆ ನೀನೇ ಜ್ಞಾನಿ
ನಿನಗೆ ನೀನೆ ಮಾಳ್ಪೆ **ಪುರಂದರವಿಠಲ** ॥ ೧೬೩ ॥

೨೬೬ ಅಂಬುಜನಯನನೆ ಅಂಬುಜಜನಕನೆ
ಅಂಬುಜನಾಭ **ಶ್ರೀಪುರಂದರವಿಠಲ** ॥ ೧೬೪ ॥

೨೬೭ ಭಾಗೀರಥಿಪಿತ ಭಾಗವತರ ಪ್ರಿಯ
ಯೋಗಿಗಳರಸ **ಶ್ರೀಪುರಂದರವಿಠಲ** ॥ ೧೬೫ ॥

೨೬೮ ಸತ್ಯಜನಾಭನೆ ಸತ್ಯಮಹಿಮನೆ ಸತ್ಯಕಾಮನೆ ಸತ್ಯಪೂರ್ಣನೆ
ಸತ್ಯಭೂಷಣ ನಿತ್ಯ **ಪುರಂದರವಿಠಲರೇಯ** ॥ ೧೬೬ ॥

೨೬೯ ದೇವರ ದೇವ ಜಗತ್ರಯಗಳ ಕಾವ
ಭಾವಜಪಿತ **ನಮ್ಮ ಪುರಂದರವಿಠಲ** ॥ ೧೬೭ ॥

೨೭೦ ಜಗವ ಸುತ್ತಿಹುದೆಲ್ಲ ನಿನ್ನ ಮಾಯವಯ್ಯ
ನಿನ್ನ ಸುತ್ತಿಹುದೆಲ್ಲ ಎನ್ನ ಮಾಯವಯ್ಯ
ಜಗಕೆ ಬಲ್ಲಿದ ನೀನು ನಿನಗೆ ಬಲ್ಲಿದ ನಾನೆ
ಜಗವು ನಿನ್ನೊಳಗೆ ನೀನು ಎನ್ನೊಳಗೆ
ಕರಿಯು ಕನ್ನಡಿಯೊಳಗೆ ಅಡಗಿಸಿದೆ ತೆರನಂತೆ
ಎನ್ನೊಳಗೆ ನೀನು ಅಡಗಿದಿ ಕಣೊ **ಪುರಂದರವಿಠಲ** ॥ ೧೬೮ ॥

## ಶ್ರೀವಿಜಯದಾಸವರ್ಯಕೃತ ಉಗಾಭೋಗಗಳು

೨೭೧ ಸಂತೆ ನೋಡಬಂದವಗೆ ಶ್ರಮಸಾಧ್ಯವಲ್ಲದಲೆ
ಚಿಂತಾಮಣಿ ಕೈಗೆ ದೊರಕಿದಂತೆ
ಎಂತು ಪೇಳಲಿ ಎನ್ನ ಗುರುಗಳಿತ್ತ ಭಾಗ್ಯ
ಅಂತಗಾಣೆನೊ ಎಣಿಸಿ ಗುಣಿಸಿ ನೋಡೆ

ಶ್ರಾಂತನಾಗಿ ಹಸಿದು ಅಂಬಲಿಯ ಕೇಳಿದರೆ
ಇಂತು ಪರಮಾನ್ನ ಗೋಘೃತ ಶರ್ಕರಾ
ಮುಂತೆ ಪೊಹ್ನರಿವಾಣದೊಳಗೆ ತಂದಿಟ್ಟಂತೆ
ಎಂತು ಫಲಿಸಿತು ನೋಡು ಮನವೆ
ಚಿಂತಿಸಿ ಸಂಸಾರಕ್ಕೆ ದ್ರವ್ಯಗೋಸುಗ ಬರಲು
ಅಂತರಾವೇದಿ ಮಿಕ್ಕ ಕ್ಷೇತ್ರ ಯಾತ್ರಿ
ಸಂತುಜನರೊಡನೆ ಸಾಧ್ಯವಾಯಿತು
ಸಿರಿಕಾಂತನ್ನ ತುತಿಸುವರ ಕರುಣದಿಂದ.
ಮಂತ್ರತಂತ್ರಗಳರಿಯೆ **ವಿಜಯವಿಠಲರೇಯ**
ಎಂತು ಮಾಡಿದ ನೋಡು ಮನವೆ ಹಾ ಹಾ ಹಾ ಹಾ ॥ ೧ ॥

೨೭೨ ಮೀಸಿಕಾಸಿಯ ತೋರಿ ಬಂಟ ಬದುಕುವ ಗಡ
ವೇಶ್ಯಾಸ್ತ್ರೀಯೆ ತನ್ನ ಎದೆಯ ತೋರಿ
ಗ್ರಾಸಕೆ ಪುಟ್ಟಿಸಿಕೊಂಬುವಳು
ಸೂಲಗಿತ್ತಿ ಕೂಸುಮಾಸವ ಪಿಡಿದು ಬದುಕುವಳೊ
ಔಷಧವಿತ್ತು ವೈದ್ಯ ಬದುಕುವಗಡ
ಕಾಸಿಗಾಗಿ ಉತ್ತಮರ ವಂಚಿಸಿ
ಲೇಸಾಗಿ ಕುಂಠಣಿತನವಾಡಿ ಬದುಕುವರು ಕೆಲರು
ದೇಶದೊಳಗೆ ಜೋಗಿ ಕೊರವ ಕೋತಿ
ಆ ಸರ್ಪದಿಂದ ಬದಕುವರು
ಗಳಪಾಶದಿಂದಲಿ ಚೋರ ಬದಕುವನೊ
ಏಸುವಿಧ ಪೇಳಲಿ ಪೊಟ್ಟೆಯ ಪೊರೆವ ಜನರು
ಮೋಸಗೊಳಿಸುವರು ಒಂದೊಂದು ಬಗೆಯ
ಕೇಶವ ನಾನು ಇವರಂತೆ ವಂಚಕನಾಗಿ
ವೇಷವ ಧರಿಸಿ ಪೊಟ್ಟೆಯ ಪೊರೆವೆನೊ
ಮೀಸತೂಕವಾದರೂ ನಿನ್ನ ಪಾದದ
ವಿಶ್ವಾಸ ಕಾಲಘಳಿಗೆ ಇಲ್ಲ ಇಲ್ಲ

ಅಶಿ ಕವಚದಿಂದ ನಿನ್ನ ಮೊರೆಬಿದ್ದ
ಇನ್ನೀಶರೀರವ ಜೋಕೆ ಮಾಡಿಕೊಂಡು
ದಾಸನೆಂದೆನಿಸಿದೆ ಧರುಣಿಯೊಳಗೆ ತಿರುಗಿ
ಹೇಸಿಮಾರ್ಗಕ್ಕೆ ವಳಗಾಗಿಹೆನೊ
ನಾಶರಹಿತ ನಮ್ಮ **ವಿಜಯವಿಠಲರೇಯ**
ಈ ಸಂಸಾರಚಿಂತೆ ನಿನ್ನಲ್ಲಿ ಆಗದೋ || ೨ ||

೨೭೩ ಷಡುರಸಾಯನ ಹೊನ್ನ ಬಡಿವಾಣದೊಳು ಬಂದು
ಬಡಿಸಿಲಾದರದಿಂದ ಒಡನೇ ನೋಡಿ
ಎಡೆಯೊಳಗೆ ಒಂದು ನೊಣ ಕೆಡಹದಂತೆ ರುಚಿ
ಒಡಲ ತುಂಬ ಮೆದ್ದು ಸಡಗರದಲಿ
ಕಡು ತೃಪ್ತಿಯಾಗಿ ತಾ ಕಡೆಗೆದ್ದು ಪೋಗುವಾಗ
ಬಡಿದು ನೊಣನ ತಿಂದು ಹೊರಡೆ ಮರಳಿ
ಷಡುರಸಾಯನದನ್ನ ಕುಡಿದ ನೀರಿನ ಸಹಿತ
ಪಿಡಿಯಲಾರದೆ ಕಾರಿ ಮಿಡುಕಿದಂತೆ
ಗಡ ಮನಸ ಕೇಳನ್ಯರಿಗೆ ನುಡಿದದರಿಂದ ನೀನು
ಪಡದ ಪುಣ್ಯವನ್ಯೃತ ಒಡಲೊಳಿರಲೂ
ತಡಿಯದೆ ಬರಿಗೈಸಿ ಕೆಡಿಸುವರು
ಕೆಡಿಸುವುದು ಕೀರ್ತಿ ಪೊಡವಿಯೊಳಗೊಬ್ಬರ
ಗೊಡವಿಯಾಕೆ ಬಿಡು ಬಿಡು ಬಿಡು ಇಂಥ
ನಡತಿನುಡತಿಗಳು ಒಡೆಯ **ವಿಜಯವಿಠಲನ್ನ** ಅಡಗಳಲ್ಲಿಪ್ಪದು ||೩||

ತಾಳ: ಝಂಪಿ

೨೭೪ ಜಠರವನು ಕೈಲಮುಕಿ ಜುಣುಜುಣುಗಿ ಮೆಲ್ಲನೆ
ನಿಟಲವನು ನರನಾಚರಣದಲಿ ಇಟ್ಟು
ಗಿಟಕಿರಿದು ಹಲ್ಲನು ಗಿದ್ದನಾ ಕೊಡುಯೆಂದು
ಪಟುವಾಗಿ ಕಾಯದೊಳಗಳುಕಿ ಕೊಳುತ

ಕಟುಕರಂಗಡಿ ಮುಂದೆ ಕಾಯಿದ ನಾಯಿಯಂತೆ
ಗುಟಕುಗಳು ಉಗಳದಲೆ ನುಂಗಿಕೊಳುವೆ
ಅಕಟಕಟ ಹೀಗೆ ಮಾಡುವರೇನೊ ಹೇ
**ವಿಜಯವಿಠ್ಠಲ** ನಿನಗಿನಿತು ಕರುಣವು ಇಲ್ಲವೋ || ೪ ||

ಸುಡು ಸುಡು ಯಾಚಕನ ಜನ್ಮ ವ್ಯರ್ಥ ವ್ಯರ್ಥ
ಕೊಡುವೆನೆಂದರೆ ಬಹು ದಿವಸ ಕಾಯ್ದು
ಅಡಿಬಿದ್ದು ಅವನ ಮನಸು ತನ್ನ
ಕಡಿಗೆ ಮಾಡಿಕೊಂಡು ಯೋಚಿಸುತ
ಗಡಿಗೆಯೊಳಗಿನ ನೊಣದಂತೆ ಸುತ್ತುತ ಆಶೆ
ಬಿಡಲಾರದೆ ಹಿಡಿಯಲಾರದೆ ಮಿಡುಕುತ
ಕಡುಮೂರ್ಖನಂತೆ ನಾನಾದೆನು ಪ್ರಾಣೇಶ
ಸುಡು ಸುಡು ಯಾಚಕನ ಜನ್ಮ ವ್ಯರ್ಥ ವ್ಯರ್ಥ
ಕಡುಸಂಪೂರ್ಣ **ವಿಜಯವಿಠ್ಠಲರೇಯ**
ಕೊಡಗೈದಾತನಿರೆ ಇನಿತು ಪರರಾಶೆ || ೫ ||

ಯಾಚಿಸುವನ ಜನ್ಮ ಯಾತಕ್ಕೆ ಬರುವದು
ಯೋಚನೆ ಮಾಡಲಿಬೇಕು ತನ್ನೊಳಗೆ
ವಾಚಾಳನಾಗಿ ಪೋಗಿ ಎಲ್ಲೆಲ್ಲಿ ತಿರುಗುತ
ಊಚ ನೀಚವೆನದೆ ಸ್ತುತಿಸಿಕೊಳುತಾ
ಆಚಾರವನು ಬಿಟ್ಟು ದಿನಾಂತರವೆನದೆ
ಚಾಚುವೆನೊ ಕರವ ಕೇವಲ ದೈನ್ಯದಿ
ಚಾ ಚು ತಪ್ಪದಂತೆ ನುಡಿಯದಿದ್ದರೆ ನಾನಾ-
ಯೋಚನೆಗೊಳಗಾಗಿ ಕುದಿಯಾಬೇಕೊ
ಛೀ ಛೀ ಒಬ್ಬರ ಬೇಡುವ ನಡತಿಕಿಂತಲಿ
ನಾ ಚರಿಸಬಹುದು ಮಾರಿಗಳ ಕೂಡ
ಕುಚೇಲಪಾಲ **ಶಿರಿವಿಜಯವಿಠ್ಠಲ** ಎನಗೆ
ನಾಚಿಕಿಯಾಗಿದ್ದೈಯ್ಯಾ ಉದರಗೋಸುಗ || ೬ ||

೨೭೭ ಅನ್ಯದೇವತೆಗಳು ಕರದೊಯ್ದು ಮನ್ನಿಸಿ
ರನ್ನದಂದಣವೇರಿ ಮೆರಸಲು
ಮುನ್ನೇನು ಸುಖವಿನಿತಿಲ್ಲ ದುಃಖವಲ್ಲದೆ ಘೋರ
ಗನ್ನ ಘಾತಕವು ಎಂದಿಗೆ ತಪ್ಪದು
ಸನ್ನೆಯನು ಕೇಳಿ ಸರುವೋತ್ತಮ ಹರಿ ಉದಾ-
ಸೀನವನು ಮಾಡಿ ಕೆರ ಹೊಡಿಸಿದ ಸುಖ-
ವೇನು ಬಾರದು ಕಾಣೊ ಪನ್ನಂಗಾರಿಗಾದರು
ಅನ್ಯಥಾ ಬಿಡದಿರು **ವಿಜಯವಿಠ್ಠಲನ್ನ**
ಅನ್ಯದೇವತೆಗಳು ಕರದೊಯ್ದು ಮನ್ನಿಸೆ || ೭ ||

### ಅಟ್ಟತಾಳ

೨೭೮ "ನ ತೇ ವಿಷ್ಣೋ" ಎಂದೆಂಬೋ ನಿಗಮಾರ್ಥ
ಹಿತದಿಂದಲಿ ತಿಳಿದು ಹಿರಿದಾಗಿ ಅರಿದು
ಕ್ಷಿತಿಸುರರ ಗರ್ಭದಲಿ ಬಂದು ಮಾ-
ರುತಿ ಮತದಲಿ ಬಲು ಜ್ಞಾನಿಯಾಗು
ಇತರ ಮತವ ನಂಬಿ ಓದದಿರು ವೇದ
ಗತಿಯಿಲ್ಲದೆ ಹಾಯ ಹಾಯನಾಗುವದೇನು
ಯತಿಗಳಿಗೆ ಸಿಕ್ಕ **ವಿಜಯವಿಠ್ಠಲಂಗೆ**
ಪ್ರತಿಕಕ್ಷಿಯಿಲ್ಲ ದೇವತೆಗಳೊಳು ಕೇಳು
ಮತಿಗೆಡದಿರು ನೀನು ಮತಿಗೆಡದಿರು ನೀನು || ೮ ||

೨೭೯ ಮಡಿ ಮಾಡಿಕೊಂಬ ಬಗೆಯ ತಿಳಿಯಬೇಕು ಮನುಜ
ಮಡುವಿನೊಳಗಿನ ಉದಕ
ಜಡವಲ್ಲವೆ ಮಡಿಯಂದೆನಿಸಿಕೊಂಬ ವಸ್ತ್ರ ತಾನೆ ಜಡವು
ಮಡಿಯೆಂತಾಯಿತು ಪೇಳೊ ಸದಾಚಾರನೇ
ಜಡಜಡಕೆ ಸಂಬಂಧವಾದರೆ ತಕ್ಷಣಕೆ
ಉಡುವದು ಹೊದಿವದು ಶುಚಿ ಆಹದು

ಜಡಕೆ ಈ ಸಾಮರ್ಥ್ಯ ಬಂದತರುವಾಯ
ಪೊಡವೀಶ ರಂಗಗೆ ಪೇಳು ಅದನೆ
ಕಡಲಶಯನ ನಮ್ಮ **ವಿಜಯವಿಠ್ಠಲರೇಯನ**
ಅಡಿಗಳ ನೆನದವನು ಸರ್ವದ ಮಡಿಯೆನ್ನು || ೯ ||

೨೮೦ ಮಾಯಾವಾದಿ ಪೋದಲ್ಲಿ ಸುಜನರೆಲ್ಲ
ದೃಢವಾಗಿ ತಿಳಿವದು ಅಡ್ಡಗಂಧದವನ ಮುಖ ನೋಡದಿಂ
ನೀಡದಿರಿ ಗ್ರಾಸ ನಿಮ್ಮಗುರುಗಳಾಣೆ
ಮೂಢ ಅವಾತನ ಮತವು ಸುಡಲಿ ಸುಡಲಿ
ಹೆಡ್ಡ ತೊತ್ತಿನ ಪೋದ ಮಡದಿಯೊಳು ಪೊಕ್ಕು
ಹೆದ್ದೊರೆಬಲದಿಂದ ಪೊಡವಿಗಧಿಕ ಶಿವ **ವಿಜಯವಿಠ್ಠಲನ್ನ**
ಪಾದಕ್ಕೆ ನೀವು ಬೀಳಿರೋ ಅಡ್ಡ ಬೀಳಿರೊ || ೧೦ ||

೨೮೧ ಮಾಯಾವಾದ ವಾದಿಗಳಿಗೆ ನಾಯಿ ಜನ್ಮವೆ ಸತ್ಯ
ಹರಿ ಭಕ್ತರೆಲ್ಲೆಲ್ಲಿ ಪೂಜ್ಯರು ಸತ್ಯ
ಸಂಕರನೆಂಬೋನು ಮಂಕುತೊತ್ತಿನ ಮಗ
ಹಿಂದಿನ ವೈರದಿ ಹೀನಮತವ ಮಾಡ್ದ
ಅಂದು ಅವನ್ನ ಹಿಡಿದು ಭಂಜಿಸಿದ್ದ ಕಲಿಭೀಮ
ಇಂದು ಅವನ ಮತವ ಮೂರಡಿಯ ಮಾಡಿ
**ವಿಜಯವಿಠ್ಠಲನೆ** ಪರದೈವವೆಂದು ಮೆರೆದ ಈ ಧರೆಯೊಳಗೆ ||೧೧||

೨೮೨ ಜಾಲಿಸಬೇಕು ಜಾಲಿಸಬೇಕು, ಜಾಲಿಸಬೇಕು ಜಾಲಗಾರನಾಗಿ
ಜಾಲಪಾಪಂಗಳ ಕಸಪೋಗುವಂತೆ ಜಾಲಿಸಬೇಕು
ಜಾಲಿಸಿ ಒಳ್ಳೇ ವಸ್ತುಸಂಪಾದಿಸಿ ಜಾಳಿಗ ಚನ್ನಾಗಿ ತುಂಬಲು
**ಮಾಯಾಜಾಲವಿಜಯವಿಠಲನ** ಸನ್ನಿಧಿಯಲ್ಲಿ
ಜಾಳಿಗೆಯಿಟ್ಟು ಜನನ ನೀಗಬೇಕು || ೧೨ ||

೨೮೩ ಹರಿಭಕುತಿಯಿಲ್ಲದವನೊಬ್ಬ ಕೋಣ
ಪರಿಪರಿನೆಸಗಿದ್ದ ಸುಕೃತಕ್ಷೀಣ

ಧರೆಯೊಳಗವನೆ ಜೀರ್ಣಪದ ತ್ರಾಣ
ಕೊರಳಲಿ ಹಾಕಿದ ಹಾರವ ಕಾಣ
ಸುರನರೋರುಗಮಧ್ಯ ಇಲ್ಲವಗೆ ತಾಣ
ಸಿರಿವಿಜಯವಿಠಲ ಪೊರೆಯನು ಪ್ರಾಣ ‖ ೧೩ ‖

೨೮೪ ಎತ್ತಣದೊ ಈ ಮಾಯಾ ಸಂಸಾರ
ನಿತ್ಯವಲ್ಲ ನಿತ್ಯವಲ್ಲ ವಿಚಾರಿಸೆ
ತುತ್ತುವನು ಮೆಲುವಾಗ ಕಂಟಕವಿದ್ದಂತೆ
ಮೃತ್ಯು ಮಾರಿಗಳು ಕಾದಿಪ್ಪವೆಲ್ಲ
ಮರ್ತ್ಯದಲಿ ಪುಟ್ಟಿ ಸುಖಬಯಸುವ ನರಗೆ
ಹತ್ತುಸಾವಿರ ಪ್ರಣವ ಮಾಡುವೆನೋ
ಉತ್ತುಮಗತಿ ಬಯಸೊ ನಾಯಿ ತಲೆಮೇಲಿನ-
ಬುತ್ತಿಯಂದದಿ ಕಾಣೊ ಸತಿ ಸುತರು
ಚಿತ್ತದಲ್ಯಾಡುವ ವಿಜಯವಿಠ್ಠಲರೇಯನ
ತುತಿಸಲು ಬಂದು ಕೈವಲ್ಯಾದಾರಿಡುವ ‖ ೧೪ ‖

೨೮೫ ಜನನದ ಭಯ, ಮರಣದ ಭಯ ಬರುತಿಪ್ಪ
ಮನೊ ಇಂದ್ರಿಯಂಗಳು ವಿಷಯಕ್ಕೆರಗುವ ಭಯ
ಕಾನನಭಯ ಬಲುರೋಗತೊಡಕುವ ಭಯ
ತೀವ್ರತಮಸಿನ ಭಯ ಬಂದರಾದರು
ಗಣಣೆ ಮಾಡರು ಕಾಣೊ ಹರಿಯ ನಂಬಿದ ಜನರು
ಅನುಮಾನ ಸಲ್ಲದು ಸಂತತ ತಿಳಿವುದು
ಜನುಮಾದಿಕರ್ತ ಶ್ರೀವಿಜಯವಿಠಲನ-
ರ್ಚನೆ ಮಾಡು ಅನುದಿನ ಭಯಗಳ ನೀಗೊ ‖ ೧೫ ‖

೨೮೬ ಎಲೊ, ಎಲೊ, ದುರಿತವೆ ಓಡು ಎನ್ನ
ಬಳಿಯಲ್ಲಿ ಮೊದಲಂತೆ, ತಲೆಬಲಿತು ನಿಂದೆಯಾದರು ನಿನ್ನ
ಕುಲಕೆ ಕ್ಷೇಮವಿಲ್ಲ ಕೈಲೆ ಕಡ್ಡಿಯನಿತ್ತೆ

ಮಲೆತವರ ಗಂಡ ಶಿರಿಕೃಷ್ಣ ಕಂಡರೆ ನಿನ್ನ
ತಲೆಯ ಚೆಂಡಾಡುವ ಭೂತಬಲಿಯನೀವ
ತಿಳಿದುಕೊ ನಿನ್ನೊಳು ನೀನು ಮೊದಲಂತೆ ನಾನಲ್ಲ
ಸುಲಭ **ವಿಜಯವಿಠಲ** ಒಲಿದರೆ ಭಯವಿಲ್ಲ || ೧೬ ||

೨೮೭ **ಈ** ಕಲ್ಪಸಾಧನ ಅಪರೋಕ್ಷ ನಂತರದಲ್ಲಿ
ಬ್ರಹ್ಮ ಮೊದಲುಮಾಡಿ ತೃಣಜೀವ ಪರಿಯಂತರ
ಅವರ ಯೋಗ್ಯತೆ ಸಾಧನ ಹೇಳಿ
ಆದೆ ಇದು ಎಷ್ಟು ಆಯಿತೆಂದರೆ ಎರಡು ಮಹಪದ್ಮ
ಆರೈವತ್ತುಪದ್ಮ ಎರಡು ಮಹಖರ್ವ ಏಳು ಖರ್ವ ಒಂದು
ನಿರ್ಬುದ ಎಂಟು ಅರ್ಬುದ ಆರೈವತ್ತಾರು-
ಕೋಟಿ ವರುಷವಾಯಿತು **ಶ್ರೀವಿಜಯವಿಠಲ** || ೧೭ ||

೨೮೮ ಸ್ನಾನಮಾಡಿದರಿನ್ನೇನು ಫಲವೋ
ಮೌನಮಾಡಿದರಿನ್ನೇನು ಫಲವೋ
ದಾನಮಾಡಿದರಿನ್ನೇನು ಫಲವೋ
ಸ್ನಾನ ಮೌನ ದಾನ ನಾನಾಕವೆಲ್ಲ
ಭಾನುಉದಯದಲಿ ನೀನೆದ್ದು ಭಕುತಿಲಿ
ಶ್ರೀನಾರಾಯಣನೆಂಬೋ ನಾಮಾ
ಆನಂದವಾಗಿ ಒಮ್ಮೆ ಕೊನೆನಾಲಿಗೆಯಿಂದ
ನೀ ನೆನೆಯೊ ನೀ ನೆನೆಯೊ ಮನವೆ
ಸ್ನಾನ ಮಾಡಿದರಿನ್ನೇನು ಫಲ ಜ್ಞಾನಗೋಚರ **ವಿಜಯವಿಠಲನ್ನ**
ಧ್ಯಾನದಲ್ಲಿ ಒಮ್ಮೆ ನೆನೆದರೆ ಸಾಕು
ಸ್ನಾನಮಾಡಿದರಿನ್ನೇನುಂಟು || ೧೮ ||

೨೮೯ ಬಿಂಬ ಪೊಳೆಯುತಿರೆ ಡಿಂಬ ದಂಡನೆಯಾಕೆ
ತುಂಬಿದೂಟವಿರೆ ತಿರುಪೆಯಾಕೆ
ಕೊಂಬೆಯಲಿಪ್ಪ ಹಣ್ಣು ತಾನೆ ಬೀಳುತ್ತಿರಲು

ಕುಂಭಿಣಿಯಲಿ ಕೆಡಹಿ ಫಲಮೆಲುವರೆ
ಹಂಬಲಗೊಳಸಲ್ಲ ಕರ್ಮವೆಂಬುದು ತೊರದು
ಜ್ಞಾನಾಂಬುಧಿಯೊಳಗಿರು ನಂಬಿ ಹರಿಯು ಸಾರು
ಗಂಭೀರಪುರುಷ ಶ್ರೀಹರಿ **ವಿಜಯವಿಠ್ಠಲರೇಯನ**
ಬಿಂಬ ನೋಡಿದವರಿಗೆ ಇಂಬುಂಟು ವೈಕುಂಠದಲ್ಲಿ || ೧೯ ||

೨೯೦ ಪರಮರಹಸ್ಯವಿದು ಕೇಳಿರಿ ಸಜ್ಜನರು
ಅರುಹುವೆ ಶಿರಿಪತಿಯು ವ್ಯಾಪಾರವ
ಕರುಣಿಸಿ ವಾಕು ಮನಮಯನೆನಿಸಿ
ಶಿರದಶ ತೋಳಿರಡು ಪದವೆರಡು ಧರಿಸುತ್ತ
ಸ್ಥಿರದೇಹದಲಿ ನಿಂತು ತ್ರಿವಿಧರ ಮನದಲಿಪ್ಪ
ಸುರರಿಗೆ ಬಲಭಾಗ ಪಂಚಾಸ್ಯದಿ
ಇವರಿವರ ಸ್ತ್ರೀಯರಿಗೆ ವಾಮಪಂಚಾಸ್ಯದಿಂದ
ಪ್ರೇರಣೆಮಾಡುತ್ತ ಸದಕಾಲ
ಶರಣವತ್ಸಲ **ಸಿರಿವಿಜಯವಿಠ್ಠಲರೇಯ**
ಪ್ರಾಂತಕ್ಕೆ ಕೊಡುತಿಪ್ಪ ಇವರಗತಿ || ೨೦ ||

೨೯೧ ತನ್ನಂತರ್ಯಾಮಿ ಒಳಗಿದ್ದ ಬಿಂಬನ್ನ
ಅನಂತಾನಂತ ಅಂಶವೇ ಚಿಂತಿಸಿ
ಭಿನ್ನ ಜೀವರ ತಿಳಿದು ಅವರವರ ಒಳಗಿಪ್ಪ
ಘನ್ನಮೂರುತಿಯ ತುತಿಸಿ ಬಹು ಬಗೆಯಿಂದ
ಪುಣ್ಯಪ್ರಾಣನೆಂದು ಸ್ಮರಿಸಿ
ಆ ಅಂಶಗಳ ಭಿನ್ನಮಾಡದೆ ತಿಳಿದು
ಬಿಂಬನೊಳಗೆ ಚನ್ನಾಗಿ ಕೂಡಿಸಿ
ಏಕತ್ರವೇಮಾಡಿ
ಮುನ್ನೆದ್ವಿವಿಧ ಕರ್ಮ ತೋರಿಸಲಾಗಿ
ಪುಣ್ಯವೆ ಬರುವದು ಆದರಿಂದಲಾದರೂ ತನ್ನ-

ಸಹಿತದಲ್ಲಿ ಗುಣ ಯೋಚಿಸಬೇಕು
ಪನ್ನಗಶಯನ ನಮ್ಮ **ವಿಜಯವಿಠ್ಠಲರೇಯನ**
ಸನ್ನುಮತಿಯಿಂದ ಆಲೋಚಿಸಿದ ಮನುಜಗೆ || ೨೧ ||

೫೯೨ ಕುಟ್ಟು ಕುಟ್ಟು ಕುಂಟಣಗಿತ್ತಿ ದುರುಳರ
ಕುಟ್ಟುಹಿಡಿವಂತೆ ಕುಟ್ಟು ಕುಟ್ಟು ಪರರ
ಕುಟುಂಬ ಬಯಸುವ ಕುಟೀರದೊಳು ಇದ್ದ ಕುಟಿಲವರ್ಗಗಳ
ಕುಟ್ಟಿ ಕುಟ್ಟಿ ಕುಟ್ಟಿ ಹಿಟ್ಟುಮಾಡಿ ಅವರ
ಗುಟ್ಟಾರಸಬೇಕು ಒಳಗೆ ಹಾಕಿ
ಸೃಷ್ಟೀಶ**ವಿಜಯವಿಠಲರಾಯನ** ಮನೆ
ಜಟ್ಟಿಗನಾಗಿ ಮುಷ್ಟಿಪೆಟ್ಟನಿಂದಲಿ || ೨೨ ||

೫೯೩ ರೆಕ್ಕೆ ಮುರಿದ ಪಕ್ಕಿ ಬಾಯಬಿಟ್ಟಂತೆ ಗಗ-
ನಕ್ಕೆ ಮೊಗವೆತ್ತಿ ಕೂಗುತಿಪ್ಪೆ
ಅಕ್ಕರ ನಿನಗಿನ್ನು ಬಾರದೆ ಎಲೊ ದೇ-
ವರ್ಕಳ ಒಡೆಯನೆ ತ್ರಿಜಗದಲ್ಲಿ
ತಕ್ಕಿಸಿ ಪೋದರೇನೊ ಸರ್ವಜೀವಿಗಳು ಯಾ-
ತಕ್ಕೆ ಎನ್ನೊಬ್ಬನ ಸುತ್ತಿಸುವೆಯೋ
ಚಕ್ಕಂದಾಗಿದೆ ನಿನಗೆ ನಾನೋರ್ವನೆ ಗತಿಯೆ
ಮುಕ್ಕುತಿಯಾಗಿಪ್ಪದೆ ಸರ್ವರಿಗೆ
ಬಕ್ಕದಾಸನು ನಾನು **ವಿಜಯವಿಠಲ** ನಿನ್ನ
ಲೆಖ್ಖಕ್ಕೆ ನೆನಿಪನಾವಾವಾನೈಯ್ಯಾ || ೨೩ ||

೫೯೪ ಕೋಟಿ ಕೋಟಿಗೆ ನಿನ್ನ ನಾಮ ಒಂದೇ ಸಾಕು
ದಾಟಿಸುವದು ಭವಸಾಗರವ
ಬೂಟಕತನದಲಿ ಹರಿದಾಸನಾದರೆ
ತೋಟವಿಲ್ಲದೆ ವೋಟೆ ಎತ್ತಿದಂತೆ
ನೀಟಾಗದು ಕಣೊ ಎಂದಿಗು ಯಮಭಟರ

ಕಾಟತಪ್ಪದು ಕಾಶಿಯೊಳಗಿದ್ದರು
ಹಾಟಕಾಂಬರಧಾರ **ವಿಜಯವಿಠಲರೇಯ**
ನಾಟಿಸು ನಿನ್ನ ಚರಣದಲಿ ಎನ್ನ ಮನಸು || ೩೪ ||

೩೫ ಅಡಿಗಡಿಗೆ ನಾ ನಿನ್ನ ಅಡಿಗಳನೆ ನಂಬಿದೆ
ತೋರಯ್ಯ ಎನಗೆ ಸುಚಿತ್ತ ಚಿತ್ತಜನೈಯ್ಯ
ಎಡೆಬಿಡದೆ ನಿನ್ನಂಘ್ರಿ ಚನ್ನಾಗಿ ಪೂಜಿಸಿ
ಎಡೆಗೆಡಿಪ ಲಿಂಗವನ್ನು ಬಂಧಿಸಿಕೊಂಡು
ಬಡಿವಾರ ನಿನ್ನವನೆಂಬೊ ಮಾತನೆ ಪೇಳಿ
ಸಡಗರದಿ ಮೆರವ ದಾಸನ್ನಮಾಡಯ್ಯಾ
**ಬಿಡೌಜಪತಿಸಿರಿವಿಜಯವಿಠಲ** ಸ್ವಾಮಿ
ಬರಿಸೊ ಬರಿಸೊ ನಿನ್ನ ಸ್ಮರಣೆ || ೩೫ ||

೩೬ ನಿನ್ನ ಜನರ ಸಂಗ ಕೊಡು ಎನ್ನ ಅಂತರಂಗ
ಘನ್ನ ಸುಗುಣಾಂತರಂಗ ಮಂಗಳಾಂಗ
ಅನ್ಯಪೇಕ್ಷೆಯೊಲ್ಲೆ ಅಂದಿನಭವಣೆ ಬಲ್ಲೆ
ಮನ್ನಿಸು ಮಾರಮಣ ಇಲ್ಲೇ ಇಲ್ಲೇ
ಇನ್ನು ಈ ದೇಹದಲ್ಲೀ ಕಡೆ ಮಾಡು ಇಹದಲ್ಲಿ
ಮುನ್ನೆ ಪುಟ್ಟಿ ಬರುವ ಕರ್ಮದ ಬಲೆ
ಎನ್ನ ಮನೋರಥ **ಸಿರಿವಿಜಯವಿಠಲ ಹರಿ**
ಧನ್ಯನ ಮಾಡುವದು ಪಥವ ತೋರಿ || ೩೬ ||

೩೭ ಮರಣ ಮುಂದೆ ಬಂದು ಒದಗುವದೇ ಸತ್ಯ ಸಂ-
ಕರುಷಣನೆ ಕೇಳು ಎನ್ನ ಬಿನ್ನಪ ನಿನ್ನ
ಚರಣ ಸ್ಮರಣೆ ಎನಗಿರುವದಿಲ್ಲವೊ ತಿಳಿಯೆ
ಹರಿಯೆ ನಿನ್ನದಾಗಲಿ ಎಂಥಾದು ಕರಣ
ಹರಣ ಮನಸು ಸ್ವಾಧೀನವಿದ್ದಾಗ ನೆರೆನಂಬಿ ಸ್ತೋತ್ರಗಳ
ಮಾಳ್ಪೆನಯ್ಯಾ

ಕರುಣಾಂಬುಧಿ ಮರವು ಕಲಿಸದಿರು ಆಕಾಲಕ್ಕೆ
ನಿರಯಣ ಸಮಯಕ್ಕೆ ನಿನ್ನ ನಾಮಂಗಳು
ಉಚ್ಚರಣೆಯಾಗುವಂತೆ ಪ್ರೇರಿಸಬೇಕೊ
ವರುಣಾಂತರ್ಯಾಮಿ **ವಿಜಯವಿಠ್ಠಲರೇಯ**
ಶರಣರ ಅರಭಾರವೊಹಿಸುವ ದೇವ || ೨೭ ||

೯೮ ಪತಿಯೇ ನೀನಾಗಿ ಹಂಗಿಸಲ್ಯಾಕೊ ಎಲೊ ದೇವ
ಶ್ರುತಿಶಾಸ್ತ್ರವಿದಕೆ ಸಮ್ಮತ ಪೇಳುವೆ
ಕ್ಷಿತಿಯೊಳು ಜನಿಸಿ ನಾ ದೋಷಮಾಡದಿದ್ದರೆ
ಪತಿತಪಾವನನೆಂಬ ಬಿರದು ನಿನಗೆ
ಜಿತವಾಗುವುದೇನೊ ಪರಮೈಶ್ವರ್ಯನೆ ಕೇಳು
ಪ್ರತಿ ದೈವವಿದ್ದರೆ ಅವಗಾಗದೆ
ತುತಿಸಿ ನುತಿಸಿ ನಿನ್ನ ಕೊಂಡಾಡುವಂಥ ಈ
ಅತಿಶಯ ನಿನಗ್ಯಾಕೆ ಹಗಲಿರಳೂ
ಸತತ ಗುಣಾಂಬುಧಿ **ವಿಜಯವಿಠ್ಠಲನೆನ್ನ**
ಪತಿತನಾಗಿ ನಿನಗೆ ಮೊರೆಯಿಡುವೆ || ೨೮ ||

೯೯ ಹಾಗ ಕಾಸುವೀಸ ಹಂಚಿಕೊಡು ಎಂದು
ಭಾಗಾದಿಯಾಗಿ ನಾ ಬೇಡಲಿಲ್ಲ
ಕೂಗಿ ಬೆಟ್ಟಕ್ಕೆ ಪಿರಿದಾಗಿ ಸೌಭಾಗ್ಯವಿತ್ತು
ಪೋಗಗೊಡದೆ ನಿನ್ನ ತಡಿಯಲಿಲ್ಲ
ಬಾಗುವೆ ನಿನ್ನ ಭಕ್ತರ ಮನೆಬಾಗಿಲು ಕಾಯ್ವಂತೆ
ಯೋಗಿಹೃದಯ **ಶ್ರೀವಿಜಯವಿಠ್ಠಲರೇಯ**
ಯೋಗಿ ನೀ ಗರ್ವಿಸಿದರೆ ರೇಗದೆ ಒಡದೊಳು || ೨೯ ||

೧೦೦ ಒಂದೆಂಟು ಬಾಗಿಲುಳ್ಳ ಪಟ್ಟಣದೊಳಗೆ
ಮುಂದೆ ಇಪ್ಪತ್ತುನಾಲ್ಕು ಮನೆಯೊಳು
ತಂದೆನ್ನ ನಿಲ್ಲಿಸಿ ಒಳಗಿಟ್ಟು ಕಾವಲು ಮಾಡಿ

ಬಂಧನದೊಳಗಿಟ್ಟು ಬಳಲಿಸುವದನ್ಯಾಯು
ತಂದೆ ಅಂತರಾತ್ಮಕ ನೀನು ಒಳಗಿದ್ದು ಸ್ವತಂತ್ರ-
ನೆಂದೆನಿಸಿ ಎನ್ನ ಬರಿದೆ ಕೊಲ್ಲಿಸುವರೇನೋ
ಕಂದರ್ಪಪಿತ ರಂಗ ನೀ ಕಾಯಬೇಕೆನ್ನ
ಎಂತಾದರೇನು ಅನಂತಮೂರುತಿ **ವಿಜಯವಿಠ್ಠಲ** ॥ ೩೦ ॥

೩೦೧ ಕಾಲಕಾಲಕೆ ನಿನ್ನ ನಾಮದ ಸ್ಮರಣೆಯನು
ನಾಲಿಗೆಗೆ ಕೊಡುಕಂಡ್ಯ ನಾರಾಯಣ
ಕೀಳು ಮತಿಯನೆ ಬಿಡಿಸೊ ಕೀರ್ತನೆಯ ಮಾಡಿಸೊ ನಿ-
ನ್ನಾಳುಗಳೊಳಗೆ ಊಳಿಗವನಿತ್ತು
ಪಾಲಿಸೊ ಬಳಲಿದೆನೊ ಭವದೊಳಗೆ ಬಿದ್ದು ಬ-
ಯಲಾಸೆಯಲಿ ನಾ ಕಾಲವ ಕಳದೆ
ಪಾಲಸಾಗರಶಾಯಿ **ವಿಜಯವಿಠಲ** ನಿನ್ನ
ಪಾಲಿಗೆ ಬಂದೆನೊ ಪರಮಪುರುಷ ಹರೇ ॥ ೩೧ ॥

೩೦೨ ತತ್ವಾಭಿಮಾನಿಗಳಿರಾ ಉತ್ತರವ ಪಾಲಿಪುದು
ಎತ್ತಿ ಕರವ ಮುಗುವೆ ವಿನಯದಲ್ಲಿ
ಅತ್ಮದೊಳಗೆ ನಿಮ್ಮ ವ್ಯಾಪಾರ ಘನವೈಯ್ಯ
ತತ್ತಸ್ಥಾನದಲ್ಲಿ ನಿತ್ಯವಾಗಿ
ದೈತ್ಯರಿಗೆ ಸರ್ವದ ನಿಮ್ಮ ಪ್ರೇರಣೆಯುಂಟು
ಅತ್ತ ಎಳೆಸದಿರಿ ದುಸ್ಸಂಗಕ್ಕೆ
ಚಿತ್ತದಲಿ ನೀವೆ ನಿಜವ್ಯಾಪಾರಮಾಡುವರು
ಸತ್ಯಕ್ಕೆ ಎರಗುವ ಮಾರ್ಗವಿತ್ತು
ಉತ್ತಮಗುಣದಲ್ಲಿ ಮೊದಲೆ ನಿಮ್ಮ ಪೂಜಿಪ
ಅರ್ಥಿಯಾಗಲಿ ಆ ತರುವಾಯದಿ
ಉತ್ತಮಶ್ಲೋಕ **ಸಿರಿವಿಜಯವಿಠಲನ್ನ**
ತುತಿಸಿ ಆತನ್ನ ಚರಣನೋಳ್ಪದ ಮಾಡಿ ॥ ೩೨ ॥

೩೦೩ ಆವದಾದರು ನೀನಿತ್ತದೆ ಎನಗಿಷ್ಟ
ನೋವೊಂದಾದರಿಲ್ಲ ಕಾವ ಜನಕ
ಜೀವೇಶರೊಂದೆಂಬ ದುರ್ಮತಿಯು ಕೊಡದಿರು ಏಕ-
ಭಾವದಲಿ ಇದನೆ ಬೇಡಿಕೊಂಬೆ
ದೇವ ನೀ ನರಕದಲ್ಲಿ ಬಹುಕಾಲವಿಟ್ಟರು ಇಷ್ಟೆ
ನಾನೊಲ್ಲೆ ನಾನೊಲ್ಲೆ ಮಿಥ್ಯಮತವ
ಕಾವ ಕರುಣಿ ನೀನೆ **ವಿಜಯವಿಠಲ** ಎನ್ನ
ಪಾವನಮಾಳ್ಪದು ಪರಮಪುರುಷ ಹರೇ || ೩೩ ||

೩೦೪ ಇಂದೇ ಮುಕುತಿ ಬೇಡಬಂದದಿಲ್ಲ
ಹಿಂದೆ ಬಟ್ಟಕ್ಲೇಶ ಪೋಗಾಡು ಎನಲಿಲ್ಲ
ಮುಂದಾಗುವ ವಿಹಿತ ಅನುಭವವಾಗಲಿ ಎಂದೆ
ಅಂದಿಗಾವದೊ ಎಂದಿಗೆ ಬಪ್ಪದೊ
ವಂದಿಸಿ ನಿನಗಿನ್ನು ದ್ವಂದಕರವ ಮುಗಿದು
ಬಂದೆ ಬಿನ್ನೈಸುವೆ ಒಂದೆ ದೈವ
ಎಂದೆಂದಿಗೆ ನಿನ್ನ ದಾಸರ ದಾಸನಾದೆ
ಮುಂದೆ ಕಾಯ್ದು ನಿತ್ಯ ಅವರೆಡೆಯ ಎಂಜಲು
ತಿಂದು ಬದುಕಿ ನಿನ್ನ ಕೊಂಡಾಡುವಂತೆ ಮಾಡು
ಕಂದರ್ಪಪಿತ ನಮ್ಮ **ವಿಜಯವಿಠಲರೇಯ**
ಇಂದೇ ಮುಕುತಿಬೇಡ ಬಂದಿಲ್ಲ || ೩೪ ||

೩೦೫ ಕುಲಿಶ ನಂಬಿದ ನರಗೆ ಶೈಲದ ಭಯವುಂಟೆ
ಜಲಧಿ ನೆಲೆ ಬಲ್ಲವಗೆ ಕೊಳಚಿನೀರಿನ ಭೀತೆ
**ಛಲದಂಕವಿಜಯವಿಠಲ** ನಿನ್ನ ನೆನೆಯಲು
ಕಲಕಾಲ ಆರ್ಜಿಸಿದ ದುರಿತಗಳು ನಿಲ್ಲೋವೆ || ೩೫ ||

೩೦೬ ಆ ವಿಜಯವಿಠಲನ್ನ ಚರಣವಿರಲು ಕಾವರಾರೆಂದು ಇನ್ಯಾಕೆ
ಮರಗುವಿ ಪ್ರಾಣ

ಆ ವಿಜಯವಿಠಲನ್ನ ಚರಣವಿರಲು
ಕ್ಷೀರವಾರಿಧಿ ತಡಿಯ ಸೇರಿ ಮನೆಗಟ್ಟಿಕೊಂಡು
ನೀರುಮಜ್ಜಿಗೆಗಾಣದಳುವದೇನೊ
ಸಾರಿದರೆ ನಿನ್ನ ಕುಲಸಹಿತಕ್ಕೆ ಸುಖವೀವ
**ನಾರದವರದಸಿರಿವಿಜಯವಿಠಲನ್ನಸ್ವಾಮಿ** || ೩೬ ||

೩೦೭ ನಾನು ನೀನು ಎಂದು ಒಮ್ಮೆಗಾದರು ನರ
ಅನಂತ ಜನುಮದಲ್ಲಿ ನುಡಿದನಾಗೆ
ಶ್ವಾನಸೂಕರದುಯೋನಿಯಲ್ಲಿ ಪುಟ್ಟಿ
ಮಾನಸಾಧಮನಾಗಿ ಕಟ್ಟಿಕಡಿಗೆ
ನಾನಾ ಸಂಕಟಬಟ್ಟು ಹೀನಭೋಜನ ಮಾಡಿ
ತಾನಿಳುವನು ನಿತ್ಯ ನರಕದಲ್ಲಿ
ಅನಂತ ಜನುಮದೊಳು ಸೇವಕನೆಂದೆನೆ
ತಾನೊಲಿದು ಈವ **ವಿಜಯವಿಠಲ** ಗತಿ || ೩೭ ||

೩೦೮ ಭವಿತಭಾವಿತಲೋಕವೆಂದೆಂಬನಿಗಮಾರ್ಥ
ಶಿವಗೆ ಸನಕಮುನಿ ಪೇಳಿದನಂದು
ಶಿವನೆ ದುರ್ವಾಸನು ಒಮ್ಮೆ ಪರೀಕ್ಷಿಸಿ
ಅವನಿಪತಿಯಿಂದ ಖಿನ್ನನಾದ
ಕುವರನಾಗಿ ಒಮ್ಮೆ ಗುಣಗಳು ಎಣಿಸಿ
ಹವಣ ತೋರದೆ ಬೆರಗಾಗಿನಿಂದ
ಬವರದೊಳಗೆ ಗುರುನಂದನನಾಗಿ
ಶರವನು ಎಸೆದು ಬೆಂಡಾಗಿನಿಂದ
ಪವನನೊಡೆಯ ನಮ್ಮ **ವಿಜಯವಿಠ್ಠಲಂಗೆ**
ಶಿವನು ಸೇವಕನಾಗಿ ಅರಸುತಿಪ್ಪ || ೩೮ ||

೩೦೯ ಬಾಂಧವನು ನೀನೆ ಭಕ್ತಹೃದಯಮಂದಿರದಲ್ಲಿ
ವಿಠಲಮೂರುತಿಯಾಗಿ ನಿಂದವನು ನೀನೆ ಶೇಷಪರ್ವತದಲ್ಲಿ

ಧಂಧಂರಧಿಸುವ ಸುಂದರತಿರುವೆಂಗಳನಾಗಿ
ಒಂದೇ ಮೂರುತೆರಡೊಂದೆನಿಸಿ
ಮಂದಮತಿಗೆ ಐಶ್ವರ್ಯವ ತೋರಿದೇನೆಂಬೆ
**ವಿಜಯವಿಠಲ** ತಿರುವೆಂಗಳ
ಒಂದಕೊಂದಾನಂತ ಅನಂತ ಒಂದೋ || ೩೯ ||

೩೧೦ ಕಠಿಣವಾದರು ನಿನ್ನನಾಮ ಅನುಗಾಲ
ಜಠರಾದೊಳಗೆ ಇಟ್ಟು ಎಂತಾದಾರಾಗೆ
ನಟನೆಯ ಮಾಡುತ ತಿರುಗುವ ಮಾನವಗೆ
ಅಟವಿಯಲ್ಲಾದರು ಪೂರ್ಣಸುಖವು
ಸಟೆಯಲ್ಲ ಈ ಮಾತು ಅಜಭವಾದಿಗಳೆ ಬಲ್ಲರು
ನಿಚ್ಚಟಾ ತಿಳಿದು ಪೇಳಿದರು ಪುಸಿಯಲ್ಲ
ವಟಪತ್ರಶಾಯಿ ನಮ್ಮ **ವಿಜಯವಿಠ್ಠಲರೇಯ**
ವಿಠಲಾ ಎಂದು ನುಡಿದವಗೆ ಆವ ಭಯಉಂಟು || ೪೦ ||

೩೧೧ ಅನಂತ ಅಪರಾಧ ಮಾಡಿದ ಕಾಲಕ್ಕು
ನೀನೆಣಿಸುವನಲ್ಲ ಸತ್ಯಕಾಮಧೇನೆಂದು
ಶ್ರೀನಾರಿ ಬೊಮ್ಮ ಮಹೇಂದ್ರಾದ್ಯರು ನಿತ್ಯ
ಎಣಿಕೆ ಮಾಳ್ಪರು ಎಲ್ಲೆಲ್ಲಿ ನಿರೀಕ್ಷಿಸಿ
ಮಾಣದೆ ಮತಿಯಿಂದ ತಲೆದೂಗಿ
ಅನುಭವ ಏನೆಂಬೆ ನಿನ್ನಯ ಬಲುಪ್ರತಾಪಕ್ಕೆ
ಮಾನವ ಗುಣಿಸಿ ನೆಲೆಗಾಣಬಲ್ಲನೆ
ಮೇಣು ಗಿರಿಜೇಶಗೆ ಕಾಶಿಪಟ್ಟಣದಲ್ಲಿ
ನೀ ನಿಲಿಸಿದೆ ಬ್ರಹ್ಮಹತ್ಯವ ಪಿಡಿಸಿ ಆನಂದ-
ವನವಾಸ **ವಿಜಯವಿಠಲರೇಯ** ಜಾಹ್ನವಿ ಪಡದೆ || ೪೧ ||

೩೧೨ ನಾರಾಯಣನ ನಾಮಕೆ ಇತರ ನಾಮಗಳೆಣೆಯುಂಟೆ
ತಾರತಮ್ಯದಿ ದೇವತೆಗಳೊಳಗೆ ಹಿರಿತನಕೆ ಸಮವುಂಟೆ

ಧಾರುಣಿಯೊಳಗನ್ನದಾನಕೆ ಸಮಾನವುಂಟೆ
**ಧೀರವಿಜಯವಿಠಲನ್ನ** ದ್ವಾದಶಿತಿಥಿಗೆ ಸಮವುಂಟೆ ‖ ೪೨ ‖

೩೧೩ ಭೂತಹಿತನೆಂಬು ಭ್ರಾಂತಿತತಿಗಳು ಪೇಳ್ವ
ಮಾತುಗಳೆಲ್ಲ ಕೇಳುವದಲ್ಲವೊ
ಭೂತ ಹಿಂಸನೆಂಬೊ ಮಾತು ಅನುಭವಸಿದ್ಧ
ಭೂತಳದೊಳಗೆ ಪೊಗಳುವದು ಬರಿದೆ
ಆತುರನಾಗಿ ಬೇಡಿದ ಇಷ್ಟ ಈಯದಿರೆ
ಯಾತಕಿದು ನಿನಗೆ ಕರುಣಿತನವು
ಜ್ಯೋತಿ ಹಚ್ಚಿದರೆ ಪ್ರಕಾಶವಾದರೆ ಖ-
ದ್ಯೋತನ್ನ ಉಪಕಾರ ಯಾತಕ್ಕೇನೊ
ಭೀತಿ **ಶಿರಿವಿಜಯವಿಠಲ** ನಿನ್ನ
ಕೌತುಕವೆಂಥದೊ ಎಣಿಸಿದರೆ ತಿಳಿಯದೊ ‖ ೪೩ ‖

೩೧೪ [1] ಒಂದು ಕೈಯ್ಯಲ್ಲಿ ಖಡ್ಗ ಒಂದು ಕೈಯ್ಯಲ್ಲಿ ಹಲಿಗೆ
ಅಂದವಾಗಿ ಪಿಡಿದು ದಿವಾರಾತ್ರಿಯಲ್ಲಿ
ಬಂದು ಬದಿಯಲ್ಲಿ ನಿತ್ಯ ಬಾರಾಸನನಾಗಿ
ಹಿಂದು ಮುಂದುಪದ್ರವಾಗದಂತೆ
ಇಂದಿರೇರಮಣ ಕಾಯುತ್ತಲಿರೆ ಎನಗಾವ
ಬಂಧನಗಳಿಲ್ಲ ಧನ್ಯಧನ್ಯ
ಕಂದರ್ಪನಯ್ಯ **ಸಿರಿವಿಜಯವಿಠಲರೇಯ**
ಎಂದೆಂದಿಗಾಪತ್ತು ಬರಲೀಸನೋ ‖ ೪೪ ‖

---

1 ಶಿವಮೊಗ್ಗಾದಿಂದ ಉಡುಪಿಗೆ ಹೋಗುವ ಮಾರ್ಗದಲ್ಲಿ 'ಮುಂಡಗದ್ದೆ' ಎಂಬ ಹಳ್ಳಿಯಿದೆ. ಅಲ್ಲಿ ಭೀಮರಾಯನೆಂಬ ಸಾಹುಕಾರನಿದ್ದನಂತೆ. ಯಾತ್ರೆಗೆ ಯಾರೇ ಬರಲಿ ತನ್ನ ಮನೆಗೆ ಆ ಬ್ರಾಹ್ಮಣರನ್ನು ಕರೆಸಿ ದೇವರ ಪೂಜಾದಿಗಳನ್ನು ಅವರಿಂದ ಮಾಡಿಸಿ ಅವರಿಗೆ ಬೇಕಾದಷ್ಟು ಶಕಲಾತಿ ಶಾಲು ಹಣ ಮೊದಲಾದವುಗಳನ್ನು ಕೊಟ್ಟು ಮರ್ಯಾದೆಯಿಂದ ಬೀಳ್ಕೊಡುತ್ತಿದ್ದನಂತೆ. ಅವರು ಕೆಲವು ಮೈಲುಗಳ ದೂರ ಹೋದ ಮೇಲೆ ಅವರನ್ನು ಸುಲಿಗೆ ಮಾಡಿ ಅವರಲ್ಲಿದ್ದ ಎಲ್ಲವನ್ನೂ ತನ್ನ ವಶದಲ್ಲಿದ್ದ ದರೋಡೆಕೋರರ ಮೂಲಕ ತರಿಸಿ ಒಳ್ಳೆಯ ಧನಿಕನಾಗಿದ್ದನಂತೆ.

೩೧೫ [2]ಪುರಂದರದಾಸರು ವೈಶ್ಯ ಮಾದಮ್ಮನ
ವರಕುಮಾರಕನ ಬದುಕಿಸಿದರು ಗಡ!
ಗುರುವ್ಯಾಸಮುನಿ ಭೂಪತಿಗೆ ಬಂದ ದು-
ಸ್ತರವಾದ ಕುಹುಯೋಗ ಬಿಡಿಸಿದರು ಗಡ!
ಶಿರಿನಾರಾಯಣಯೋಗಿ ವ್ಯಾಸಮುನಿಗೆ ಬಂದ
ಉರಗಬಾಧೆಯ ಕಳೆದು ಪಾಲಿಸಿದರು ಗಡ!
ಹರಿಯೆ ಈ ಕಲಿಯುಗದಿ ನಿನ್ನ ಶರಣರು ಇಂಥಾ
ಚರಿಯ ಮಾಡಿಪ್ಪರು ಆವನಾದರು ಇನಿತು
ಸ್ಮರಣೆಮಾಡಿದವಗೆ ಮನಸು ನಿರ್ಮಲಕಣೊ!
ಧರೆಯೊಳು ಈ ಮನುಜರಾಡಿದ್ದೇ ವೇದ
ನೆರೆನಂಬಿದವರಿಗೆ ರೋಗ ಹಿಂಗಳೆವುದು
ಪರಮಶುದ್ಧ ಹರಿಶರಣರ್ಗೆ ಎದುರುಂಟೆ?
**ಕರುಣಾಕರಮೂರ್ತಿ ವಿಜಯವಿಠಲ** ನಿನ್ನ
ಚರಣಸೇವಿಸುವವರ ಪಡಿದೊತ್ತು ನಾನಯ್ಯ ೧ || ೪೫ ||

---

ಒಮ್ಮೆ ಶ್ರೀಗೋಪಾಲದಾಸರಾಯರು ಉಡುಪಿಗೆ ಹೊರಡಲು ಸಿದ್ಧರಾಗಿ ಗುರುಗಳ ಅಪ್ಪಣೆ ಪಡೆದು ಬರಲು ಶ್ರೀರಾಯರಲ್ಲಿ (ವಿಜಯದಾಸರಲ್ಲಿ) ಬಂದು ನಮಸ್ಕರಿಸಿದರಂತೆ. ಆಗ ಶ್ರೀವಿಜಯಪ್ರಭುಗಳು "ಭಾಗಣ್ಣ, ಮುಂಡಗದ್ದಿಯಲ್ಲಿ ಭೀಮನೆಂಬ ದುಷ್ಟನಿದ್ದಾನೆ. ಅವನು ಯಾತ್ರಿಕರನ್ನು ಆದರಿಸಿ ಉಪಚರಿಸಿ ಬೀಳ್ಕೊಟ್ಟು ತನ್ನ ದೂತರ ಮೂಲಕ ಅವರನ್ನು ಸುಲಿಗೆ ಮಾಡುತ್ತಾನೆ. ನನಗೂ ಹಾಗೇ ಮಾಡಿದ್ದ. ಶ್ರೀವಿಜಯವಿಠಲ ನನಗೆ ತಿಳಿಯದಂತೆಯೇ ಆ ಘಾತಕರ ಒಡನೆ ಹೋರಾಡಿ ಅವರಿಂದ ನನ್ನನ್ನು ಪಾರುಮಾಡಿದ. ನೀನೂ ಆ ಘಾತಕರ ಮಧ್ಯೆ ಸಿಕ್ಕುತ್ತಿ. ಆಗ ಹೆದರಬೇಡ ಭಾಗಣ್ಣ! ಈ ಉಗಾಭೋಗವನ್ನು ಇಂದಿನಿಂದಲೇ ನಿತ್ಯಪಠನೆಗೆ ಇಟ್ಟುಕೋ ಎಂದು ಉಪದೇಶಕೊಟ್ಟರಂತೆ. ಈ ಉಗಾಭೋಗದ ಪಠನೆಯಿಂದ ಮುಂದೆ ಶ್ರೀ ಭಾಗಣ್ಣದಾಸರು ಆ ದುಷ್ಟರಿಂದ ಪಾರಾದರಂತೆ! ಅದು ಈ ಉಗಾಭೋಗ.

[2] ಚಾಗಿಯ ಕೇಶವರಾಯರು ಅಪಮೃತ್ಯುವಿಗೆ ತುತ್ತಾಗಿದ್ದಾಗ ಶ್ರೀವಿಜಯರಾಯರು ಈ ಕೆಳಗೆ ಕೊಟ್ಟಿರುವ ಹದಿಮೂರು ಉಗಾಭೋಗಗಳಿಂದ ಶ್ರೀಹರಿಯನ್ನು ಪ್ರಾರ್ಥಿಸಿ ಆತನನ್ನು ಬದುಕಿಸಿದರು.

೩೧೬ **ಪ್ರಮೋದಸಂವತ್ಸರದಲೆನ್ನವರಿಗೆ**
ರೋಮ ಕುಂದದುಕಣೊ ನೀನೊಲಿದಿರಲು
ಪ್ರಮೋದವಲ್ಲದೆ ಕ್ಲೇಶ ಲೇಶವಿಲ್ಲ
ಸ್ವಾಮಿ ಲಾಲಿಸಿ ಕೇಳೊ ಇಷ್ಟದೈವ
ಪ್ರಮಾದದಿಂಬಲಿ ಬಂದಿದ್ದ ಕಾಲಕ್ಕು
ಗೋಮಾಯುವಿನಂತೆ ಓಡಿಪೋಗುವದು
ಶ್ರೀಮನೋಹರ ನಮ್ಮ **ವಿಜಯವಿಠಲ** ನಿನ್ನ
ನಾಮ ನೆನೆದ ಮಾರ್ಕಾಂಡಮುನಿಯ ನೋಡೊ ೨ || ೮೬ ||

೩೧೭ ಕಾಲನಾಮಕ ಭಗವಂತ ನಿನ್ನಯ ಭೀತಿ
ಕಾಲನಾಮಕಳಾದ ದುರ್ಗಾಯಿಗೆ
ಕಾಲಾಖ್ಯ ಗರುಡಶೇಷರುದ್ರರಿಗೆ ದುರ್ಗೆಭಯ
ಕಾಲಯಮನಿಗೆ ಇವರ ಭಯ, ಯಮನಭೀತಿ
ಕಾಲನೆಂಬ ಇವನ ತಮ್ಮಗಾಗುವದು
ಕಾಲಮೃತ್ಯುವಿಗೆ ಈ ಕಾಲನ ಭಯ
ಕಾಲದೂತರಿಗೆ ಭಯ ಇವರಿಂದ ಕ್ಷುದ್ರ-
ಕಾಲದೇವತೆಗಳಿಗೆ ದೂತರಿಂದ ಭಯ
ಕಾಲಕಾಲಕೆ ಇರಲು ಸ್ವಾತಂತ್ರ್ಯದಲಿ ಲೇಶ-
ಕಾಲವಾದರು ನರನ ಮುಟ್ಟುವರೆ?
ಕಾಲನಿಯಾಮಕ ನಿನ್ನ ನಂಬಲು ಸರ್ವ-
ಕಾಲದಲಿ ಸುಖವುಂಟು ನೀರೋಗದಿ
**ಕಾಲದೇಶಪೂರ್ಣ ವಿಜಯವಿಠಲನೆ**
ಕಾಲಿಗೆರಗುವೆನು ಕರಪಿಡಿದು ಸಲಹಯ್ಯ ೩ || ೮೭ ||

೩೧೮ ರುದ್ರಾಂತರ್ಗತ ನಾರಸಿಂಹ ರೋಗಹರ
ಭದ್ರವಾಗಲಿ ಇವಗೆ ಇವನ ಪತ್ನಿ
ಆರ್ದ್ರಳಾಗಿ ಪಾಲ್ವವರಿದು ವಂದಿಸಳು ಸ-
ಮುದ್ರಶಾಯಿ ಇವಳ ಮಂಗಳಸೂತ್ರ

ನಿದ್ರೆಯೊಳಗಾದರು ಸ್ಥಿರವಾಗಿರಲಿ ಉ-
ಪದ್ರಗಳು ಬಂದರೆ ಪರಿಹರಿಸು
ಅದ್ರಿಧರಿಸಿ ಗೋಕುಲಕಾಯ್ದ ಕರುಣಾಸ-
ಮುದ್ರ ಆಪತ್ಕಾಲ ಬಾಂಧವನೆ
ಕ್ಷುದ್ರದೇವತೆಗೆ ಈಪರಿಶಕ್ತಿಯುಂಟೆ
ಛಿದ್ರಸಾಸಿರವಿರೆ ಕ್ಷಮಿಸಬೇಕು
ಮುದ್ರೆಧರರಪಾಲ **ವಿಜಯವಿಠಲನೆ** ದಾ-
ರಿದ್ರ್ಯಭಂಜನ ಎನಗೆ ಇದೆ ಮಾತುರ ಕೊಡೊ ೪ || ೪೮ ||

೩೧೯ ಮಂಗಳಪ್ರದ ನೀನು ನಿನ್ನ ಭಜಿಸಿದ ಜನರ
ಸಂಗದಲಿ ಇದ್ದ ಮಾನವಗೆ ಸತತ
ಮಂಗಳವಲ್ಲದೆ ಲೇಶಕ್ಲೇಶಗಳಿಲ್ಲ
ತುಂಗಮಂಗಳತರಂಗವಾರ್ಧಿಚಂದ್ರ
ಹಿಂಗಳೆದು ರೋಗವ ಹಿಂದಾಗಿ ಬ್ರಾಹ್ಮಣಗೆ
ಅಂಗ ಆರೋಗ್ಯವಾಗಲಿ ಅಂಗನೆ-
ಗಂಗಾಜನಕ ನಮ್ಮ **ವಿಜಯವಿಠಲ** ನಿನ್ನ
ಅಂಘ್ರಿಧ್ಯಾನವೆ ಸರ್ವಾರಿಷ್ಟನಾಶ ೫ || ೪೯ ||

೩೨೦ ಒಬ್ಬ ಸತಿ ಪತಿಗಾಗಿ ಮುನಿಯ ಶಾಪವ ಧರಿಸಿ
ಅಬ್ಜಬಾಂಧವನ ನಿಲಿಸಿದಳು ನೋಡೋ
ಒಬ್ಬ ಸತಿ ಪತಿಗಾಗಿ ಧರ್ಮನ ಸಭೆಸಾರಿ
ನಿಬ್ಬರದಿ ಪ್ರಾಣವನು ಪಡೆದಳು ನೋಡೋ
ಒಬ್ಬ ಸತಿ ಪತಿಗಾಗಿ ಚಿತ್ರಗುಪ್ತರಾಡಿದ
ಶಬ್ದ ಲಾಲಿಸಿ ಐದೆತನ ಪಡಿದಳೋ
ಊರ್ಬಿಯೊಳೀಪರಿ ಸತಿಯರ ಸ್ವಧರ್ಮ
ನಿರ್ಭಿಡೆಯಾಗಿದೆ ನಿನ್ನ ದಯದಿ
ಅಬ್ಜನಾಭನೆ ಇವನ ಮೇಲೆ ದಯಮಾಡು ಕರು-
ಣಾಬ್ಧಿಯೆ ಉಪೇಕ್ಷೆಮಾಡದಲೆ

ಅಬ್ಬರದೈವ **ವಿಜಯವಿಠಲರೇಯ**
ಲಬ್ಧವಾಗಲಿ ಬೇಡಿದವನ ಅಭಯವು ೬ || ೫೦ ||

೩೨೧ ಮರಿಗುಬ್ಬಿ ಬಾಯಬಿಟ್ಟಂತೆ ಬಿಡುತಲಿ ನಿಂತು
ಶಿರಗೊಡ್ಡಿ ಬೇಡಿ ಕೇಳುತಿಹಳೋ ಜೀಯ್ಯಾ
ಪರಮಪುರುಷನೆ ನೀನು ಎನ್ನೊಳು ವ್ಯಕ್ತನಾಗಿ
ಇರುತಿರಲು ತಿಳಿದು ಬಲುದೈನ್ಯದಿಂದ
ಶರಣಪೇಳುವ ಮಾತು ನಿನ್ನದೇ ಎಂದಿಗು
ಸರಿಯೆಂದು ಜ್ಞಾನಿಗಳು ಪೇಳುತಿಹರೊ
ಬರಿದಾಗಗೊಡದಿರು ಬ್ರಾಹ್ಮಣಗೆ ಬಂದ
ದುರಿತ ತರಿದಟ್ಟಿ ರೋಗಗಳ ಕಳೆಯೊ
ಮರಣರಹಿತ **ನಮ್ಮ ವಿಜಯವಿಠಲ** ನಿನ್ನ
ಸರಿದೊರೆಯ ಕಾಣೆ ರಕ್ಷಿಸುವಲ್ಲಿ ೭ || ೫೧ ||

೩೨೨ ನಿನ್ನ ಮನದೊಳಗೆ ಉಳಿಸುವೆನೆಂಬುವದು
ಘನ್ನವಾಗಿರಲಿಕ್ಕೆ ಎನ್ನೊಳಗೆ
ಇನ್ನಿತು ಪ್ರೇರಿಸಿ ನೀನೆ ನುಡಿಸಿದ್ದು
ಘನ್ನವಲ್ಲವೆ ಇದಕೆ ಸಂಶಯವಿಲ್ಲ
ಇನ್ನು ಯೋಚಿಸಲ್ಯಾಕೆ ಭಕ್ತಪಾಲಕ ಬಿರಿದು
ಅನ್ನಂತಕಾಲಕ್ಕು ನಿನ್ನದಯ್ಯಾ
ಉನ್ನಂತಮಹಿಮ **ಶಿರಿವಿಜಯವಿಠಲರೇಯ**
ಎನ್ನ ಮಾನಾಪಮಾನ ಮತ್ತಾರದಲ್ಲ ೮ || ೫೨ ||

೩೨೩ ಅಬಲೆಯ ಮಾತಿಗೆ ಮನಸು ಕರಗಿತು ನಿನ್ನ
ಅಬುಜಪಾದಕೆ ಬಿಡದೆ ಬಿನ್ನೈಸಿದೆ
ಪ್ರಬಲ ನೀನಾದಕಾರಣದಿಂದ ಚನ್ನಾಗಿ
ವಿಬುಧೇಶ ನಾನಾರೋಗವಿನಾಶನೆ
ಶುಭವೆ ಕೊಡು ಜೀಯ್ಯಾ ನಿನಗಲ್ಲದೆ ಅನ್ಯ-